ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-13 ಸಂಪುಟ:13 | ISSUE- 63 ಸಂಚಿಕೆ: 63 | PAGE- 8 ಪುಟ 8 | ಭಾನುವಾರ-13-04-2025, | RS.2/- ಬೆಲೆ 2/-

## ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ: ಸನ್ಮಾನ

ಮಲ್ಲಮ್ಮ ನುಡಿ ವಾರ್ತೆ



ಬೀದರ. ಏ. 12 :- ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆಗೈದ ತಾಲ್ಲೂಕಿನ ಕಮಠಾಣ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳನ್ನು ನಗರದ ಕರ್ನಾಟಕ ಸಾಹಿತ್ಯ ಸಂಘದಲ್ಲಿ ಶುಕ್ರವಾರ ಕರ್ನಾಟಕ ಪ್ರಜಾಶಕ್ತಿ ಸಮಿತಿ ವತಿಯಿಂದ ನಡೆದ ನಾಲ್ಕನೇ ಸರ್ವ ಧರ್ಮ ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು.

ಸಂಸದ ಸಾಗರ್ ಖಂಡ್ರೆ ಅವರು ಶಾಲು ಹೊದಿಸಿ ಸ್ಮರಣಿಕೆ ನೀಡಿ ಸತ್ಕರಿಸಿ ಪ್ರೋತ್ಸಾಹಿಸಿದರು.

ಕಮಠಾಣ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಜಿಲ್ಲೆಯ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲೇ ಅತಿ ಹೆಚ್ಚು ಶೇ 77.27 ರಷ್ಟು ಫಲಿತಾಂಶ ಬಂದಿದೆ ಎಂದು ಪ್ರಾಚಾರ್ಯೆ ಪ್ರತಿಭಾ ಡಿ. ತಿಳಿಸಿದರು.

1 ವಿದ್ಯಾರ್ಥಿ ಅಗ್ರಶ್ರೇಣಿ, 14 ಪ್ರಥಮ ದರ್ಜೆ ಹಾಗೂ 2 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ರೋಹಿಣಿ ನರಸಪ್ಪ, ದೇವಿಕಾ ಸಂಜೀವಕುಮಾರ, ಭಾಗ್ಯಶ್ರೀ ಸಂಜೀವಕುಮಾರ ಕ್ರಮವಾಗಿ ಕಾಲೇಜಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದ್ದಾರೆ ಎಂದು ಹೇಳಿದರು.

ಮಠಾಧೀಶರು, ಗಣ್ಯರು, ಸಮಿತಿಯ ಪದಾಧಿಕಾರಿಗಳು ಇದ್ದರು.

### ಏ.16 ರಂದು ಬೀದರ್ ವಿಮಾನ ನಿಲ್ದಾಣ ಉದ್ಘಾಟನೆ

## ಸಚಿವ ಈಶ್ವರ್ ಖಂಡ್ರೆ ಘೋಷಣೆ

ಮಲ್ಲಮ್ಮ ನುಡಿ ವಾರ್ತೆ



ಬೀದರ. ಏ. 12 :- 16 ರಂದು ಬೀದರ್ ವಿಮಾನ ನಿಲ್ದಾಣ ಉದ್ಘಾಟನೆಯಾಗಲಿದೆ ಎಂದು ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏಪ್ರಿಲ್ 16ರಂದು ಬೀದರ ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನಲೆಯಲ್ಲಿ ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ 2025ನೇ ಇಸವಿಯಲ್ಲಿ ಬೀದರ್ ಜಿಲ್ಲೆಯ ಅಭಿವೃದ್ಧಿಗೆ ಸುಮಾರು 2025 ಕೋಟಿ ರೂ. ಮೌಲ್ಯದ ವಿವಿಧ ಯೋಜನೆಗಳಿಗೆ ಸಿದ್ದರಾಮಯ್ಯ ಅವರ ಅಮೃತ ಹಸ್ತದಿಂದ ಶಿಲಾನ್ಯಾಸ ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳ ಉದ್ಘಾಟನೆ ಮಾಡಲಾಗುವುದು.

ಕಳೆದ ಒಂದೂವರೆ ವರ್ಷದಿಂದ ಸ್ಥಗಿತಗೊಂಡಿದ್ದ ಬೀದರ್-ಬೆಂಗಳೂರು ನಾಗರಿಕ ವಿಮಾನಯಾನ ಸೇವೆಯನ್ನು ಇದೇ ಏಪ್ರಿಲ್ 15ರಿಂದ ಪುನಾರಂಭಗೊಳಿಸಲಾಗಿದ್ದು, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಏ.16 ರಂದು ಬೀದರ್ ನಗರಕ್ಕೆ ಆಗಮಿಸಿ, ವಿಮಾನಯಾನ ಸೇವೆಗೆ ವಿಧ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ.

ಮುಖ್ಯಮಂತ್ರಿಗಳಿಂದ ಶಿಲಾನ್ಯಾಸಗೊಳ್ಳಲಿರುವ ಪ್ರಮುಖ ಕಾಮಗಾರಿಗಳು

*ಪ್ರಜಾಸೌಧ (ಜಿಲ್ಲಾಡಳಿತ ಭವನ)

*ಭಾಲ್ಕಿ ಕ್ರೀಡಾಂಗಣ

*ಭಾಲ್ಕಿ ಹೊಸ ಆಸ್ಪತ್ರೆ

*ಹೊನ್ನಿಕೇರಿ ಪರಿಸರ ಪ್ರವಾಸೋದ್ಯಮ ಯೋಜನೆ

*ನೀರಾವರಿ ಯೋಜನೆಗಳು

ಬಸವಕಲ್ಯಾಣದ ಆಧುನಿಕ ಅನುಭವ ಮಂಟಪದ ಕಾಮಗಾರಿ ಮುಂದುವರೆದಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ. ಬೀದರ್ ಜಿಲ್ಲೆಯನ್ನು ಧಾರ್ಮಿಕ, ಐತಿಹಾಸಿಕ ಹಾಗೂ ಆಧ್ಯಾತ್ಮಿಕ ತಾಣವಾಗಿ ರೂಪಿಸುವಲ್ಲಿ ಈ ಯೋಜನೆಗಳು ಮಹತ್ವಪೂರ್ಣ ಪಾತ್ರವಹಿಸಲಿವೆ.

ಏ.16ರಂದು ನಡೆಯುವ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಗಣ್ಯರು ಹಾಗೂ ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

## ಬೆನಕಟ್ಟಿಯಲ್ಲಿ ಶ್ರದ್ಧಾ ಭಕ್ತಿಯ ಹನುಮ ಜಯಂತಿ

ಮಲ್ಲಮ್ಮ ನುಡಿ ವಾರ್ತೆ



ಬಾಗಲಕೋಟೆ,ಎ.12- ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಶನಿವಾರ ಹನುಮ ಜಯಂತಿಯನ್ನು ಶ್ರದ್ಧಾ - ಭಕ್ತಿಯಿಂದ ಆಚರಿಸಲಾಯಿತು.

ಬೆಳಿಗ್ಗೆ ಮಾರುತೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕ, ತೊಟ್ಟಿಲು ಕಾರ್ಯಕ್ರಮಗಳು ನಡೆದವು. ಮಹಿಳೆಯರು, ಮಕ್ಕಳು ಅತ್ಯಂತ ಸಡಗರದಿಂದ ಹನುಮ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೂಜೆ ನೆರವೇರಿಸಿ ನೈವೇದ್ಯ ಅರ್ಪಿಸಿ ನಮನ ಸಲ್ಲಿಸಿದರು.

ನಂತರ ತೊಟ್ಟಿಲು ತೂಗುವ ಕಾರ್ಯಕ್ರಮ ನಡೆಯಿತು. ಗುಗ್ಗರಿ, ಕೊಬ್ಬರಿ ಬೆಲ್ಲ, ಪಾನಕ ಸೇವೆ ಮಾಡಲಾಗಿತ್ತು.

## ರಾಜ್ಯಪಾಲರು ಕಳಿಸಿದ ಮಸೂದೆ ಇತ್ಯರ್ಥಕ್ಕೆ ರಾಷ್ಟ್ರಪತಿಗಳಿಗೆ

# 3 ತಿಂಗಳ ಗಡುವು ವಿಧಿಸಿದ ಸುಪ್ರೀಂ ಕೋರ್ಟ್

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ: ಏ.12:ಸುಪ್ರೀಂ ಕೋರ್ಟ್ ಇದೇ ಮೊದಲ ಬಾರಿಗೆ, ರಾಷ್ಟ್ರಪತಿಗಳು ರಾಜ್ಯಪಾಲರಿಂದ ಪರಿಗಣನೆಗೆ ಕಾಯ್ದಿರಿಸಿದ ಮಸೂದೆಗಳ ಬಗ್ಗೆ ಉಲ್ಲೇಖವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಇತ್ಯರ್ಥಪಡಿಸಬೇಕೆಂದು ಸೂಚಿಸಿದೆ.

ತಮಿಳುನಾಡು ರಾಜ್ಯಪಾಲ ಆರ್ ಎನ್ ರವಿ ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಿದ 10 ಮಸೂದೆಗಳನ್ನು ಸುಪ್ರೀಂ ಕೋರ್ಟ್ ತೆರವುಗೊಳಿಸಿದ ನಾಲ್ಕು ದಿನಗಳ ನಂತರ ಮತ್ತು ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳ ಮೇಲೆ ಎಲ್ಲಾ ರಾಜ್ಯಪಾಲರು ಕಾರ್ಯನಿರ್ವಹಿಸಲು ಒಂದು ಸಮಯವನ್ನು ನಿಗದಿಪಡಿಸಿದ ನಂತರ, 415 ಪುಟಗಳ ತೀರ್ಪನಲ್ಲಿ ಸುಪ್ರೀಂ ಕೋರ್ಟ್ ತಿಳಿಸಿದೆ.

"ಗೃಹ ಸಚಿವಾಲಯ ನಿಗದಿಪಡಿಸಿದ ಕಾಲಮಿತಿಯನ್ನು ಅಳವಡಿಸಿಕೊಳ್ಳುವುದು ಸೂಕ್ತವೆಂದು ನಾವು ಪರಿಗಣಿಸುತ್ತೇವೆ ಮತ್ತು



ಉಲ್ಲೇಖವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ರಾಷ್ಟ್ರಪತಿಗಳು ರಾಜ್ಯಪಾಲರು ತಮ್ಮ ಪರಿಗಣನೆಗೆ ಕಾಯ್ದಿರಿಸಿದ ಮಸೂದೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇವೆ. ಈ ಅವಧಿಯನ್ನು ಮೀರಿ ಯಾವುದೇ ವಿಳಂಬವಾದರೆ, ಸೂಕ್ತ ಕಾರಣಗಳನ್ನು ದಾಖಲಿಸಿ ಸಂಬಂಧಪಟ್ಟ ರಾಜ್ಯ-ಕ್ಕೆ ತಿಳಿಸಬೇಕು. ರಾಜ್ಯಗಳು ಸಹ ಸಹಕರಿಸಬೇಕು ಮತ್ತು ಎದುರಾಗಬಹುದಾದ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವ ಮೂಲಕ ಸಹಕಾರವನ್ನು ವಿಸ್ತರಿಸಬೇಕು, ಕೇಂದ್ರ ಸರ್ಕಾರ ಮಾಡಿದ ಸಲಹೆಗಳನ್ನು ತ್ವರಿತವಾಗಿ ಪರಿಗಣಿಸಬೇಕು" ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ತುರ್ತು ಆರೈಕೆ ಚೇತರಿಕೆ ಕೇಂದ್ರ ಸ್ಥಾಪಿಸಲು ಆಸಕ್ತಿ ಅಭಿವ್ಯಕ್ತಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ-ಏಪ್ರಿಲ್.12: ಮಾನಸಿಕ ಆರೋಗ್ಯದಿಂದ ಬಳಲುತ್ತಿರುವ ನಿರಾಶ್ರಿತರಿಗೆ ಪತ್ತೆ ಹಚ್ಚಿ ಚಿಕಿತ್ಸೆ ಹಾಗೂ ಉಪಚಾರ ನೀಡಲು ಸರ್ಕಾರೇತರ ಸಂಸ್ಥೆಗಳು ತುರ್ತು ಆರೈಕೆ ಚೇತರಿಕೆ ಕೇಂದ್ರ (Emergency Care Recovery Centre) ಪ್ರಾರಂಭಿಸುವ ಸಲುವಾಗಿ ಆಸಕ್ತಿ ಅಭಿವ್ಯಕ್ತಿ (EOI) ಆಹ್ವಾನಿಸಲಾಗಿದೆ ಎಂದು ಬೀದರ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತಿಯುಳ್ಳ ಅರ್ಹ ಸರ್ಕಾರೇತರ ಸಂಸ್ಥೆಗಳು ದಿನಾಂಕ: 29-04-2025 ರೊಳಗಾಗಿ ಸಲ್ಲಿಸುವಂತೆ ಅವರು ತಿಳಿಸಿದ್ದಾರೆ.

## ಪತ್ನಿಯ ಮನವೊಲಿಸಲು ಬಂದ ಭಾವನನ್ನೇ ಕೊಂದ ಭಾಮೈದ





ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.12: ಜಗಳವಾಡಿಕೊಂಡು ತವರು ಮನೆ ಸೇರಿದ್ದ ಹೆಂಡತಿಯ ಮನವೊಲಿಸಲು ಬಂದ ಭಾವನನ್ನು ಭಾಮೈದುನನೇ ಥಳಿಸಿ ಚಾಕುವಿನಿಂದ ಇರಿದು ಕೊಂದಿರುವ ಘಟನೆ ನಗರದಲ್ಲಿ ನಡೆದಿದೆ.

ಆನಂದ್ (24) ಕೊಲೆಯಾದ ವ್ಯಕ್ತಿ ಎಂದು ಗುರುತಿಸಲಾಗಿದೆ. ಆರೋಪಿ ಟೋನಿಯನ್ನು ಪೊಲೀಸರು ಬಂಧಿಸಿದ್ದಾರೆ. ಕಳೆದ ಎರಡು ವರ್ಷದ ಹಿಂದೆ ಗಾಜಿಪುರದ ಸ್ನೇಹಾ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗಿದ್ದ ಆನಂದ ಆರಂಭದಲ್ಲಿ ಸಂತೋಷವಾಗಿದ್ದರು. ಆದರೆ ಕಳೆದ 2 ತಿಂಗಳ ಹಿಂದೆ ಗಂಡ ಹೆಂಡತಿಯ ಮಧ್ಯೆ ಜಗಳವಾಗಿದೆ. ಕೋಪಗೊಂಡ ಸ್ನೇಹಾ ತವರು ಮನೆ ಸೇರಿದ್ದಳು.

ಆನಂದ್ ಅವರ ಅಣ್ಣನ ಮದುವೆ ನಿಶ್ಚಯವಾಗಿದ್ದರಿಂದ ಮನೆಗೆ ವಾಪಾಸ್ ಬರುವಂತೆ ಸ್ನೇಹಾಳನ್ನು ಕರೆದಿದ್ದರೂ ಬಂದಿರಲಿಲ್ಲ.

ಹಾಗಾಗಿ ಆನಂದ್ ಅವರೇ ಪತ್ನಿಯನ್ನು ಕರೆದುಕೊಂಡು ಬರಲು ಅವರ ಮನೆಗೆ ಹೋಗಿದ್ದಾನೆ.

ಆ ವೇಳೆ ಸ್ನೇಹಾಳ ಸಹೋದರ ಟೋನಿ ಮತ್ತು ಆತನ ಸ್ನೇಹಿತರು ಸೇರಿ ಆನಂದ್ ಮೇಲೆರಗಿ ಮನಬಂದಂತೆ ಥಳಿಸಿ ನಂತರ ಚಾಕುವಿನಿಂದ ಇರಿದಿದ್ದಾರೆ. ತೀವ್ರವಾಗಿ ಗಾಯಗೊಂಡ ಆನಂದನನ್ನು ತಕ್ಷಣ ಕಲಬುರಗಿಯ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಆದರೆ ಚಿಕಿತ್ಸೆ ಫಲಿಸದೇ ಆತ ಇಂದು ಬೆಳಗಿನ ಜಾವ ಸಾವಿಗೀಡಾಗಿದ್ದಾನೆ.

ಈ ಸಂಬಂಧ ಬ್ರಹ್ಮಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಟೋನಿಯನ್ನು ಬಂಧಿಸಿ ತನಿಖೆ ಮುಂದುವರೆಸಿದ್ದಾರೆ.

## ಮೆಡಿಕಲ್ ಅಂಗಡಿಯಲ್ಲಿ ಅಗ್ನಿ ದುರಂತ: ಲಕ್ಷಾಂತರ ರೂ ನಷ್ಟ

ಮಲ್ಲಮ್ಮ ನುಡಿ ವಾರ್ತೆ



ಬೀದರ.ಏ.12: ಹುಲಸೂರ್ ಪಟ್ಟಣದ ಗಾಂಧಿವೃತ್ತದಲ್ಲಿರುವ ಮೆಡಿಕಲ್ ಅಂಗಡಿಯಲ್ಲಿ ಶುಕ್ರವಾರ (ಎ.12) ತಡರಾತ್ರಿ ಶಾರ್ಟ್ ಸರ್ಕಿಟ್ ನಿಂದ ಬೆಂಕಿ ಅವಘಡ ಸಂಭವಿಸಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ಔಷಧ ಮತ್ತು ನಗದು ಹಣ ಸುಟ್ಟು ಕರಕಲಾಗಿದೆ.

ರಾತ್ರಿ 1 ರ ಸುಮಾರಿಗೆ ಬೆಂಕಿ ಹತ್ತಿಕೊಂಡಿದ್ದು, ಸುತ್ತಲಿನ ಜನ ಹೊಗೆಯನ್ನು ಗಮನಿಸಿ ಅಂಗಡಿ ಮಾಲೀಕರಿಗೆ ಮಾಹಿತಿ ನೀಡಿದ್ದಾರೆ.

ನೋಡ ನೋಡುತ್ತಲೆ ಬೆಂಕಿ ಇಡೀ ಅಂಗಡಿಯನ್ನು ಆವರಿಸಿಕೊಂಡಿತು. ಕೆಲವರು ಶೆಟರ್ ತೆಗೆದು, ಬಕೆಟ್ ನೀರಿನಿಂದ ಬೆಂಕಿಯನ್ನು ನಂದಿಸಲು ಯತ್ನಿಸಿದರಾದರೂ ಬೆಂಕಿಯ ತೀವ್ರತೆ ಕಡಿಮೆಯಾಗಲಿಲ್ಲ. ಹೆಚ್ಚಿನ ಅವಘಡ ಸಂಭವಿಸದಂತೆ ಈ ವೇಳೆ ನೆರೆಯ ಐದಾರು ಅಂಗಡಿಗಳಲ್ಲಿನ ಸಾಮಗ್ರಿಗಳು ತೆಗೆದು ಸಹಕಾರ ನೀಡಿದರು.

ನಂತರ ಅಗ್ನಿ ಶಾಮಕ ಸಿಬ್ಬಂದಿಗಳು ಆಗಮಿಸಿ ಬೆಂಕಿ ನಂದಿಸಿದ್ದಾರೆ. ಆದರೆ, ಆ ಹೊತ್ತಿಗೆ ಅಂಗಡಿಯಲ್ಲಿದ್ದ ಮೆಡಿಸಿನ್, ಎರಡು ಫ್ರೀಜ್, ಕುರ್ಚಿ ಟೇಬಲ್ ಹಾಗು ನಗದು ಹಣ ಸುಟ್ಟು ಕರಕಲಾಗಿದ್ದು, ಸುಮಾರು ಐದಾರು ಲಕ್ಷ ರೂಪಾಯಿ ನಷ್ಟ ಆಗಿರುವುದಾಗಿ ಪ್ರಾಥಮಿಕ ಮಾಹಿತಿಯಿಂದ ತಿಳಿದು ಬಂದಿದೆ.

## ಭಾರತದ ಮೇಲಿನ ದ್ವೇಷಕ್ಕೆ ಮುಂಬೈ ದಾಳಿಗೆ ಸಂಚು

ಮಲ್ಲಮ್ಮ ನುಡಿ ವಾರ್ತೆ



ನವದೆಹಲಿ,ಏ.12: ಸೇನಾ ಸಮವಸ್ತ್ರದ ಮೇಲಿನ ಗೀಳು, ಭಾರತದ ಮೇಲಿನ ದ್ವೇಷವೇ ಮುಂಬೈ ದಾಳಿಯ ಸಂಚಿಗೆ ಕಾರಣ ಎನ್ನುವುದು ಸೇರಿದಂತೆ ರಾಷ್ಟ್ರೀಯ ತನಿಖಾ ತಂಡದ ವಿಚಾರಣೆ ವೇಳೆ ಉಗ್ರ ತಹವ್ವೂರ್ ರಾಣಾ ಕೆಲ ಆಘಾತಕಾರಿ ಮಾಹಿತಿ ಬಹಿರಂಗ ಪಡಿಸಿದ್ದಾನೆ.

2008ರ ಮುಂಬೈ ಭಯೋತ್ಪಾದಕ ದಾಳಿಯ ಪ್ರಮುಖ ಅಪರಾಧಿ ತಹವ್ವೂರ್ ರಾಣಾ ಅವರನ್ನು ಅಮೆರಿಕದಿಂದ ಗಡೀಪಾರು ಮಾಡಿದ ನಂತರ ಭಾರತಕ್ಕೆ ಕರೆತರಲಾಗಿದೆ. ರಾಷ್ಟ್ರೀಯ ತನಿಖಾ ಸಂಸ್ಥೆ ರಾಣಾನ ವಿಚಾರಣೆ ಆರಂಭಿಸಿದ್ದು ಆರಂಭಿಕ ವಿಚಾರಣೆಯ ಸುತ್ತಿನಲ್ಲಿ ಕೆಲವು ಆಘಾತಕಾರಿ ವಿಷಯ ಬಹಿರಂಗ ಪಡಿಸಿದ್ದು ತನಿಖಾಧಿಕಾರಿಗಳು ಬೆಚ್ಚಿ ಬಿದ್ದಿದ್ದಾರೆ.

ಸಾಜಿದ್ ಮಿರ್, ಮೇಜರ್ ಇಕ್ಬಾಲ್ ಮತ್ತು ಇತರ ಭಯೋತ್ಪಾದಕರನ್ನು ಭೇಟಿ ಮಾಡಲು, ಸೇನಾ ಸಮವಸ್ತ್ರ ಧರಿಸುತ್ತಿದ್ದರು. ನಿವೃತ್ತಿಯ ನಂತರವೂ, ಪಾಕಿಸ್ತಾನಿ ಸೇನೆ ಮತ್ತು ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್ -ಐಎಸ್ಐ ನೊಂದಿಗೆ ಸಂಪರ್ಕ ಹೊಂದಿದ್ದ ಲಷ್ಕರ್-ಎ-ತೈಬಾ -ಎಲ್ಇಟಿ ಶಿಬಿರಗಳು ಮತ್ತು ಹರ್ಕತ್-ಉಲ್-ಜಿಹಾದ್-ಅಲ್-ಇಸ್ಲಾಮಿ -ಹುಜಿ ಅಡಿಯಲ್ಲಿನ ಪ್ರದೇಶಗಳಲ್ಲಿ ಕಾಣಿಸಿಕೊಂಡಿದ್ದಾಗಿಯೂ ಮಾಹಿತಿ

(2ನೇ ಪುಟ ನೋಡಿ...)

## ದೇಶಾದ್ಯಂತ ಯುಪಿಐ ಸೇವೆಗಳಲ್ಲಿ ವ್ಯತ್ಯಯ : ಬ್ಯಾಂಕಿಂಗ್ ಸೇವೆಗಳ ಮೇಲೂ ಪರಿಣಾಮ

ಮಲ್ಲಮ್ಮ ನುಡಿ ವಾರ್ತೆ




ನವದೆಹಲಿ:ಏ.12: ದೇಶಾದ್ಯಂತ ಹಲವು ನಗರಗಳಲ್ಲಿಂದು ಯುಪಿಐ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ.

ಗೂಗಲ್‌ಪೇ, ಫೋನ್‌ಪೇ , ಪೇಟಿಎಂ ಸೇರಿದಂತೆ ಹಲವಾರು ಯುಪಿಐ ಸಂಯೋಜಿತ ಅಪ್ಲಿಕೇಶನ್‌ಗಳಲ್ಲಿ ಏಕಕಾಲಕ್ಕೆ ಸಮಸ್ಯೆಯಾಗಿದೆ. ಇದರಿಂದ ಗ್ರಾಹಕರು ಬೇರೆಯವರಿಗೆ ಹಣ ಕಳುಹಿಸಲು ಸಾಧ್ಯವಾಗದೇ ಪರದಾಡಿದ್ದಾರೆ. ಯಾವ ಕಾರಣ-ಕ್ಕೆ ಈ ಸಮಸ್ಯೆ ಎದುರಾಗಿದೆ ಎನ್ನುವುದು ತಿಳಿದು ಬಂದಿಲ್ಲ.

ಸೋಷಿಯಲ್ ಮೀಡಿಯಾದಲ್ಲಿ ಟ್ರೆಂಡ್:

ಶನಿವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಏಕಕಾಲಕ್ಕೆ ದೇಶಾದ್ಯಂತ ಯುಪಿಐ ಸೇವೆಗಳಲ್ಲಿ ಸಮಸ್ಯೆಯಾಗಿದೆ, ಡೌನ್‌ಡೆಕ್ಟರ್ ಕೂಡ ಇದನ್ನು ವರದಿ ಮಾಡಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದ ಗ್ರಾಹಕರು 5 ನಿಮಿಷವಾದ್ರೂ ಪೂರ್ಣಗೊಳ್ಳದೇ ಇರುವುದು ಕಂಡುಬಂದಾಗ ಸಮಸ್ಯೆಯಾಗಿರುವುದು ಗೊತ್ತಾಗಿದೆ. ಬಳಿಕ ಬಹಳಷ್ಟು ಮಂದಿ ತಮ್ಮ ಸೋಷಿಯಲ್ ಮೀಡಿಯಾಗಳಲ್ಲಿ ಪೋಸ್ಟ್ ಹಾಕಿದ್ದಾರೆ. #ಯುಪಿಐಡೌನ್ ಎನ್ನುವ ಹ್ಯಾಶ್‌ಟ್ಯಾಗ್‌ನೊಂದಿಗೆ ಎಕ್ಸ್ ಖಾತೆಯಲ್ಲಿ ಸ್ಕ್ರೀನ್‌ಶಾಟ್ ಅನ್ನು ಪೋಸ್ಟ್ ಮಾಡಿದ್ದಾರೆ. ಇದು ಸಮಸ್ಯೆಯಾದ ಕೆಲವೇ ನಿಮಿಷಗಳಲ್ಲಿ ಟ್ರೆಂಡಿಂಗ್ ಆಗಿದೆ.

ಬ್ಯಾಂಕಿಂಗ್ ಸೇವೆಗಳಲ್ಲೂ ವ್ಯತ್ಯಯ:

ಎಸ್‌ಬಿಐ, ಗೂಗಲ್‌ಪೇ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕಿಂಗ್‌ನ ಯುಪಿಐ ಸೇವೆಗಳ (2ನೇ ಪುಟ ನೋಡಿ...)

# ಶಿವಪುರ ಹನುಮಾನ ದೇವಸ್ಥಾನಕ್ಕೆ ಸಾಕಷ್ಟು ಅಭಿವೃದ್ಧಿ ಪಡಿಸಲಾಗಿದೆ:ಅಭಿಷೇಕ ಪಾಟೀಲ

ಮಲ್ಲಮ್ಮ ನುಡಿ ವಾರ್ತೆ



ಹುಮನಾಬಾದ್. ಕೊಳಚೆ ಪ್ರದೇಶದಲ್ಲಿರುವ ಶಿವಪುರ ಹನುಮಾನ ದೇವಸ್ಥಾನವನ್ನು ನಮ್ಮ ತಂದೆ ರಾಜಶೇಖರ ಪಾಟೀಲ ರವರು ಸಾಕಷ್ಟು ಅಭಿವೃದ್ಧಿ ಪಡಿಸಿದ್ದಾರೆ ಎಂದು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ ತಿಳಿಸಿದ್ದಾರೆ.

ಶನಿವಾರ ಹನುಮಾನ ಜನ್ಮದಿನೋತ್ಸವ ಇರುವುದರ ನಿಮಿತ್ಯ ದೇವಸ್ಥಾನ ಕ್ಕೆ ಅಗಮಿಸಿ ದರುಶನ ಪಡೆದರು. ಸಮಿತಿಯವರು ಸನ್ಮಾನಿಸಿದರು. ದೇವಸ್ಥಾನ ಕ್ಕೆ ಸುತ್ತುಗೊಡೆ, ಪುಜಾರಿ ಕೊಠಡಿ, ಕೊಳವೆ ಬಾವಿ, 6000 ಸ್ಕಾಯರ್ ಫೀಟ್ ಅಧಿಕ ಸಿಸಿ ಬೆಡ್, ಗೋಪುರದ ಕಾಮಗಾರಿ. ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಮಾಡಿಸಲಾಗಿದೆ. ದೇವಸ್ಥಾನ ದ ಮಹಾದ್ವಾರ ಕಾಮಗಾರಿ ಅತಿ ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು. ಈ ಸಂದರ್ಬದಲ್ಲಿ, ಸಮಿತಿಯ ಉಪಾಧ್ಯಕ್ಷ ಜಗನ್ನಾಥರಾವ ಧುಮಾಳೆ, ಕಾರ್ಯದರ್ಶಿ ರಮೇಶರಡ್ಡಿ ಉಸ್ತೇಲಿ, ಸದಸ್ಯರಾದ ಜೈವಂತರಡ್ಡಿ ಮುಡಬಿ, ರಾಮರಡ್ಡಿ ಕಂಚಟಿ, ಮಹೊನರಡ್ಡಿ ಮುಡಬಿ, ರಮೇಶ ಜಾಧವ, ಸಂತೋಷ ಕಾಳಮದ್ರಗಿ, ವಿಜಯಕುಮಾರ ವಾಡೆಕರ್, ಶಿವರಾಮ ಜಾಧವ, ವಿನಾಯಕ ಧುಮಾಳೆ, ಪೆದ್ದಾರಡ್ಡಿ ಮುಡಬಿ, ಸೇರಿದಂತೆ ಇತರರಿದ್ದರು.

## ಒಂದನೆ ಪುಟದಿಂದ...

# ಭಾರತದ ಮೇಲಿನ ದ್ವೇಷಕ್ಕೆ ಮುಂಬೈ ದಾಳಿಗೆ ಸಂಚು

ಹಂಚಿಕೊಂಡಿದ್ದಾರೆ

ರಾಣಾ ಪ್ರಸ್ತುತ 18 ದಿನಗಳ ಕಾಲ ಎನ್ ಐಎ ವಶದಲ್ಲಿದ್ದು ಈ ಅವಧಿಯಲ್ಲಿ ಪಾಕಿಸ್ತಾನದ ಐಎಸ್ಐ ಜೊತೆಗಿನ ಸಂಪರ್ಕ, 26/11 ಮುಂಬೈ ದಾಳಿಯಲ್ಲಿ ಭಾಗಿಯಾಗಿರುವ ಇತರ ಸಹ-ಸಂಚುಕೋರರು ಮತ್ತು ಇತರ ಭಾರತೀಯ ನಗರಗಳನ್ನು ಗುರಿಯಾಗಿಸುವ ಸಂಭಾವ್ಯ ಸಂಚುಗಳ ಬಗ್ಗೆ ಆತನನ್ನು ವಿಚಾರಣೆ ನಡೆಸಲು ತನಿಖಾಧಿಕಾರಿಗಳು ಸಾಲು ಸಾಲು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ತೀವ್ರ ವಿಚಾರಣೆಗೆ ಗುರಿಪಡಿಸಿದ್ದಾರೆ

ರಾಣಾ ಹೇಳಿಕೆಗಳಿಂದ ಪ್ರಮುಖ ದೃಢೀಕರಣವೆಂದರೆ ಅವರು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಚಿಚ್‌ಬುಟ್ನಿಯಲ್ಲಿ ಜನಿಸಿದ್ದು ರಾಣಾ ಪಾಕಿಸ್ತಾನ ಮಿಲಿಟರಿ ಸಮವಸ್ತ್ರದ ಬಗ್ಗೆ ಹೆಚ್ಚಿನ ಗೀಳನ್ನು ಹೊಂದಿದ್ದ ಜೊತೆಗೆ ಬಲವಾದ ಭಾರತ ವಿರೋಧಿ ಭಾವನೆಗಳು ಭಾರತದ ಮೇಲೆ ದಾಳಿಗೆ ಪ್ರಮುಖ ಕಾರಣ ಎನ್ನುವ ಸಂಗತಿ ಬಹಲಾಗಿದೆ

ವಿಚಾರಣೆಯ ಸಮಯದಲ್ಲಿ, ರಾಣಾ ಅವರ ತಂದೆ ರಾಣಾ ವಾಲಿ ಮೊಹಮ್ಮದ್ ಶಾಲಾ ಪ್ರಾಂಶುಪಾಲರು ಎಂದು ಬಹಿರಂಗಪಡಿಸಿದ್ದ ಅವರಿಗೆ ಇಬ್ಬರು ಸಹೋದರರಿದ್ದಾರೆ. ಅವರಲ್ಲಿ ಒಬ್ಬರು ಪಾಕಿಸ್ತಾನಿ ಸೇನೆಯಲ್ಲಿ ಮನೋವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದರೆ, ಇನ್ನೊಬ್ಬರು ವೃತ್ತಿಯಲ್ಲಿ ಪತ್ರಕರ್ತರಾಗಿದ್ದಾರೆ.

ರಾಣಾ ಪಾಕಿಸ್ತಾನದ ಹಸನ್ ಅಬ್ದಲ್‌ನಲ್ಲಿರುವ ಕೆಡೆಟ್ ಕಾಲೇಜಿನಲ್ಲಿ ಶಿಕ್ಷಣ ಪಡೆದರು, ಅಲ್ಲಿ ಅವರು ಮುಂಬೈ ದಾಳಿಯ ಪ್ರಮುಖ ಸಂಚುಕೋರರಲ್ಲಿ ಒಬ್ಬರಾದ ಡೇವಿಡ್ ಕೋಲ್ಮನ್ ಹೆಡ್ಲಿಯನ್ನು ಭೇಟಿಯಾಗಿದ್ದ ಗಮನಾರ್ಹವಾಗಿ, ಈ ಶಾಲೆಯನ್ನು ಪಾಕಿಸ್ತಾನದ ಮಾಜಿ ಅಧ್ಯಕ್ಷ ಜನರಲ್ ಅಯೂಬ್ ಖಾನ್ ಸ್ಥಾಪಿಸಿದರು ಎಂದು ಹೇಳಲಾಗಿದೆ.

ರಾಣಾ ಅವರ ಪತ್ನಿಯೂ ವೈದ್ಯಕೀಯ ವೈದ್ಯೆ. ಈ ದಂಪತಿ 1997 ರಲ್ಲಿ ಕೆನಡಾಕ್ಕೆ ತೆರಳಿದರು. ಕೆನಡಾದಲ್ಲಿ, ರಾಣಾ ವಲಸೆ ಸೇವಾ ಕಂಪನಿ ಮತ್ತು ಹಲಾಲ್ ಕಸಾಯಿಖಾನೆ ವ್ಯವಹಾರವನ್ನು ಸ್ಥಾಪಿಸಿದರು.

ನಿಗೂಢ ವ್ಯಕ್ತಿ 2006ರಲ್ಲಿ ಡೇವಿಡ್ ಹೆಡ್ಲಿಯನ್ನು ಮುಂಬೈಗೆ ಸ್ವಾಗತಿಸಿದ್ದರು ಮತ್ತು ಆ ಸಮಯದಲ್ಲಿ ರಾಣಾ ಅವರ ಆಪ್ತ ಸಹಚರ ಎಂದು ಪರಿಗಣಿಸಲಾಗಿತ್ತು. ಭದ್ರತಾ ಕಾರಣಗಳಿಗಾಗಿ ಈ ಸಾಕ್ಷಿಯ ಗುರುತು ಬಹಿರಂಗಪಡಿಸಲಾಗಿಲ್ಲ.

ರಾಣಾ ಅವರ ವಿಚಾರಣೆಯು ಮುಂಬೈ ದಾಳಿಯ ಹಿಂದಿನ ವ್ಯಾಪಕ ಪಿತೂರಿಯ ಬಗ್ಗೆ ಮತ್ತಷ್ಟು ಬೆಳಕು ಚೆಲ್ಲುವ ಮತ್ತು ಭಯೋತ್ಪಾದನಾ ಸಂಚಿಗೆ ಹೆಚ್ಚುವರಿ ಅಂತರರಾಷ್ಟ್ರೀಯ ಸಂಪರ್ಕಗಳನ್ನು ಬಹಿರಂಗಪಡಿಸುವ ನಿರೀಕ್ಷೆಯಿದೆ.

# ದೇಶಾದ್ಯಂತ ಯುಪಿಐ ಸೇವೆಗಳಲ್ಲಿ ವ್ಯತ್ಯಯ : ಬ್ಯಾಂಕಿಂಗ್ ಸೇವೆಗಳ ಮೇಲೂ ಪರಿಣಾಮ

ಮೇಲೂ ಪರಿಣಾಮ ಬೀರಿದೆ ಎಂದು ಡೌನ್‌ಡೆಕ್ಟರ್ ತನ್ನ ಪೋರ್ಟಲ್‌ನಲ್ಲಿ ಮಾಹಿತಿ ನೀಡಿದೆ. ಗಕಖ ಭಾರತದಲ್ಲಿ ಜನಪ್ರಿಯ ಸೇವೆಯಾಗಿದೆ, ಇದರ ಸಹಾಯದಿಂದ ಬಳಕೆದಾರರು ಟೀ ಅಂಗಡಿಗಳಿಂದ ರೈಲ್ವೇ ಟಿಕೆಟ್ ಬುಕಿಂಗ್ ವರೆಗೂ ಪಾವತಿ ಮಾಡ್ತಾರೆ. ಹೀಗಿರುವಾಗ ಸೇವೆ ಏಕಕಾಲಕ್ಕೆ ಸ್ಥಗಿ-ತಗೊಂಡರೆ ಸಮಸ್ಯೆ ಎದುರಿಸಬೇಕಾಗುತ್ತದೆ ಅನ್ನೋದು ಸುಳ್ಳಲ್ಲ.

ತಾಂತ್ರಿಕ ಸಮಸ್ಯೆ ಕಾರಣ: ಎನ್‌ಪಿಸಿಐ

ಇನ್ನೂ ಇದಕ್ಕೆ ಪ್ರತಿಕ್ರಿಯಿಸಿ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ನ್ಯಾಷನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ, ಮಧ್ಯಂತರ ತಾಂತ್ರಿಕ ಸಮಸ್ಯೆಗಳಿಂದ ಯುಪಿಐ ವಹಿವಾಟಿನಲ್ಲಿ ಸಮಸ್ಯೆಯಾಗಿದೆ. ಈ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದೆ.

# ಇಂದಿನಿಂದ ಬಾವಗಿ ಗ್ರಾಮದ ಭದ್ರೇಶ್ವರ ಜಾತ್ರಾ ಮಹೋತ್ಸವ





ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 12 :- ಬೀದರ್ ತಾಲೂಕಿನ ಸುಕ್ಷೇತ್ರ ಬಾವಗಿ ಗ್ರಾಮದ ಪವಾಡ ಪುರುಷ ಶೀಗುರು ಭದ್ರೇಶ್ವರ ಜಾತ್ರಾ ಮಹೋತ್ಸವ ಇಂದಿನಿಂದ ಮೂರು ದಿನ ಅದ್ದೂರಿಯಾಗಿ ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 9 ಗಂಟೆಗೆ ವೇದ ವಾದ್ಯಾಗಳೊಂದಿಗೆ ಗುರು ಭದ್ರೇಶ್ವರ ಗದ್ದುಗೆಗೆ ಮಾಹಾರುದ್ರ ಅಭಿಷೇಕ ಸಾಂಯಕಾಲ 5. ಗುರುಗಳ ಪಾದ ಪೂಜೆ ನಂತರ ಜಾತ್ರಾ ಮಹೋತ್ಸವ ಉದ್ಘಾಟನೆ ಡಾ ಶೈಲೆಂದ್ರ ಬೆಲ್ದಾಳೆ ಶಾಸಕರು ಬೀದರ ದಕ್ಷಿಣ, ದ್ವನಿ ಸುರುಳಿ ಬಿಡುಗಡೆ ಬಂಡೆಪ್ಪ ಖಾಶೆಂಪೂರ ಮಾಜಿ ಸಚಿವರು ನಡೆಯಲಿದ್ದು,

14 ರಂದು ಬೆಳಿಗ್ಗೆ 9 ಗಂಟೆಗೆ ಅಗ್ನಿ ಬಸವಣ್ಣನಿಗೆ ಕುಂಭ ಅಭಿಷೇಕ ನಂತರ ಅಗ್ನಿ ಪೂಜೆ ಹಾಗೂ ಧ್ವಜಾರೋಹಣ ಸಾಂಯಕಾಲ 6 ಗಂಟೆಗೆ ಸಾಂಸ್ಕೃತಿಕ ಸಂಜೆ ನಂತರ ರಾತ್ರಿ 10 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ, ಸಂಗೀತ ರಸಮಂಜರಿ,

15 ನಸುಕಿನ ಜಾವ 6 ಗಂಟೆಗೆ ಅಗ್ನಿ ತುಳಿಯುವುದು ನಂತರ ಮಾಹಾ ಪ್ರಸಾದ್ ರಾತ್ರಿ 10 ಗಂಟೆಗೆ ಮಹಾ ರಥೋತ್ಸವ ಇದೆ.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದುಕೊಳ್ಳಬೇಕು ಎಂದು ಶ್ರೀ ಗುರು ಭದ್ರೇಶ್ವರ ಸಂಸ್ಥಾನದ ವೇದಮೂರ್ತಿ ಭದ್ರಯ್ಯ ಸ್ವಾಮಿ, ಶಾಂತಕುಮಾರ್ ಸ್ವಾಮಿ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮನಹಳ್ಳಿ ಬಳಿ ಅಪಘಾತ- ಮಹಿಳೆ ಸೇರಿ ಇಬ್ಬರು ಸಾವು

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.12-ಆಲಮಟ್ಟಿ ಸಮೀಪದ ಮನಹಳ್ಳಿ ಕ್ರಾಸ್ ಬಳಿ ಶನಿವಾರ ಸಾಯಂಕಾಲ ನಡೆದ ರಸ್ತೆ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ.

ಮೃತರನ್ನು ಬಾಗಲಕೋಟೆ ತಾಲೂಕಿನ ಮನಹಳ್ಳಿಯ ಶಾಂತವ್ವ ಗಿರಿಯಪ್ಪ ಗೌಡರ(65) ಹಾಗೂ ವಿಜಯಪುರ ಜಿಲ್ಲೆಯ ಕೋಲಾರ ತಾಲೂಕಿನ ತಡಲಗಿ ಗ್ರಾಮದ ಮಹೇಶ ಶರಣಪ್ಪ ದಿನ್ನಿ(26) ಎಂದು ಗುರುತಿಸಲಾಗಿದೆ.

ಮನಹಳ್ಳಿಯಿಂದ ಆಲಮಟ್ಟಿಗೆ ಸಂತೆಗೆ ಹೊರಟಿದ್ದ ಪಾದಚಾರಿ ಶಾಂತವ್ವಳಿಗೆ ಬೇವಿನಮಟ್ಟಿ ಗ್ರಾಮದಿಂದ ತನ್ನೂರಿಗೆ ಬೈಕ್ ಮೇಲೆ ಹೊರಟಿದ್ದ ಮಹೇಶ ಹಿಂದಿನಿಂದ ಬೈಕ್ ಡಿಕ್ಕಿ ಹೊಡೆಸಿ ಕೆಳಗೆ ಬಿದ್ದು ತಲೆಗೆ ಪೆಟ್ಟಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಮಹಿಳೆ ಶಾಂತವ್ವ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಅಸುನೀಗಿದ್ದಾಳೆ.

ಸ್ಥಳಕ್ಕೆ ಬಾಗಲಕೋಟೆ ಗ್ರಾಮೀಣ ಠಾಣೆಯ ಪಿಎಸ್ ಐ ಶರಣಬಸಪ್ಪ ಸಂಗಳದ, ಹವಾಲ್ದಾರ ಪಿ.ವಾಯ್.ಸೋರಕಟ್ಟಿ ಭೇಟಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಗುರುಭಕ್ತಿಯೊಂದಿಗೆ ಮನ ಶುದ್ಧಿ ಮಾಡಿಕೊಳ್ಳಿ : ಮಹಾದೇವ ಶ್ರೀಗಳು



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಇಂದಿನ ಮುಂದೊರೆದ ಯುಗದಲ್ಲಿ ಯುವಕರು, ಯುವತಿಯರು ಒಳ್ಳೆಯ ಸಂಸ್ಕಾರದೊಂದಿಗೆ ಉತ್ತಮ ಬದುಕು ರೂಪಿಸಿಕೊಳ್ಳಬೇಕು,ಗ ುರುಭಕ್ತಿಯೊಂದಿಗೆ ಮನಶುದ್ಧಿ ಮಾಡಿಕೊಳ್ಳಿ ಎಂದು ಕುಕನೂರು ಅನ್ನದಾನೀಶ್ವರ ಶಾಖಾ ಮಠದ ಡಾ. ಮಹಾದೇವ ಸ್ವಾಮೀಜಿ ಹೇಳಿದರು.

ಕುಕನೂರ ತಳಕಲ್ ಗ್ರಾಮದ ಶ್ರೀ ಅರಳಬೆಂಚಿ ಉಡುರಾಜಮುಖಿ (ಉಡಚಮ್ಮ) ದೇವಿಯ 20ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ 285 ನೇ ಮಾಸಿಕ ಶಿವಾನುಭವ ಅಂಗವಾಗಿ ಯಲಬುರ್ಗಾ ಶ್ರೀಧರಮುರುಡಿಮಠದ ಬಸವಲಿಂಗೇಶ್ವರ ಸ್ವಾಮಿಗಳ ತುಲಾಭಾರ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದರು.

ನಂತರದಲ್ಲಿ ಸಿಂಧನೂರು ತಾಲೂಕಿನ ಉಡ ಗ್ರಾಮದ ಸೂಫಿ, ಸಂತ ತಾತನವರಾದ ಖಾದರ್ ಬಾಷಾರವರು ಮಾತನಾಡಿ ಮನುಷ್ಯ ತನ್ನ ನೋವು ಸಂಕಟಗಳನ್ನು ಪರಿಹರಿಸಿಕೊಳ್ಳಲು ಸತ್ಸಂಗದಲ್ಲಿ ತೊಡಗಬೇಕು,ದೇವನ,ಅಲ್ಲಾಹನ ನಾಮ ಸ್ಮರಣೆ,ಗುರುಗಳಲ್ಲಿ ಭಕ್ತಿ, ಭಾವದಿಂದ ನಡೆದು ಮನಸ್ಸು ಶುದ್ಧವಾಗಿಟ್ಟುಕೊಂಡಾಗ ಮಾತ್ರ ಜೀವನ ಸಾರ್ಥಕಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಈ ವೇಳೆ ದಿವ್ಯ ಸಾನಿಧ್ಯವಹಿಸಿದ ಯಲಬುರ್ಗಾ ಶ್ರೀಧರಮುರಡಿಮಠದ ಶ್ರೀಗಳು ಮಾತನಾಡಿ ಭಗವಂತನಮಗೆ ಸಿರಿವಂತಿಕೆಯಲ್ಲಿ ಸಮಾಜಮುಖಿ ಕಾರ್ಯಗಳಿಗೆ ಕೈ ಜೋಡಿಸಿ, ಯುವಕರು ಜೀವನವನ್ನು ಒಳ್ಳೆಯ ಕಾರ್ಯಗಳನ್ನು ಮಾಡಲಿಕ್ಕೆ ಬಳಸಿ, ಗುರುಗಳ ಅನುಭವ ನುಡಿಗಳನ್ನು ಕೇಳಿ ಜನ್ಮ ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಒಬ್ಬ ಮನುಷ್ಯ ಬಂಗಾರ ಗಳಿಸಿದರೇ ನಾಡಿನಲ್ಲಿ ದೊಡ್ಡವನಾಗುವುದಿಲ್ಲಾ, ಬಂಗಾರದಂತಹ ಜೀವನ ನಡೆಸಿದಾಗ ದೊಡ್ಡವನಾಗುತ್ತಾನೆ ಎಂದು ಕಿವಿ ಮಾತು ಹೇಳಿದರು.

ನಂತರ ಕರ್ನಾಟಕ ಸರಕಾರದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಚಂದ್ರಶೇಖರಯ್ಯ ಹಿರೇಮಠ ಮಾತನಾಡಿ ಪಿಯುಸಿಯಲ್ಲಿ ಅತಿ ಹೆಚ್ಚು ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು, ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು.

ಈ ವೇಳೆ ಯಲಬುರ್ಗಾ ಶ್ರೀಧರ ಮುರಡಿಮಠದ ಬಸವಲಿಂಗೇಶ್ವರ ಸ್ವಾಮಿಗಳ ತುಲಾಭಾರ ಸೇವೆ ನಡೆಯಿತು.

ಈ ಸಂದರ್ಭದಲ್ಲಿ ನೀಲನಗೌಡ ಪಾಟೀಲ್, ಎಚ್ಚರೇಶ್ವರ ಶಾಸ್ತ್ರಿ, ವೀರನಗೌಡ ಪಾಟೀಲ್,

ಖಾದರ ಭಾಷಾ, ಪಕ್ಕಿರಪ್ಪ ವಜ್ರಬಂಡಿ, ಮಕಲಸಾಬ ನೂರಭಾಷಾ, ಅನ್ನಪ್ಪ ಬಂಗಾರಿ, ಭೀಮಪ್ಪ ಹೇಳವರ, ಬಸವರಾಜ ಸಿರಿಗೇರಿ, ಎಚ್.ಕೆ.ಹೈತಾಪುರ, ಬಸವರಾಜ ಸೋಂಪೂರು, ಪ್ರಿಯದರ್ಶಿನಿ ಮುಂಡರಗಿಮಠ, ಹನುಮಂತಪ್ಪ ಕುಲಕರ್ಣಿ, ಪೂಜಾ ನರಿ, ಷರೀಫ್ ಸಾಬ ಬನ್ನಿಕೊಪ್ಪ ಹಾಗೂ ಊರಿನ ಮುಖಂಡರು ಯುವಕರು ಸುತ್ತಮುತ್ತಲಿನ ಗ್ರಾಮದ ಭಕ್ತರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಾಧಕರಿಗೆ ಮತ್ತು ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಮೂಲಕ ಗೌರವಿಸಿ ಅಭಿನಂದಿಸಲಾಯಿತು. ಸಂಗೀತ ಮಹಿಳಾ ಧ್ವನಿ ಸಂಸ್ಥೆಯ ಕಲಾವಿದರಾದ

ಅಕ್ಕಮಹಾದೇವಿ ಹಾಗೂ ಉಮಾಪತಿ ರಾಜೂರು ಸುಗಮ ಸಂಗೀತ ಕಲಾವಿದರಿಂದ ಭಕ್ತಿ ಸುಧೆ ಕಾರ್ಯಕ್ರಮ ಜರುಗಿತು.

# ಹನುಮಾನ, ವಿಠ್ಠಲ-ರುಕ್ಮಿಣಿ ಮಂದಿರ ಕಳಸಾರೋಹಣ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 12 :- ನಗರದ ಮೈಲೂರಿನ ಸಿ.ಎಂ.ಸಿ. ಕಾಲೊನಿಯಲ್ಲಿ ವೀರ ಹನುಮಾನ ಹಾಗೂ ವಿಠ್ಠಲ-ರುಕ್ಮಿಣಿ ಮಂದಿರದ ಕಳಸಾರೋಹಣ ಶುಕ್ರವಾರ ಭಕ್ತಿ, ಶ್ರದ್ಧೆಯಿಂದ ನೆರವೇರಿತು.

ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ಹರ್ಷೋಲ್ಲಾದೊಂದಿಗೆ ಪಾಲ್ಗೊಂಡರು.

ಭಾರತ ದೇವರು ಹಾಗೂ ಧರ್ಮದ ಮೇಲೆ ಹೆಚ್ಚು ನಂಬಿಕೆ ಹೊಂದಿದ ರಾಷ್ಟ್ರವಾಗಿದೆ ಎಂದು ಕಳಸಾರೋಹಣ ನಿಮಿತ್ತ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಸಂಸದ ಸಾಗರ್ ಖಂಡ್ರೆ ಹೇಳಿದರು.

ಪ್ರತಿಯೊಬ್ಬರೂ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಸಮಾಜೋಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು. ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ, ಬೀದರ್ ದಕ್ಷಿಣ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಹಲಬರ್ಗಾದ ರಾಚೋಟೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯ, ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಶಿಗಳ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪುರ ಮಾತನಾಡಿದರು.

ಹೆಡಗಾಪುರದ ಶಿವಲಿಂಗ ಶಿವಾಚಾರ್ಯ ಸಾನಿಧ್ಯವಹಿಸಿದ್ದರು. ತಮಲೂರಿನ ಶಿವಾನಂದ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಬಿಜೆಪಿ ಮುಖಂಡ ಈಶ್ವರಸಿಂಗ್ ಠಾ-ಕೂರ್, ದೇವಸ್ಥಾನ ಸಮಿತಿಯ ಅಧ್ಯಕ್ಷ ರಾಜಕುಮಾರ ಪಾಟೀಲ ತೇಗಂಪುರ, ಪ್ರಮುಖರಾದ ಶ್ರೀನಿವಾಸ್ ಪಾಟೀಲ, ಧನರಾಜ ಹಂಗರಗಿ, ವಿರೂಪಾಕ್ಷ ಗಾದಗಿ, ಅರುಣಕುಮಾರ ಹೋತಪೇಟ್, ಸಂಗಮೇಶ ಮೋರಗಿ ಮತ್ತಿತರರು ಇದ್ದರು.

# ಕೊರಿಯಾಳ:ಹನುಮಾನ ದೇವರ ಕಳಸ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ತಾಲೂಕಿನ ಹೊಳಸಮುದ್ರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಕೊರಿಯಾಳ ಗ್ರಾಮದಲ್ಲಿ ಶನಿವಾರ ಅದ್ದೂ-ರಿಯಾಗಿ ಹನುಮಾನ ದೇವರ ಕಳಸ ಮೆರವಣಿಗೆ ನಡೆಯಿತು.

ಹನುಮಾನ ಜಯಂತಿ ನಿಮಿತ್ತ ಗ್ರಾಮದಲ್ಲಿ ಬೆಳಗ್ಗೆಯಿಂದ ಹಬ್ಬದ ವಾತಾವರಣ ಶೃಷ್ಟಿ ಯಾಗಿತ್ತು, ಮುಂಜಾನೆ 7 ಗಂಟೆಗೆ ಶಿವರಾಜ ಪಾಟೀಲ ಮತ್ತು ಸಂಗಮೇಶ ಪಾಟೀಲ ಅವರಿಂದ ಅಭಿಷೇಕ ಪೂಜೆ ಕಾರ್ಯಕ್ರಮ ಜರುಗಿತು.

ನಂತರ ಜೈ ಶ್ರೀ ರಾಮ ಯುವಕ ಸಂಘದಿಂದ

ಬಸನಾಳ ಗ್ರಾಮದಿಂದ ಕೊರಿಯಾಳ ಗ್ರಾಮದ ವರೆಗೆ ದಿಲೀಪ ಕಟಾರೆ ಅವರ ನೇತೃತ್ವದಲ್ಲಿ ಬೈಕರ್‍ಯಾಲಿಗೆ ಚಾಲನೆ ನೀಡಲಾಯಿತು. ಯುವಕರು "ಜೈ ಶ್ರೀ ರಾಮ" "ಜೈ ಹನುಮಾನ" ಜೈ ಘೋಷಣೆ ಮೂಲಕ ಉತ್ಸಾಹದಿಂದ ಮೆರವಣಿಗೆಯಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಮಡಿವಾಳ ಸ್ವಾಮಿ, ಹನುಮಂತ ಬಿರಾದರ, ನಾಮದೇವ ಕಟಾರೆ ಗ್ರಾಮ ಪಂಚಾಯತ ಸದಸ್ಯ, ವಿಜಯಕುಮಾರ್ ನವಾಡೆ, ನಾಗೇಶ ಬಿರಾದರ, ಉಮಾಕಾಂತ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಂಜೆ 4 ಗಂಟೆಗೆ, ಸುಮಂಗಳೆಯರು ಕಳಸ ಹೊತ್ತಿ ಕೊರಿಯಾಳ ಗ್ರಾಮದ ಪ್ರಮುಖ ಬೀದಿಯಲ್ಲಿ ಹನುಮಾನ ದೇವರ ಕಳಸ ಮೆರವಣಿಗೆ ನಡೆಯಿತು. ಯುವಕರು ಕುಣಿಯುತಾ ಜೈ ಘೋಷಣೆ ಕೂಗುತ್ತ ಮೆರವಣಿಗೆ ಹನುಮಾನ ಮಂದಿರವರೆಗೆ ನಡೆದು ಬಂತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಿದರು. ರಾತ್ರಿ 9 ಗಂಟೆಗೆ ಹನುಮಾನ ಮಂದಿರದಲ್ಲಿ ಹನುಮ ಭಜನೆ ನಡೆಯಿತು.

# ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಸಂಪೂರ್ಣ ಬಂದ್ ಮಾಡಿ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಏ.12:-ಜಿಲ್ಲೆಯಾದ್ಯಂತ ರಾಜಾರೋಷವಾಗಿ ಯಾರ ಅಂಜಿಕೆಯಿಲ್ಲದೆ ನಡೆಯುತ್ತಿರುವ ಅನಧಿಕೃತ ಕೋಚಿಂಗ್ ಸೆಂಟರ್‌ಗಳನ್ನು ಸಂಪೂರ್ಣವಾಗಿ ಬಂದ್ ಮಾಡಬೇಕೆಂದು ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘ ಒತ್ತಾಯಿಸಿದೆ.

ಶುಕ್ರವಾರ ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ತೆರಳಿ ಬಿ.ಇ.ಒ ಟಿ.ಆರ್ ದೊಡ್ಡೆ ಅವರಿಗೆ ಲಿಖಿತ ಮನವಿ ಪತ್ರ ಸಲ್ಲಿಸಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳ ಹಾವಳಿಯಿಂದ ಎಲ್ಲ ರೀತಿಯ ಶಾಲೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ, ನಮ್ಮಲ್ಲಿ ಓದುವ ಮಕ್ಕಳು ಕೋಚಿಂಗ್ ಆಸೆಗಾಗಿ ಅನಧಿಕೃತ ಸೆಂಟರ್‌ಗಳಲ್ಲಿ ಪ್ರವೇಶ ಪಡೆಯುತ್ತಿರುವುದರಿಂದ ಶಾಲೆಗಳ ಸ್ಥಿತಿ ಚಿಂತಾಜನಕವಾಗುತ್ತಿದೆ. ಈ ಸೆಂಟರ್‌ಗಳು ಹಣದ ಲಾಲಚಿಗಾಗಿ ನಿತ್ಯ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆ ಹಾಗೂ ಸಾಯಂಕಾಲ 5 ಗಂಟೆಯಿಂದ ರಾತ್ರಿ 9 ಗಂಟೆ ವರೆಗೆ ಕೋಚಿಂಗ್ ನಡೆಸುತ್ತಿರುವುದರಿಂದ ಪಾಲಕರು ಏನು ಅರಿಯದೆ ತಮ್ಮ ಮಕ್ಕಳು ಹೆಚ್ಚೆಚ್ಚು ಓದಬೇಕೆಂಬ ಬಯಿಕೆಯಿಂದ ಅಂತಹ ಅನಧಿಕೃತ ಸೆಂಟರ್‌ಗಳತ್ತ ಮುಖ ಮಾಡುತ್ತಿರುವರು. ಇದು ನೇರಾ ನೇರ ಖಾಸಗಿ ಶಾಲೆಗಳ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಸಹ ಈ ಕುರಿತು 05/07/2024 ಹಾಗೂ 21/08/2024 ಎರಡು ಬಾರಿ ಈ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಬ್ಯಾನ್ ಮಾಡಬೇಕೆಂದು ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಜರುಗಿಸಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಹಾಗೇ ಯಾವುದೇ ಕೋಚಿಂಗ್ ಸೆಂಟರ್‌ಗಳು ಇಲ್ಲಿ ವರೆಗೆ ಬಂದ್ ಆಗಲಿಲ್ಲ ಬದಲಿಗೆ ಹೆಚ್ಚಿಗೆ ಆಗಿರುತ್ತವೆ.

ಈಗ ಮತ್ತೊಮ್ಮೆ ತಮಗೆ ಮನವಿ ಸಲ್ಲಿಸಿದ್ದು, ಈಗಲಾದರೂ ವಿದ್ಯಾರ್ಥಿಗಳ ಹಾಗೂ ಶಾಲೆಗಳ ಹಿತದೃಷ್ಟಿಯಿಂದ ಕೂಡಲೇ ಬೀದರ್ ಜಿಲ್ಲೆಯಲ್ಲಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಸಂಪೂರ್ಣವಾಗಿ ಬ್ಯಾನ್ ಮಾಡಬೇಕೆಂದು ಆಗ್ರಹಿಸಿದರು.

ಒಂದು ವಾರದ ಹಿಂದಷ್ಟೆ ಈ ವಿಚಾರವಾಗಿ ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿರುವುದಾಗಿ ತಿಳಿಸಿದ ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘವು ಮುಂದಿನ ವಾರ ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸಹ ಮನವಿ ಸಲ್ಲಿಸುವುದಾಗಿ ಎಚ್ಚರಿಸಿದರು.

ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘದ ಗೌರವಾಧ್ಯಕ್ಷ ರೇವಣಸಿದ್ದಪ್ಪ ಜಲಾದೆ, ಅಧ್ಯಕ್ಷರಾದ ರಾಜೇಂದ್ರಕುಮಾರ ಮಣಗೀರೆ, ಕಾರ್ಯದರ್ಶಿ ಗುರುನಾಥರೆಡ್ಡಿ ಚಿಂತಾಕಿ, ಬೀದರ್ ತಾಲೂಕಾಧ್ಯಕ್ಷ ಸಂದೀಪ ಶಟಕಾರ ಹಾಗೂ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ವಚನಗಳ ಸಾಂಸ್ಕೃತಿಕ ಚಹರೆ ಪರಿಚಯಿಸುವ ಅನುವಾದ : ಪ್ರೊ. ಗಣಪತಿ ಸಿನ್ನೂರ.




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: – ಏ 12– ಭಾಷಾಂತರದಿಂದ ಬೇರೆ ಭಾಷಿಕ ಲೋಕಕ್ಕೆ ವಚನಗಳ ಸಾಂಸ್ಕೃತಿಕ ಚಹರೆ ಪರಿಚಯವಾಗುತ್ತದೆ ಎಂದು

ಸಿಯುಕೆ ಬಸವ ಪೀಠದ ಸಂಯೋಜಕ ಪ್ರೊ. ಗಣಪತಿ ಸಿನ್ನೂರ ಹೇಳಿದರು .

ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಬಸವ ಪೀಠದ ಸಹಯೋಗದಲ್ಲಿ ಡಾ. ಜಯದೇವಿತಾಯಿ ಲಿಗಾಡೆ ಪ್ರತಿಷ್ಠಾನದಿಂದ ನಗರದ ಅಕ್ಕ ನಾಗಮ್ಮನವರ ಗವಿ ಮಂಟಪದಲ್ಲಿ ಹಮ್ಮಿಕೊಂಡಿದ್ದ 'ವಚನಗಳ ಅನುಸಂಧಾನ ಹಾಗೂ ಅನುವಾದದ ಆಯಾಮ' ಕುರಿತ ಪ್ರತಿಷ್ಠಾನದ 93ನೇ ಉಪನ್ಯಾಸ ಮತ್ತು ಸಂವಾದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ

ವಚನಗಳ ತಾತ್ವಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮ ಹೊರ ಜಗತ್ತಿಗೆ ಪರಿಚಯಿಸಲು ಅನುವಾದ ಮಹಾಮಾರ್ಗವಾಗಿದೆ ಎಂದರು. ಕಳೆದ ಎರಡುವರೆ ವರ್ಷದಿಂದ ಬಸವ ಸಮಿತಿ ಜೊತೆಗೆ ಕಲಬುರ್ಗಿಯ ಸಿಯುಕೆ, ಬೆಂಗಳೂರು ನಗರ ವಿವಿ ಜರ್ಮನ್ , ಸ್ಪಾನಿಷ್, ಜಾಪನಿಸ್ ಈ ಮೂರು ಭಾಷೆಗಳಲ್ಲಿ ವಚನ ಅನುವಾದದ ಕೆಲಸ ಮಾಡಿದೆ. ಈ ಮೂಲಕ ಕನ್ನಡ ಸಾಹಿತ್ಯದ ಮುಖ್ಯ ದರ್ಶನವನ್ನು ಜಗತ್ತಿಗೆ ಪರಿಚಯಿಸುವ ಅಳಿಲು ಸೇವೆ ಸಲ್ಲಿಸುತ್ತಿದೆ ಎಂದರು.

ವಿಮರ್ಶಕ ಪ್ರೊ.ವಿಕ್ರಮ ವಿಸಾಜಿ ಉದ್ಘಾಟಿಸಿ ಮಾತನಾಡಿ, ಯೂರೋಪ್ ನಮಗೆ ಅರ್ಥವಾದಷ್ಟು ಯೂರೋಪಿಗೆ ನಾವು ಅರ್ಥವಾಗಿಲ್ಲ. ಕನ್ನಡ ಸಾಹಿತ್ಯ ಅನುವಾದಿಸುವ ಮೂಲಕ ಕನ್ನಡದ ಜ್ಞಾನ ಪರಂಪರೆಗೆ ಜಾಗತಿಕ ಮಹತ್ವ ತಂದುಕೊಡುವ ಅಗತ್ಯವಿದೆ.

ಎರಡು ಸಂಸ್ಕೃತಿಗಳ ನಡುವೆ ಸಂವಾದ ಸಾಧ್ಯವಾಗಲು ಅನುವಾದ ಅಗತ್ಯವಿದೆ ಎಂದರು. ಅನುವಾದದಿಂದ ಜಗತ್ತಿನ ಎಲ್ಲ ಜನಾಂಗಗಳ ನಡುವೆ ಅರ್ಥಪೂರ್ಣವಾದ ತಿಳುವಳಿಕೆ ಸಾಧ್ಯವಾಗುತ್ತದೆ. ಗ್ರೀಕ್, ಮಧ್ಯಪ್ರಾಚ್ಯ, ಆಫ್ರಿಕನ್, ಯೂರೋಪಿನ ಸಾಹಿತ್ಯ ಅನುವಾದದ ಮೂಲಕ ಅರ್ಥ ಮಾಡಿಕೊಂಡಿದ್ದೇವೆ. ಈಗ ಭಾರತದ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಜಗತ್ತಿನ ಬೇರೆ ಬೇರೆ ಭಾಷೆಗೆ ಹೋಗುವ ಅಗತ್ಯವಿದೆ. ಬಸವ ಸಮಿತಿ ಹಾಗೂ ಸಿಯುಕೆ ವಚನಗಳನ್ನು ಅನುವಾದಿಸುವ ಮೂಲಕ ಜಾಗತಿಕ ಸಾಹಿತ್ಯವಲಯಕ್ಕೆ ವಚನಗಳನ್ನು ಕೊಂಡೊಯ್ಯುವ ಕೆಲಸ ಮಾಡುತ್ತಿದೆ ಎಂದರು.

ಬೆಂಗಳೂರು ನಗರ ವಿವಿ ಪ್ರಾಧ್ಯಾಪಕಿ ಪ್ರೊ. ಭಾನುಮತಿ ವಿಜಯ್ ಕೃಷ್ಣನ್ ಮಾತನಾಡಿ, ವಚನಗಳು ಭಾರತೀಯ ಸಾಂಸ್ಕೃತಿಕ ಲೋಕದಲ್ಲಿ ಬಹುದೊಡ್ಡ ಸ್ಥಾನ ಪಡೆದಿವೆ. ಅವುಗಳ ಓದು ಒಂದು ತತ್ವಶಾಸ್ತ್ರೀಯ ಪಯಣವಿದ್ದಂತೆ. ವಚನ ಸ್ವಾತಂತ್ರ್ಯ ಮತ್ತು ಸಮಾನತೆಯ ಸಮಾಜದ ಪರಿಕಲ್ಪನೆ ರೂಪಿಸಿದ ದಾರ್ಶನಿಕ ಪಠ್ಯಗಳು. ಇವುಗಳ ಬಗೆಗೆ ಹೊರ ಜಗತ್ತಿ ಅರಿವ ಅಗತ್ಯವಿದೆ. ಭಾಷಾಂತರಗೊಂಡ ವಚನಗಳು ಮುಂದೊಂದು ದಿನ ವಿದೇಶಗಳಲ್ಲಿ ಸಂಶೋಧನಾತ್ಮಕ ಆಯಾಮ ಪಡೆಯುತ್ತವೆ ಎಂದರು.

ಬೆಂಗಳೂರು ನಗರ ವಿವಿ ಪ್ರಾಧ್ಯಾಪಕಿ ಪ್ರೊ. ಸುಧಾ ಶ್ರೀಧರ್ ಮಾತನಾಡಿ, ವಚನಾನುವಾದವು ಕನ್ನಡದ ಸಾಂಸ್ಕೃತಿಕ ಜಗತ್ತಿನ ಹೊಸ ಚಹರೆ ಹೊರ ಜಗತ್ತಿಗೆ ಪರಿಚಯಿಸುವ ಸಣ್ಣ ಪ್ರಯತ್ನವಾಗಿದೆ. ಮಹಿಳೆ ಅಸ್ತಿತ್ವದ, ಮಾನವೀಯತೆಯ ನೆಲೆಯ, ಜಾತ್ಯತೀತ ಆಲೋಚನೆಯ, ದಾರ್ಶನಿಕ ಪ್ರಭೆಯ ತಾತ್ವಿಕ ವಾಗ್ವಾದಗಳು ವಚನ ಪ್ರತಿಪಾದಿಸಿವೆ ಎಂದರು.

ಸಿಯುಕೆ ಪ್ರಾಧ್ಯಾಪಕ ಡಾ. ಪಿ. ಕುಮಾರ್ ಮಂಗಲಮ್ ಮಾತನಾಡಿ, ವಚನಗಳು ಅತ್ಯಂತ ವಿಸ್ಮಯ ಹುಟ್ಟಿಸಿವೆ. ಸಾಂಸ್ಕೃತಿಕ, ಅಭೌತಿಕವಾದ ಪರಿಭಾಷೆಯಲ್ಲಿರುವ ವಚನಗಳ ಆಧ್ಯಾತ್ಮ ತುಂಬಾ ಭಿನ್ನವಾಗಿದೆ. ವಚನ ಸಾಹಿತ್ಯ ಹೇಳುವ ತತ್ವಜ್ಞಾನ , ಲಿಂಗ, ದಾಸೋಹ, ಕಾಯಕ ಸೇರಿ ಹಲವು ತಾತ್ವಿಕ ಪರಿಕಲ್ಪನೆಗಳು

ಸ್ಪಾನಿಷ್ ಭಾಷೆಗೆ ಅನುವಾದಿಸುವಾಗ ಸವಾಲು ಸೃಷ್ಟಿಸಿದವು ಎಂದರು.

ಸಿಯುಕೆ ಪ್ರಾಧ್ಯಾಪಕಿ ಪ್ರೊ. ಪಿಯಾಲಿ ರಾಯ್ ಮಾತನಾಡಿ, ಜಾಪನಿಸ್ ಮತ್ತು ಭಾರತದ ಅಥವಾ ಕನ್ನಡ ಎರಡರಲ್ಲೂ ಹಲವು ಸಾಂಸ್ಕೃತಿಕ ಭಿನ್ನತೆಗಳಿವೆ. ವಚನಗಳನ್ನು ಜಪಾನ್ ಭಾಷೆಗೆ ಭಾಷಾಂತರಿಸುವಾಗ ಪದದ ಅರ್ಥದ ಜೊತೆ ಸಾಂಸ್ಕೃತಿಕ ಅರ್ಥಕ್ಕೂ ಮಹತ್ವ ನೀಡಲಾಗಿದೆ ಎಂದರು.

ಸಿಯುಕೆ ಪ್ರಾಧ್ಯಾಪಕ ಶಿವಮ್ ಮಿಶ್ರಾ, ಬಸವ ಸಮಿತಿಯ ನವಿನ್, ಪ್ರತಿಷ್ಠಾನದ ಅಧ್ಯಕ್ಷ ಎಸ್. ಜಿ. ಹುಡೇದ, ಕಾರ್ಯದರ್ಶಿ ದೇವೇಂದ್ರ ಬರಗಾಲೆ, ಶರಣಪ್ಪ ಸೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಡಾ. ಶಿವಾಜಿ ಮೇತ್ರೆ ನಿರೂಪಿಸಿದರು. ಡಾ. ಭೀಮಾಶಂಕರ ಬಿರಾದಾರ ಪ್ರಾಸ್ತಾವಿಕ ಮಾತನಾಡಿದರು.

# ಹನುಮನ ಸ್ಮರಣೆಯಿಂದ ದೌರ್ಬಲ್ಯದ ಶಮನ – ಹಾರಕೂಡ ಶ್ರೀ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ಏ 12 ಪ್ರತಿದಿನ ಭಕ್ತಿಯಿಂದ ಹನುಮಂತನ ಸ್ಮರಣೆ ಮಾಡುವುದರಿಂದ ದೌರ್ಬಲ್ಯದ ಮನಸ್ಥಿತಿ ಮಾಯವಾಗಿ ಚೈತನ್ಯದ ಚೆಲುವೆ ಉಕ್ಕಿ ಹರಿಯುತ್ತದೆ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಸರಜವಳಗಾ ಗ್ರಾಮದ ಹನುಮಾನ ದೇವಸ್ಥಾನ ಕಳಸಾರೋಹಣ ಸಮಾರಂಭದ ಅಂಗವಾಗಿ ಆಯೋಜಿಸಿದ ಧರ್ಮ ಸಭೆಯ ಸನ್ನಿಧಾನ ವಹಿಸಿ ಮಾತನಾಡಿದ ಶ್ರೀಗಳು, ಮನುಷ್ಯ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಸಶಕ್ತ ಮನೋವೈಖರಿ ತಳಿದು ತನ್ನಲ್ಲಿ ಗುರುಭಕ್ತಿ, ದೈವಭಕ್ತಿ, ರಾಷ್ಟ್ರಭಕ್ತಿ ಅರಳಿಸಿಕೊಳ್ಳಬೇಕಾದರೆ, ಆಂಜನೇಯನ ಶ್ರೇಷ್ಠ ಆದರ್ಶ ಪಾಲಿಸಬೇಕು.

ನಮ್ಮ ದೇಶದ ಪ್ರತಿ ಗ್ರಾಮದಲ್ಲೂ ಹನುಮಂತನ ಮಂದಿರವಿದ್ದು, ಅದು ಗ್ರಾಮದ ಸ್ಫೂರ್ತಿ ಕೇಂದ್ರವಾಗಿ, ಭಕ್ತಿಯ ತಾಣವಾಗಿ ಗ್ರಾಮ ಸೌರಭದ ಸಂಕೇತವಾಗಿದೆ.

ಹನುಮಂತನ ರಾಮಭಕ್ತಿ, ದೂರದೃಷ್ಟಿ, ಧೈರ್ಯ, ಸಾಹಸ ಇಂದಿನ ಯುವ ಪೀಳಿಗೆ ಧಾರಣ ಮಾಡಿಕೊಂಡು ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು.

ಪುಟ್ಟ ಗ್ರಾಮವಾದರೂ ಸರಜವಳಗಾ ಗ್ರಾಮದ ಧರ್ಮ ಕಾರ್ಯ ಮೆಚ್ಚುಗೆಗೆ ಅರ್ಹವಾಗಿದ್ದು, ಹಾರಕೂಡ ಧೀಶ ಎಲ್ಲರ ಬಾಳಲ್ಲಿ ಸಮೃದ್ಧಿಯ ಬೆಳದಿಂಗಳು ಹರಿಸಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ, ಎಪಿಎಂಸಿ ಮಾಜಿ ಅಧ್ಯಕ್ಷರಾದ ಸಿದ್ರಾಮಪ್ಪ ಗುದಗೆ, ಉದ್ದವ ಮಹಾರಾಜ, ಸಂದೀಪ ಮಹಾರಾಜ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಮಹಾದೇವ ಮುದಗಲೆ ಸ್ವಾಗತಿಸಿ, ನಿರೂಪಿಸಿದರು. ಕಾರ್ತಿಕ ಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು.

# ಫಾತ್ಮಪುರ; ಸಡಗರ ಸಂಭ್ರಮದಿಂದ ಹನುಮಾನ್ ಜಯಂತಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ ಶ್ರೀ ರಾಮಚಂದ್ರನ ಶ್ರೇಷ್ಠ ಭಕ್ತ ಮತ್ತು ನಿತ್ಯ ಸೇವಕ ಶ್ರೀ ಹನುಮಂತನು ಆವಿರ್ಭವಿಸಿದ ಶುಭ ದಿನವನ್ನು ಶ್ರೀ ಹನುಮಾನ್ ಜಯಂತಿ ಆಚರಿಸಲಾಗುತ್ತದೆ ಎಂದು ಬಡಾವಣೆಯ ಹಿರಿಯ ಮುಖಂಡ ಅಶೋಕ ಸ್ವಾಮಿ ಚಾಲನೆ ನೀಡುತ್ತಾ ತಿಳಿಸಿದರು. ಪಟ್ಟಣದ 23ನೇ ವಾರ್ಡಿನ ಫಾತ್ಮಪುರನಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶ್ರೀ ಹನುಮಾನ್ ಜಯಂತಿಯನ್ನು ಬಹು ವಿಜೃಂಭಣೆಯಿಂದ ಆಚರಣೆ ಮಾಡಲಾಯಿತ್ತು. ಬೆಳಿಗ್ಗೆ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಮಧ್ಯಾಹ್ನ ಅನ್ನ ದಾಸೋಹ ಏರ್ಪಡಿಸಲಾಯಿತ್ತು. ಸಾಯಂಕಾಲ ಶ್ರೀ ಹನುಮಾನ ದೇವರ ಮೆರವಣಿಗೆಗೆ ಬಡಾವಣೆಯ ಹಿರಿಯ ಮುಖಂಡ ಅಶೋಕ ಸ್ವಾಮಿ ಬಿರಾದಾರ್ ಮತ್ತು ಪಿಎಸ್ಐ ಬಾಷುಮಿಯಾ ಕೊಂಚೂರ್ ಚಾಲನೆ ನೀಡಿದರು. ಮೆರವಣಿಗೆಯನ್ನು ಹನುಮಾನ ದೇವಸ್ಥಾನದಿಂದ ಭವಾನಿ ದೇವಸ್ಥಾನದ ವರೆಗೆ ಹನುಮಾನ ದೇವರ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಿತ್ತು. ಮೆರವಣಿಗೆಯಲ್ಲಿ ನೂರಾರು ಯುವಕರು ಕುಣಿಯುತ್ತಾ ಹೆಜ್ಜೆ ಹಾಕಿದರು. ಪಂಚ ಕಮಿಟಿ ಅಧ್ಯಕ್ಷ ಸಂಜುರೆಡ್ಡಿ ಮೂಡಬಿ, ಪದಾಧಿಕಾರಿಗಳಾದ ಮಹಾರುದ್ರಯ್ಯ ಸ್ವಾಮಿ, ಮಲ್ಲಿಕಾರ್ಜುನ ಮಟ್ಟಿ, ದೇವಿಂದ್ರ ಸೀತಾಳಗೇರಾ, ಪ್ರಕಾಶ ಪಾಟೀಲ್, ಅನೀಲ ಪಾಟೀಲ್, ಗುರಯ್ಯಾ ಸ್ವಾಮಿ, ವೆಂಕಟ್ ಪೂಜಾರಿ, ಶಕೀಲ್ ಅಲ್ಲೂರ್, ಸಂಗಯ್ಯಾ ಸ್ವಾಮಿ, ವಿಜಕುಮಾರ್ ಬರ್ಮಾ, ನಾಮನಂದ್, ಶಿವಾನಂದ ಹಡಪದ, ಜಗನಾಥ, ರಾಜಕುಮಾರ ಆರ್. ಹಡಪದ, ರಾಕೇಶ ಬಿರಾದಾರ್, ಶ್ರೀಕಾಂತ ಮಟ್ಟಿ, ಮಂಜುನಾಥ್ ಸ್ವಾಮಿ ಬಿರಾದಾರ್, ಆಕಾಶ ಸ್ವಾಮಿ, ದಿಲೀಪ ಪಂಚಾಳ, ಜಗನಾಥ ಗೋಣಗಿ, ಅಂಬರೀಶ್ ಸ್ವಾಮಿ, ಸುಭಾಷ ಜಮಾದರ್, ಶ್ರೀಕಾಂತ ನರನಾಳ, ಶಿವಪುತ್ರ ರಾಂಪುರ, ನರೇಂದ್ರರೆಡ್ಡಿ ರಾಂಪುರ, ಹಣಮಂತ ರೆಡ್ಡಿ, ಭಾಗ್ಯವಂತ ರೆಡ್ಡಿ, ಸಿದ್ದು ಸ್ವಾಮಿ, ಓಂಕಾರ ಪಾಟೀಲ್, ಶಾಂತವೀರ್ ಸ್ವಾಮಿ, ಅಂಬಾಜಿ ಪವರ, ಭೀಮರೆಡ್ಡಿ, ಬಸವರಾಜ ರೆಡ್ಡಿ, ಅಭಿಷೇಕ ರೆಡ್ಡಿ, ಸಂಗ್ರಾಮ ರೆಡ್ಡಿ, ವೀರೇಂದ್ರ ಸೀತಾಳಗೇರಾ, ಪವನ ಸೀತಾಳಗೇರಾ, ಬಾಬುರಾವ ಧನಗರ್, ಹಣಮಂತ ಮೂಡಬಿ ಸೇರಿದಂತೆ ನೂರಾರು ಯುವಕರು, ಹಿರಿಯರು, ಮಕ್ಕಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

# ಹನುಮಾನ ಜಯಂತಿ: ದೇವಸ್ಥಾನಕ್ಕೆ ಆಗಮಿಸಿದ ಹೆಚ್ಚಿನ ಸಂಖ್ಯೆಯ ಭಕ್ತರು

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ತಾಲ್ಲೂಕಿನ ಚಳಕಾಪುರ ಗ್ರಾಮದ ಐತಿಹಾಸಿಕ ಹನುಮಾನ ದೇವಸ್ಥಾನದಲ್ಲಿ ಹನುಮಾನ ದೇವರ ಜಯಂತಿ ನಿಮಿತ್ತ ಶನಿವಾರ ಹನುಮಾನ ದೇವರ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳ ಹೆಚ್ಚಿನ ಭಕ್ತರು ಶುಕ್ರವಾರ ರಾತ್ರಿಯೇ ದೇವಸ್ಥಾನಕ್ಕೆ ಆಗಮಿಸಿದ್ದರು. ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ತಂಡೋಪ ತಂಡವಾಗಿ ಬೆಳಗಿನ ಜಾವದಲ್ಲಿ ಆಗಮಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬೆಳಿಗ್ಗೆ ನಡೆದ ಹನುಮಾನ ದೇವರ ತೊಟ್ಟಿಲು ಕಾರ್ಯಕ್ರಮ ಸಡಗರ, ಸಂಭ್ರಮದಿಂದ ದೇವಸ್ಥಾನದ ಆವರಣದಲ್ಲಿ ನಡೆಯಿತು.

ಗ್ರಾಮದ ಸಂಜೀವಿನಿ ಪರ್ವತದಲ್ಲಿ ಸಕಲ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು ಎಂದು ಗ್ರಾಮಸ್ಥ ಸುಭಾಷ ಕೆನಡೆ ತಿಳಿಸಿದರು.

# ಡಾ.ಅಂಬೇಡ್ಕರ ಜಯಂತಿ ನಿಮಿತ್ತ ಪೂರ್ವಭಾವಿ ಸಭೆ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:

ಡಾ. ಅಂಬೇಡ್ಕರರವರ 134ನೇ ಜಯಂತ್ಯುತ್ಸವ ನಿಮಿತ್ತ ಪಟ್ಟಣದ ತಹಸೀಲ್ ಕಚೇರಿಯಲ್ಲಿ ತಹಸೀಲ್ದಾರ ಅಮೀತಕುಮಾರ ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಜರುಗಿತು.

ಮುಖಂಡರಾದ ಪ್ರವೀಣ ಕದಮ್ ಮಾತನಾಡಿ ಏ.14ರಂದು ನಡೆಯುವ ಜಯಂತಿ ಕಾರ್ಯಕ್ರಮದಲ್ಲಿ ಇಲಾಖೆಯ ಪ್ರತಿಯೊಬ್ಬ ಅಧಿಕಾರಿಗಳು ತಪ್ಪದೆ ಭಾಗವಹಿಸುವಂತೆ ತಹಸೀಲ್ದಾರರು ಆದೇಶ ಹೊರಡಿಸ ಬೇಕೆಂದರು ಒತ್ತಾಯಿಸಿದರು.

ಗ್ರಾ.ಪಂ ಅಧ್ಯಕ್ಷೆ ಸುಶೀಲಾ ಸಜ್ಜನಶೆಟ್ಟಿ ಮಾತನಾಡಿ, ಅಲ್ಪ ಪ್ರಸಾದ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಪಂಚಾಯತವತಿಯಿಂದ ಮಾಡಲಾಗುವುದು ಎಂದರು.

14ರಂದು ಬೆಳಿಗ್ಗೆ ಬೈಕ್ ರಾಲಿ ಹಾಗೂ 10.30ಕ್ಕೆ ವೇದಿಕೆ ಕಾರ್ಯಕ್ರಮ ಜರುಗುವುದು, ವಿಶೇಷ ಉಪನ್ಯಾಸ ಪ್ರಾಚಾರ್ಯರು ಆರ್. ಎಚ್. ಶಿವಾಜಿ ಸರ ಅವರಿಂದ ನಡೆಯಿವುದು. ಸಂಜೆ 5ಕ್ಕೆ ಭವ್ಯವಾದ ಮೆರವಣಿಗೆ ಸಮುದಾಯ ಅಂಬೇಡ್ಕರ ಜರುಗುವುದು ಎಂದು ಸಭೆಯಲ್ಲಿ ತೀರ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ತಾ.ಪಂ. ಎಡಿ ಹಣಮಂತರಾವ ಕೌಟಗೆ, ವೈದ್ಯಾಧಿಕಾರಿ ಡಾ ಶ್ರೀಮಂತ ಮಡಿವಾಳ, ಸುಭಾಷ ರಾಠೋಡ, ಪಿಡಿಓ ರಾಜಕುಮಾರ ತಂಬಾಕೆ. ಮುಖಂಡರಾದ ಶಾಂತಕುಮಾರ ಬಿರಾದಾರ, ಪ್ರವೀಣ ಕದಮ್, ವಿಷ್ಣುದಾಸ ಶಿಂಧೆ. ಬಾಲಾಜಿ ತೇಲಂಗೆ, ಸಾಯಿನಾಥ ಕಾಂಬಳೆ, ಅವಿನಾಶ ಸಿಂಧೆ, ಅಮೂಲ ಸಿಂಧೆ, ರಾಜಕುಮಾರ ಪೊಲೀಸ್ ಪಾಟೀಲ, ಗೊವಿಂದ ತಾಂದಳೆ, ಸೇರಿದಂತೆ ಅನೇಕರು ಇದ್ದರು.

# ಪ್ರತಿಯೊಬ್ಬ ಕೂಲಿ ಕಾರ್ಮಿಕರು ಯೋಜನೆಯ ಸದುಪಯೋಗ ಪಡೆದುಕೊಳ್ಳಿ:- ಬಿರಾದಾರ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:–ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೂಲಿ ಕೆಲಸ ಮಾಡುವ ಕಾರ್ಮಿಕರಿಗೆ ಏಪ್ರೀಲ್ 1 ರಿಂದ ದಿನಕ್ಕೆ 349 ರೂ. ಇದ್ದ ಕೂಲಿ ಹಣವನ್ನು 370 ರೂ. ಹೆಚ್ಚಿಸಲಾಗಿದ್ದು ಪ್ರತಿಯೊಬ್ಬ ಕೂಲಿ ಕಾರ್ಮಿಕರು ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್ ಹೇಳಿದರು. ತಾಲೂಕಿನ ಮುಸ್ತರಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಮುಸ್ತರಿ ವಾಡಿ ಗ್ರಾಮದ ರೈತರ ಹೊಲದ ಬಳಿ ಕೂಲಿ ಕಾರ್ಮಿಕರು ಕೈಗೊಳ್ಳುತ್ತಿರುವ ನಾಲಾ ಹೂಳೆತ್ತುವ ಸ್ಥಳಕ್ಕೆ ಭೇಟಿ ನೀಡಿ ಪರಿಶಿಲಿಸಿ ಮಾತನಾಡುತ್ತ ತಾಂತ್ರಿಕ ಸಹಾಯಕರು ನೀಡಿರುವ ಅಳತೆಯಂತೆ ಎಲ್ಲ ಕೂಲಿ ಕಾರ್ಮಿಕರು ಉತ್ತಮವಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು. ನರೇಗಾ ಯೋಜನೆ ಅಡಿಯಲ್ಲಿ ಕೆಲಸ ಮಾಡುವ ಕಾರ್ಮಿಕರು ತಮ್ಮ ಮಕ್ಕಳನ್ನು ಕೂಸಿನ ಮನೆಯಲ್ಲಿ ಬಿಡಬೇಕು. ಒಂದು ಕುಟುಂಬಕ್ಕೆ ಕೂಲಿ ಕಾರ್ಮಿಕರಿಗೆ ವರ್ಷಕ್ಕೆ 100 ದಿನಗಳವರೆಗೆ ಕೆಲಸ ನೀಡಲಾಗುತ್ತದೆ. ಕೂಲಿ ಕಾರ್ಮಿಕರು ಕೂಲಿ ಕೆಲಸಕ್ಕೆ ನಗರ ಪ್ರದೇಶಗಳಿಗೆ ಗೂಳೆ ಹೊಗದೆ ತಮ್ಮ ಸ್ವಂತ ಗ್ರಾಮದಲ್ಲಿ ವಾಸಿಸುತ್ತ ಕೂಲಿ ಕೆಲಸ ಮಾಡಿ ಜೀವನ ಸಾಗಿಸಬೇಕು. ತಮ್ಮ ಯಾವುದೆ ಸಮಸ್ಯೆಗಳಿದ್ದರೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ತಿಳಿಸಿದರು. ನಂತರ ನರೇಗಾ ಯೋಜನೆ ಅಡಿಯಲ್ಲಿ 2024–2025ನೇ ಸಾಲಿನಲ್ಲಿ 100 ದಿನಗಳ ಕೂಲಿ ಕೆಲಸ ಪೂರೈಸಿದ ಸುರೇಖಾ ಹಾಗೂ ನಾಗೇಂದ್ರ ಅವರಿಗೆ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಅಭಿವೃದ್ಧಿ ಅಧಿಕಾರಿ ಬಸವರಾಜ, ಐಇಸಿ ಸಂಯೋಜಕ ವಿಶ್ವನಾಥ ಗಡ್ಡಿಮನಿ, ಕಾರ್ಯದರ್ಶಿ ಅಶೋಕ, ಸಂಜುಕುಮಾರ, ರಾಹುಲ್ ಸೇರಿದಂತೆ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

# ನಿಶುಲ್ಕವಿಲ್ಲದೆ ವಕೀಲರಾಗಿ ಮಾಡಿದ ಪ್ರಭಾಕರರ ಸೇವೆ ಚಿರಸ್ಮರಣಿಯ: ಶಿವಶರಣಪ್ಪ ವಾಲಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 12 :– ಬಾಲ್ಯದಲ್ಲಿಯೆ ಬಾಬಾ ಅವರ ಮನೆಯ ಸೇವಕನಾಗಿ ನಿಂತ ಬಿ.ಕೆ ಪ್ರಭಾಕರ್ ಅವರು ತಮ್ಮ ಲೌಕಿಕ ಬದುಕಿನಲ್ಲಿ ವಕೀಲರಾಗಿ ಸೇವೆ ಸಲ್ಲಿಸುವಾಗ ಯಾರ ಬಳಿ ಒಂದು ನಯಾ ಪೈಸೆ ಶುಲ್ಕವಿಲ್ಲದೆ ಮಾಡಿದ ಕಾರ್ಯ ಸ್ಮರಣಿಯವಾಗಿದೆ ಎಂದು ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಹೇಳಿದರು.

ನಗರದ ಜನವಾಡ ರಸ್ತೆಯಲ್ಲಿರುವ ಬ್ರಹ್ಮಕುಮಾರಿ ಕೇಂದ್ರ ಪಾವನಧಾಮ ಅವರಣದಲ್ಲಿ ಶನಿವಾರ ಶುಕ್ರವಾರ ಪೌಂಟ್ ಅಬುದಲ್ಲಿ ದೇಹ ತ್ಯಾಗ ಮಾಡಿದ್ದ ಬಿ.ಕೆ ಪ್ರಭಾಕರ್ ಅವರ ಶೃದ್ಧಾಂಜಲಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಅವರ ನೇರ ನುಡಿ, ನಿಷ್ಠುರತೆ, ಮಾತೃಹೃದಯತೆ, ಮಧುರತೆ ನಮ್ಮೆಲ್ಲರಿಗೆ ಮಾದರಿ. ಅವರ ಪರಮಧಾಮ ಯಾತ್ರೆ ಸುಖಮಯವಾಗಿರಲಿ ಎಂದು ಹರಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ಈ ಸಂದರ್ಭದಲ್ಲಿ ಮಾತನಾಡಿ, ಮೌಂಟ್ ಅಬು ನಮ್ಮೆಲ್ಲರಿಗೆ ತಪಸ್ಸು ಧಾಮ. ಆ ತಪಸ್ಸು ನೆಲೆಯಲ್ಲಿ ಮುರ್ಲಿ ಓದುವ ಅಮೃತ ಘಳಿಗೆಯಲ್ಲಿ ಶರೀರ ತ್ಯಾಗ ಮಾಡಿರುವ ಪ್ರಭಾಕರ್ ಅಣ್ಣನವರಂಥ ಸಾವು ಕೋಟಿಯಲ್ಲಿ ಒಬ್ಬರಿಗೆ ಸಿಗುತ್ತದೆ. 2013ರಲ್ಲಿ ತಾನು ಈ ಪರಮಾತ್ಮನ ಮನೆಗೆ ಪರಿಚಯವಾಗುವುದಕ್ಕಿಂತ ಮುಂಚೆ ಮಾಧ್ಯಮಗಳಿಗೆ ಬಾಬಾ ಅವರ ಮನೆಯ ಕಾರ್ಯಕ್ರಮದ ಸುದ್ದಿಗಳು ಕೈಯಿಂದ ಬರೆದು ಕೊಡುತ್ತಿದ್ದರು. ನಾನು ಪರಿಚಯವಾದ ಬಳಿಕ ಅವರ ಬರವಣಿಗೆ ನಿಂತು ಹೊಯಿತು. ನನ್ನ ಜವಾಬ್ದಾರಿ ತಾವು ನಿಭಾಯಿಸುತ್ತಿದ್ದಿರಿ ಎಂದು ಹೇಳುತ್ತಿದ್ದರು ಎಂದರು.

ಕೇಂದ್ರದ ಸಂಚಾಲಕರಾದ ಬಿ.ಕೆ ಪ್ರತಿಮಾ ಬಹೆನ್ ಜಿ ಮಾತನಾಡಿ, ಪ್ರಭಾಕರ ಭಾಯಿ ಅವರು ನಮ್ಮನ್ನು ಬಿಟ್ಟು ಎಲ್ಲಿ ಹೋಗಿಲ್ಲ. ಸದಾ ಅವರ ಚೈತನ್ಯ ಆತ್ಮಶಕ್ತಿ ನಮ್ಮೊಂದಿಗಿದೆ. ಅವರ ಪರಮಾತ್ಮನ ಸೇವೆ ತಾನು ಬೀದರ್ ಗೆ ಬಂದಾಗಿನಿಂದ ಪರಮಾತ್ಮನಿಗೆ ಸಮರ್ಪಿತನಾಗಿ ಹಿರಿಯ ಸಹೋದರನ ಸ್ಥಾನ ತುಂಬಿದ ಮಹಾನುಭಾವರು. ಅವರ ಅಧ್ಯಾತ್ಮಿಕ ಬದುಕು ಲೌಕಿಕ ಹಾಗೂ ಅಲೌಕಿಕದಲ್ಲಿರುವ ಎಲ್ಲರಿಗೂ ಪ್ರೇರಣಾದಾಯಕವಾಗಿದೆ ಎಂದರು. ನಂತರ ನೆರೆದ ಸಹೋದರ, ಸಹೋದರಿಯರು ಒಬ್ಬೊಬ್ಬರಾಗಿ ಬಂದು ಪ್ರಬವಾಕರ ಅವರ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು. ಕೇಂದ್ರದ ಸಮರ್ಪಿತ ಸಹೋದರಿಯರು ಸರದಿಯಂತೆ ಯೋಗದಲ್ಲಿ ತಲ್ಲಿನರಾದರು. ಸರಿಯಾಗಿ 3 ಗಂಟೆಗೆ ನಗರದ ಸರಸಿಂಹ ಝರಣಿ ಬಳಿ ಇರುವ ರುದ್ರಭೂಮಿಯಲ್ಲಿ ಅವರ ಅಂತ್ಯಸಂಸ್ಕಾರ ನೆರವೇರಿತು.



ತಾಳಿಕೋಟಿ ಪಟ್ಟಣದ ಪೋಲಿಸ್ ಸ್ಟೇಷನ್ ಹನುಮಾನ ಮಂದಿರದಲ್ಲಿ ಹನುಮಾನ ಜಯಂತಿಯನ್ನು ಹೋಮ ಹವನದೊಂದಿಗೆ ಆಚರಿಸಲಾಯಿತು.ಇದರಲ್ಲಿ ಅರ್ಚಕ ಗುಂಡಣ್ಣ ಹಾಗೂ ಶ್ರೀ ರಾಮನಗೌಡ ಸಂಕನಾಳ ಪಿಎಸ್ ಐ ದಂಪತಿಗಳು ಮತ್ತು ಹಂಚಾಟೆ ಹಿರಿಯರು ಎಸ್.ಬಿ.ಸಜ್ಜನ ರಾಜಶೇಖರ ಹಿರೇಮಠ .ಯು ಆರ್ .ಬಳಗಾನೂರ .ಆನಂದ ಕುಲಕರ್ಣಿ .ಸಹೋದರಿಯರು. ಭಾಗವಹಿಸಿದ್ದರು. ಎಲ್ಲರಿಗೂ ಪ್ರಸಾದ ವ್ಯವಸ್ಥೆ ಮಾಡಿಸಲಾಗಿತ್ತು.

ಜಿಲ್ಲಾಮಟ್ಟದ ಕವಿಗೊಷ್ಠಿ/52 ಜನ ಕವಿಗಳ ಭಾಗಿ!!

## ಯುವ ಜನಾಂಗಕ್ಕೆ ಡಾ, ಅಂಬೇಡ್ಕರವರ ಸಾಹಿತ್ಯ ಅವಶ್ಯಕ- ವಿಶ್ವನಾಥರಡ್ಡಿ ದರ್ಶನಾಪುರ ಕರೆ,




ಶಹಾಪುರ,ಪ್ರತಿ ವರ್ಷ ಜಯಂತಿ ಹಬ್ಬಗಳು ಆಚರಣೆಯಾಗುತ್ತಲೆ ಇದ್ದು,ಇಂದಿನವರೆಗೂ ವಿಶ್ವರತ್ನ ಡಾ,ಬಾಬಾಸಾಹೇಬರ ಆದರ್ಶಗಳು ಯುವಕರಿಗೆ ಅರಿವು ಕೊರತೆ ಎದ್ದು ಕಾಣುತ್ತಿದೆ. ಇಂದಿನ ದಿನಮಾನಗಳಲ್ಲಿ ಯುವ ಜನಾಂಗಕ್ಕೆ ಡಾ,ಬಿ,ಆರ್,ಅಂಬೇಡ್ಕರವರ ತತ್ವ ಆದರ್ಶಗಳ ಸಾಹಿತ್ಯದ ಜಾಗ್ರತಿ ಅವಶ್ಯಕವಾಗಿದೆ, ಸಂಘಟನೆಗಳು ಮುಂದಾಗಿ ಪ್ರತಿ ವಾರ್ಷಿಕ ವರ್ಷದಲ್ಲಿ ಕವನ ಸಂಕಲನ, ಕವನಗಳ ವಾಚನ, ಸಾಹಿತ್ಯದ ವೇದಿಕೆಗಳನ್ನು ನಿರ್ಮಾಣ ಮಾಡಿ ಇನ್ನೂ ಸಾಹಿತ್ಯಿಕವಾಗಿ ಡಾ, ಬಾಬಾಸಾಹೇಬರ ಜೀವನ ಬದುಕು ಅರ್ಥೈಹಿಸುವ ಕಾರ್ಯ ನಡೆಯಬೆಕು ಎಂದು ಸಹಕಾರ ಸಂಘಗಳ ಒಕ್ಕೂಟದ ಜಿಲ್ಲಾ ಅಧ್ಯಕ್ಷರಾದ ವಿಶ್ವನಾಥರಡ್ಡಿ ಪಾಟೀಲ್ ದರ್ಶನಾಪುರವರು ಕರೆ ನೀಡಿದರು,ಅವರು ನಗರದ ವೈಷ್ಣವಿ ಹಾಲ್ ನಲ್ಲಿ ಹಮ್ಮಿಕೊಂಡ ಡಾ, ಬಾಬಾಬಾಸಾಹೇಬ್ ಅಂಬೇಡ್ಕರವರ 134 ನೆಯ ಜಯಂತಿ ಅಂಗವಾಗಿ ಹಮ್ಮಿಕೊಂಡ ಡಾ,ಬಿ,ಆರ್,ಅಂಬೇಡ್ಕರ ಸ್ವಾಭಿಮಾನಿ ಬಳಗದ ಆಶ್ರೆಯದಲ್ಲಿ ನಡೆದ ಜಿಲ್ಲಾ ಮಟ್ಟದ ಕವಿಗೊಷ್ಠಿ ಕಾರ್ಯಕ್ರಮವನ್ನು ಉಧ್ಘಾಟನೆ ಮಾಡಿ ಮಾತನಾಡಿದರು,ಪೂಜ್ಯ ಬಂತೆ ಮೆಂತಪಾಲ್ ಬಂತೇಜಿಯವರು ದಿವ್ಯ ಸಾನಿದ್ಯ ವಹಿಸಿದ್ದರು, ಮುಖ್ಯ ಅಥಿತಿಗಳಾಗಿ ಅಗಮಿಸಿದ್ದ ಹಿರಿಯ ದಲಿತಪರ ಚಿಂತಕರಾದ ತಿಮ್ಮಯ್ಯ ಪುರ್ಲೆಯವರು ಮಾತನಾಡಿ, ಶೋಷಿತ ಸಮಾಜದ ಬದಲಾವಣೆ ಶಕ್ತಿಕುಂದುತ್ತಿದೆ, ಹೋರಾಟದ ಕಿಚ್ಚು ಹೆಚ್ಚಿಸಬೇಕಾಗಿದೆ, ಅಂದು ಕವಿಗಳು ಹೆಣ್ತನದ ವರ್ಣನೆಗೆ ಸಾಹಿತ್ಯ ನೃತ್ಯ ಸಂಗಿತಗಳು ಸೀಮಿತವಾಗಿದ್ದವು, ಐದಾರು ದಶಕಗಳ ಹಿಂದೆ ಹುಟ್ಟಿಕೊಂಡ ದಲಿತ ಹೋರಾಟದ ಜ್ವಾಲೆ ಇಂದು ಬಂಡಾಯ ಸಾಹಿತ್ಯದ ಮುಖಾಂತರ ಪುಟಿಯಿತು, ದಲಿತ ಚಳುವಳಿ ಬಂಡಾಯ ಸಾಹಿತ್ಯದ ತಳಹದಿಯಾಗಿದೆ ಎಂದರು, ಶಿಕ್ಷಣ ಪ್ರೇಮಿ ಡಾ,ಭೀಮಣ್ಣ ಮೇಟಿ ಮಾತನಾಡಿ, ಡಾ,ಬಾಬಾಸಾಹೇಬರ ವಿಚಾರದಾರೆಗಳು ಶೈಕ್ಷಣಿಕವಾಗಿ, ಅಭ್ಯಾಸದ ಬಲದಲ್ಲೆ ಸಮಾಜಕ್ಕೆ ಪರಿಚಯ ಮಾಡಬೇಕು ಎಂದರು, ಹಿರಿಯ ನ್ಯಾಯವಾದಿ ಆರ್,ಚೆನ್ನಬಸ್ಸು ಮಾತನಾಡಿ, ತಳ ಸಮುದಾಯಗಳ ಶಕ್ತಿಯನ್ನು ಹೆಚ್ಚಿಸಬೇಕಾದಲ್ಲಿ ಅಧ್ಯಾಯನ ಶಿಬಿರಗಳು ಮತ್ತು ಅಭ್ಯಾಸ ವರ್ಗಗಳನ್ನು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗ್ರತಿಗೊಳಿಸುವಲ್ಲಿ ಮುಂದಾಗಬೇಕು ಎಂದರು, ನ್ಯಾಯವಾದಿ ಸಾಲೋಮನ್ ಅಲ್ಫಡ್, ಯಾದಗಿರಿ ಜಿಲ್ಲಾ ಎಸ್,ಸಿ,ಎಸ್,ಟಿ, ನೌಕರರ ಸಂಘದ ಅಧ್ಯಕ್ಷರಾದ ಶ್ರೀಶೈಲ್ ಹೊಸಮನಿ, ದಲಿತ ಮುಖಂಡರಾದ ಡಾ,ನೀಲಕಂಠ ಬಡಿಗೇರ, ಮಲ್ಲಿಕಾರ್ಜುನ ಪೂಜಾರಿ, ಮಾತನಾಡಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ,ಬಿ,ಆರ್,ಅಂಬೇಡ್ಕರಜಯಂತೊತ್ಸವ ಸಮಿತಿ ಅಧ್ಯಕ್ಷರಾದ ಹೊನ್ನಪ್ಪ ರಸ್ತಾಪುರ, ವಹಿಸಿದ್ದರು, ಅನೇಕ ದಲಿತಪರ ಚಿಂತಕರು ಹಿರಿಯರು ಕಾರ್ಯಕರ್ತರು ಆಹಿತ್ಯಾಸಕ್ತರು ಆಗಮಿಸಿದ್ದರು,

52ಕ್ಕೂ ಹೆಚ್ಚು ಕವಿಗಳಿಂದ ಕವನ ವಾಚನ ಮಾಡಿದರು ಸಾಹಿತ್ಯದ ಮುಖಾಂತರ ಡಾ,ಬಾಬಾಸಾಹೇಬರ ಆದರ್ಶಗಳನ್ನು , ಈ ಕವಿಗೋಷ್ಠಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ,ಗಾಳೆಪ್ಪ ಪೂಜಾರಿ ವಹಿಸಿದ್ದರು, ಮುಖ್ಯ ಅಥಿತಿಗಳಾಗಿ ಡಾ, ರವಿಂದ್ರನಾಥ ಹೊಸಮನಿ, ಅಂಬ್ಲಯ್ಯ ಸೈದಾಪುರ, ದೇವಿಂದ್ರಪ್ಪ ಹಡಪದ, ಸಿ,ಎಸ್,ಭೀಮರಾಯ, ಡಾ,ಗೋವಿಂದ್ರಾಜ ಆಲ್ದಾಳ, ಎಸ್,ಎಸ್,ಡಿ,ಜಿಲ್ಲಾ ಅಧ್ಯಕ್ಷರಾದ ಮಾಹಾದೇವ ದಿಗ್ಗಿ ಉಪಸ್ಥಿತಿರಿದ್ದರು, ಸಾಹೆಬಣ್ಣ ಪುರ್ಲೆ ಮಹೇಂದ್ರ ದಿಗ್ಗಿ ಸೇರಿದಂತೆ ಹಲವಾರು ಜನ ಆಗಮಿಸಿದ್ದರು, ಡಾ,ಮರೆಪ್ಪ ಪರಮೇಶ್ವರ ಪ್ರಾಸ್ತಾವಿಕ

## ನಾಳೆ( ಏ.14) ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ತಾಲೂಕ ಆಡಳಿತ, ತಾಪಂ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಭಾರತ ರತ್ನ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆಯನ್ನು ಪಟ್ಟಣದ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಸರ್ಕಲ್ ನಲ್ಲಿ ಏಪ್ರಿಲ್ 14ರಂದು ಸೋಮವಾರ ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಸಮಾರಂಭದಲ್ಲಿ ಸಚಿವರಾದ ಎಂ.ಬಿ.ಪಾಟೀಲ,ಶಿವಾನಂದ ಎಸ್. ಪಾಟೀಲ, ಶಾಸಕರಾದ ಸಿ.ಎಸ್. ನಾಡಗೌಡ (ಅಪ್ಪಾಜಿ), ರಾಜುಗೌಡ ಪಾಟೀಲ (ಕು.ಸಾಲವಾಡಗಿ), ವಿಧಾನ



ಪರಿಷತ್ ಸದಸ್ಯರಾದ ರವಿಕುಮಾರ ಎನ್,ಪ್ರಕಾಶ ಬಿ.ಹುಕ್ಕೇರಿ, ಸಂಸದ ರಮೇಶ ಚಂ.ಜಿಗಜಿಣಗಿ, ಸುಧಾ ಮೂರ್ತಿ, ಹಣಮಂತ ಆರ್.ನಿರಾಣಿ, ಸುನೀಲಗೌಡ ಬಿ.ಪಾಟೀಲ, ಪಿ.ಎಚ್.ಪೂಜಾರ, ಕೇಶವಪ್ರಸಾದ ಎಚ್, ಕಾಂತಾ ನಾಯಕ, ಸಂಗಮೇಶ ಬಬಲೇಶ್ವರ, ಪುರಸಭೆ ಅಧ್ಯಕ್ಷೆ ಜುಬೇದಾ ಹುಸೇನಬಾಷಾ ಜಮಾದಾರ, ಉಪಾಧ್ಯಕ್ಷೆ ಗೌರಮ್ಮ ಅವ್ವಣ್ಣ ಕುಂಬಾರ ಆಗಮಿಸಲಿದ್ದು ಬಸವರಾಜ ಚಲವಾದಿ ಇವರಿಂದ ಉಪನ್ಯಾಸ ನಡೆಯಲಿದೆ ಎಂದು ಉತ್ಸವ ಸಮಿತಿ ಅಧ್ಯಕ್ಷರಾದ ಡಾ.ವಿನಯಾ ಹೂಗಾರ, ಸದಸ್ಯ ಕಾರ್ಯದರ್ಶಿ ತಾಪಂ ಇಒ ಎನ್.ಎಸ್.ಮಸಳಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಬಸಂತಿ ಜಿ.ಮಠ, ಸಿಪಿಐ ಮೊಹಮ್ಮದ್ ಫಸಿಯುದ್ದೀನ್, ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಧ್ವಾರ ಸಿಡಿಲಿಗೆ ಒಂದು ಎತ್ತು ಸೇರಿದಂತೆ ಕುರಿ ಸಾವು

ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ:ಏ.12:ಸಮೀಪದಮಾಧ್ವಾರ ಗ್ರಾಮದ ಹೊರವಲಯದ ಜಮೀನನಲ್ಲಿ ನಿನ್ನೆ ರಾತ್ರಿ 9-30ಕ್ಕೆ ಸಂಭವಿಸಿದ ಸಿಡಿಲಿಗೆ ಮಾಜಿ ಗ್ರಾಮ ಪಂಚಾಯತ ಸದಸ್ಯ ಶಿವರಾಜ ಗುಂಜಲಪ್ಪ ಇವರಿಗೆ ಸೇರಿದ ಒಂದು ಎತ್ತು ಹಾಗೂ ಕುರಿ ಸಾವನ್ನಪ್ಪಿದ ಘಟನೆ ನೆಡದಿದೆ. ಸುದ್ದಿ ತಿಳಿದು ಪಶು ಇಲಾಖೆಯ ವೈದ್ಯಾಧಿ ಕಾರಿಗಳು, ಗ್ರಾಮ ಲೇಕ್ಕಿಗ, ಪೋಲಿಸ ಇಲಾಖೆಯ ಸಿಬ್ಬಂದಿಗಳು ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ.

ಶೋಷಿತರ ಆಶಾಕಿರಣ ದೀನದಲಿತರ ನಾಯಕ ದಲಿತ ಅಣ್ಣ

## ಮಾವಳ್ಳಿ ಶಂಕರ್ ಸಾಹೇಬರಿಗೆ ಎಂಎಲ್ಸಿ ಸ್ಥಾನ ನೀಡಿ ಪರಶುರಾಮ್ ಮಹಲ್ ರೋಜ ಮುಖ್ಯಮಂತ್ರಿಗಳಿಗೆ ಮನವಿ.

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ್ ದಲಿತ ಹೋರಾಟಗಾರ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗೆ ನ್ಯಾಯ ಕೊಡಿಸುವ ಸರದಾರ ಅಸ್ಪೃಶ್ಯತೆ ನಿವಾರಣೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಸಮಾಜದ ಒಳಿತಿಗಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಚಾರ ವಿಚಾರಗಳನ್ನು ಅರಿತು-ಕೊಂಡು ಅವರ ಮಾರ್ಗದರ್ಶನದಲ್ಲಿ ತಮ್ಮ ಸಮಾಜವನ್ನು ದೀನದಲಿತರು ಆಶಾಕಿರಣ ನಿರಂತರ ಚಳುವಳಿಯ ನೇತಾರರು ಹಾಗೂ ಪ್ರೊಫೆಸರ್ ಬಿ ಕೃಷ್ಣಪ್ಪನವರ ಗರ್ಡಿಯಲ್ಲಿ ಬೆಳೆದಂತ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕರಾದ ಅಣ್ಣ ಮಾವಳ್ಳಿ ಶಂಕರ್ ಸಾಹೇಬರಿಗೆ ಸನ್ಮನ್ಯ ಶ್ರೀ ಸಿದ್ದರಾಮಯ್ಯ ಸಾಹೇಬ್ರು



ಮುಖ್ಯಮಂತ್ರಿಗಳು ಇವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಅಣ್ಣ ಮಾವಳ್ಳಿ ಶಂಕರ್ ಸಾಹೇಬರಿಗೆ ಎಂಎಲ್ಸಾ

ನ ನೀಡಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಂಘಟನಾ ಸಂಚಾಲಕರಾದ ಪರುಶುರಾಮ್ ಮಹಲ್ ರೋಜಾ ಮನವಿ ಮಾಡಿಕೊಂಡಿದ್ದಾರೆ.



ರಾತ್ರಿ ವೇಳೆ ಮಳೆ ಬಂದು ರೈತರು ಬೆಳೆ ಹಾನಿಯಾಗಿದೆ ಸುರಪೂರ ತಾಲೂಕಿನ ರಾಯಗೇರಾ ಗ್ರಾಮದಲ್ಲಿ ರೈತರು ಬೆಳೆದ ಭತ್ತ ಮತ್ತು ಸಜ್ಜೆ ಮಳೆಯಿಂದ ಎಲ್ಲಾ ರೈತ ಬೆಳೆದ ಮಳೆಯಿಂದ ಹಾನಿಯಾಗಿದೆ ಸರ್ಕಾರವು ಬೆಳೆದಿರ್ತಕ್ಕಂತ ಬೆಳೆ ಹಾನಿ ಆಗಿರುವುದರಿಂದ ಗಮನ ಹರಿಸಬೇಕು ಬೆಳೆಗಳಿಗೆ ಪರಿಹಾರ ನೀಡಬೇಕೆಂದು ರಾಯಗೇರಾ ಗ್ರಾಮದ ಯಲ್ಲಪ್ಪ ನ್ಯಾಯವಾದಿಗಳು ಒತ್ತಾಯವಾಗಿದೆ.

## ಬೆಳೆಗಳಿಗೆ ನೀರು ಹರಿಸುವದಕ್ಕಾಗಿ ವಿವಿಧ ಹಂತದ ಹೋರಾಟ,

ಮಲ್ಲಮ್ಮ ನುಡಿ ವಾರ್ತೆ

ಹುಣಸಗಿ: ಇತ್ತೀಚೆಗೆ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಯಾದಗಿರಿ ಜಿಲ್ಲೆ ಸೇರಿದಂತೆ ನಾರಾಯಣಪುರ ಎಡ ಮತ್ತು ಬಲದಂಡೆ ಕಾಲುವೆಗಳಿಗೆ ನೀರು ಹರಿಸುವಂತೆ ಮಾಜಿ ಶಾಸಕನಾಗಿ ರೈತರ ಶ್ರೇಯೋಭಿಲಾಷಿಯಾಗಿ ಹೋರಾಟ ಮಾಡಿದ್ದೆನೆ. ಇದರಲ್ಲಿ ಎಲ್ಲಾ ರೈತರ, ಸಂಘ ಸಂಸ್ಥೆಗಳು ಕೂಡಾ ಹೋರಾಟದಲ್ಲಿ ಕೈಜೋಡಿಸಿದ್ದಾರೆ. ರೈತರ ಭತ್ತ ಸೇರಿದಂತೆ ಹಿಂಗಾರು ಬೆಳೆಗಳಿಗೆ ನೀರು ಹರಿಸುವದಕ್ಕಾಗಿ ವಿವಿಧ ಹಂತದ ಹೋರಾಟ, ಮನವಿಗಳನ್ನು ಮಾಡಲಾಯಿತು.

ಇದರಲ್ಲಿ ಕ್ಷುಲ್ಲಕ ರಾಜಕೀಯ ನಾನು ಮಾಡಿದ್ದೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಪತ್ರಿಕಾ ಹೇಳಿಕೆ ನೀಡುತ್ತಿರುವುದು ಖಂಡನೀಯ.

ನಮ್ಮ ಹೋರಾಟ ತೀವ್ರತೆ ಪಡೆದುಕೊಂಡಾಗ, ಕೋರ್ಟ ಆದೇಶದಿಂದ ಕಾಲುವೆಗೆ ನೀರು ಹರಿಸಿ ಸರಕಾರ ಮುಜುಗರಕ್ಕೆ ಈಡಾಗಿದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ರೈತರ ಹಿತ ಕಾಯಲು ಕೊರ್ಟ ಮೆಟ್ಟಿಲು ಏರಲು ನೀವೆ ಕಾರಣ. ಸರಕಾರ ಕೃಷ್ಣಾ ಕಾಲುವೆಗೆ ಐಸಿಸಿ ತೀರ್ಮಾನದಂತೆ ರೈತರ ಬೇಡಿಕೆಗೆ ಅನುಸಾರವಾಗಿ ನೀರು ಹರಿಸದೆ ಇದ್ದಾಗ ಕೊರ್ಟಗೆ ಅರ್ಜಿ ಸಲ್ಲಿಸಲಾಯಿತು. ಇದರಲ್ಲಿ ರಾಜಕೀಯ ಏನು ಬಂತು. ರೈತರ ಹಿತ ಕಾಯದೆ, ಕೋರ್ಟ ಆದೇಶದ ವಿರುದ್ದ ಕೋರ್ಟಗೆ ಹೋದವರು ನೀವು. ಇದನ್ನು ರೈತ ಗಮನಿಸಲ್ಲಾ ಅಂದುಕೊಂಡರೆ, ಅದು ತಪ್ಪು.

ಆಡಳಿತ ಪಕ್ಷವಾಗಿ ನೀವು ಸಮಯೋಚಿತ ನಿರ್ಧಾರ ತೆಗೆದುಕೊಳ್ಳಲು ವಿಫಲವಾದಾಗ ವಿರೋಧ ಪಕ್ಷವಾಗಿ ರೈತರ ಬೇಡಿ-ಕೆಗೆ ಹೋರಾಟ ಮಾಡುವುದು ನನ್ನ ಆದ್ಯ ಕರ್ತವ್ಯವಾಗಿದೆ. ಇದರೊಂದಿಗೆ ಐಸಿಸಿ ಸಭೆ ನಡೆದಾಗ ಜಿಲ್ಲಾ ಉಸ್ತುವಾರಿ ಸಚಿವರೆ ಗೈರಾಗುವುದು. ಇನ್ನು ಜಿಲ್ಲೆಯ, ತಾಲೂಕಿನ ಶಾಸಕರು ಗಟ್ಟಿ ಧ್ವನಿಯಿಂದ ಅಂಕಿ ಅಂಶ ಸಹಿತ ನೀರು ಹರಿಸಲು ಆಗ್ರಹ ಮಾಡದೆ ಮುಖಭಂಗವಾಗಿರೋದು ನಿಮಗೆ ಇದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇನ್ನು ತೆಲಂಗಾಣಕ್ಕೆ ನೀರು ಹರಿಸಿದಾಗ ನಾನು ಬಸವ ಸಾಗರ ಜಲಾಶಯ ಹಾಗೂ ನಾರಾಯಣಪುರದ ಮುಖ್ಯ ಇಂಜಿನೀಯರ ಕಚೇರಿಗೆ ಭೆಟಿ ನೀಡಿ ಮಾಹಿತಿ ಪಡೆದು, ಗಲಾಟೆ ಮಾಡಿದಾಗ ನದಿಗೆ ನೀರು



ಹರಿಸುವದನ್ನು ನಿಲ್ಲಿಸಲಾಯಿತು. ಹಾಗಾದರೆ ರಾತ್ರಿ ಕೃಷ್ಣೇಗೆ ನೀರು ಹರಿಸಿದರೂ ಕೂಡಾ ನೀವು ಸುಮ್ಮನೆ ಇರುವಿರಾ?. ಒಂದು ವೇಳೆ ಅದೇ ನೀರು ನಮ್ಮಲ್ಲಿ ಇದ್ದಿದ್ದರೆ, ನಮ್ಮ ರೈತರ ನೀರಿನ ಸಂಕಷ್ಟವಾದರೂ ತಪ್ಪುತ್ತಿತ್ತು. ಇದಕ್ಕೆ ಯಾರು ಹೋಣೆ. ಆದರೆ ತೆಲಂಗಾಣಕ್ಕೆ ನೀರು ಹರಿಸುವಲ್ಲಿ ನಿಮ್ಮ ಪಾತ್ರವು ಇದೆ ಎಂಬ ಸಂಶಯ ಮೂಡುತ್ತಿದೆ. ನೀವೆ ಅಕ್ರಮವಾಗಿ ನದಿಗೆ ನೀರು ಹರಿಸಲು ಕಾರಣರಾಗಿದ್ದಿರಿ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ.

ಆಶ್ಚರ್ಯ ಎಂದರೆ ಇಷ್ಟೆಲ್ಲಾ ನಮ್ಮ ಹಕ್ಕಿನ ನೀರು ತೆಲಂಗಾಣಕ್ಕೆ ಹರಿದು ಹೋಗುತ್ತಿದ್ದರು ಕೂಡಾ, ಜಿಲ್ಲಾ ಉಸ್ತುವಾರಿ ಸಚಿವರಾಗಲಿ, ಶಾಸಕರಾಗಲಿ ಕ್ಷೇತ್ರದಲ್ಲಿದ್ದು, ಒಬ್ಬರು ಕೂಡಾ ನಾರಾಯಣಪುರ ಜಲಾಶಯಕ್ಕೆ ಭೇಟಿ ನೀಡಲೆ ಇಲ್ಲಾ. ನಮ್ಮ ನೀರಾವರಿ ಜಿಲ್ಲೆಯಲ್ಲಿ ಏನಾಗುತ್ತಾ ಇದೆ. ಇದೆನಾ ನಿಮ್ಮ ರೈತರ ಬಗ್ಗೆ ತೋರುವ ಕಾಳಜಿ. ರೈತರ ಪ್ರಶ್ನೆಗಳಿಗೆ ಉತ್ತರ ನೀಡಲಾಗದೆ ನಿಮ್ಮದೆ ಸರಕಾರ ಇದ್ದರೂ ಕೂಡಾ, ಸಿಎಮ್, ಡಿಸಿಎಮ್ ಎಂದು ಏಕಾಂಗಿಯಾಗಿ ಅದು ರೈತರು ಛೀಮಾರಿ ಹಾಕಿದಾಗ ಓಡಾಟ ಶುರು ಮಾಡಿದ್ದು, ಅನ್ನದಾತ ಗಮನಿಸಿದ್ದಾನೆ. ಜಿಲ್ಲೆಯಲ್ಲಿ ಪ್ರಭಾವಿ ಸಚಿವರಾಗಿ, ಶಾಸಕರು ಇರುವಾಗಲೇ, ರೈತರು ನೀರಿಗಾಗಿ ಎಷ್ಟು ಸಂಕಷ್ಟ ಅನುಭವಿಸಿದರು. ದೇಶದ ಹೊಟ್ಟೆ ತುಂಬಲೂ ಗೇಟ್ ತೂಬು ಮುರಿಯುವ ಕೃತ್ಯಕ್ಕೆ ರೈತ ಕೈಹಾಕ ಬೇಕಾಯಿತು, ಎಂಬುದನ್ನು ಯೋಚಿಸಿದ್ದಿರಾ. ಕೈಲಾಗದೆ ಮೈ ಪರಚಿಕೊಂಡ ಎನ್ನುವಂತೆ ರೈತರಿಗೆ ಉತ್ತರಿಸಲಾಗದೆ, ರೈತರು ನಮ್ಮ ಹೋರಾಟ ಬೆಂಬಲಿಸಿದ್ದಕ್ಕೆ ಇಲ್ಲಸಲ್ಲದ ಹೇಳಿಕೆ ನೀಡುತ್ತಿರುವುದು ವಿಷಾದನೀಯ ಎಂದು ಮಾಜಿ ಶಾಸಕ ನರಸಿಂಹನಾಯಕ ರಾಜುಗೌಡ ಹೇಳಿದ್ದಾರೆ. ಇದನ್ನೆ ಭತ್ತ ಒಣಗಿ ಹೋದ, ಬೆಳೆ ಹಾಳಾದ ರೈತರ ಗ್ರಾಮಗಳ ಜಮೀನಿಗೆ ಭೇಟಿ ನೀಡಿ ಮಾತನಾಡಿ, ಎಲ್ಲೊ ಏಸಿ ರೂಮಲ್ಲಿ ಕುಳಿತು ಮಾತನಾಡೋದು ಅಲ್ಲಾ ಎಂದು ತಿರುಗೇಟು ನೀಡಿದ್ದಾರೆ.

## ಜಿಲ್ಲೆಯಲ್ಲಿ ಮೌಢ್ಯ ಹುಟ್ಟುಹಾಕುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಿ: ಡಿಸಿಗೆ ದಸಂಸ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜಿಲ್ಲೆ ಮತ್ತು ಎಲ್ಲಾ ತಾಲೂಕಗಳು ಒಳಪಟ್ಟಂತೆ ಎಲ್ಲೆಡೆ ಮೂಡನಂಬಿಕೆ ಹೆಚ್ಚಾಗುತ್ತಿದ್ದು ಇದರ ವಿರುದ್ಧ ಕ್ರಮಕೈಗೊಂಡು ಜಿಲ್ಲೆಗೆ ಕೆಟ್ಟ ಹೆಸರು ಬರುತ್ತಿರುವುದನ್ನು ತಡೆಗಟ್ಟುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ॥ ಬಿ. ಕೃಷ್ಣಪ್ಪ ಸ್ಥಾಪಿತ ಹೆಣ್ಣೂರು ಶ್ರೀನಿವಾಸ ಬಣ) ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ದಸಂಸ ಜಿಲ್ಲಾ ಸಂಚಾಲಕ ಮೋಹನರಾಜ್ ಗೌಡ್ ಮಾತನಾಡಿ, ಮೂಡನಂಬಿಕೆ ಹೇಳಿಕೆಯ ಮೂಲಕ ಸರ್ವ ಜನರಿಗೆ ಅವರ ಬದು-ಕಿಗೆ ದಾರಿ ತಪ್ಪಿಸುವಂಥ ಕೆಲಸ ನಡೆದಿದೆ ಸುಳ್ಳು ಹೇಳಿ ಜನರ ಕಣ್ಣು ಮುಂದೇನೆ ಸ್ವಾಮೀಜಿಗಳಂತೆ ಹೇಳಿ ದರೋಡೆ ಮಾಡುತ್ತಿರುವ ಢೋಂಗಿ ಸ್ವಾಮಿಗಳು ಹಸಿ ಮಾಂಸದಂತೆ ಜನರಿಂದ ರೂಪಾಯಿಗಳನ್ನು ಕಿತ್ತಿ ತಿನ್ನುತ್ತಿದ್ದಾರೆ.

ದಿನಗುಲಿ ಮಾಡುವಂತ ಬಡಪಾಯಿ ಜನರಿಗೆ ಮರಳುಇ ಮಾಡಿ ಅವರನ್ನು ಸುಲಿಗೆ ಮಾಡುತ್ತಾ ಬಡವರ ಹೊಟ್ಟೆಮೆಲೆ ಬರೆ ಎಳೆಯುತ್ತಿದ್ದಾರೆ.

ಆದ ಕಾರಣ ಕರ್ನಾಟಕ ದಲಿತ ಸಂಘರ್ಷ ಸಮಿತಿಗೆ ಜನರು ಕಷ್ಟ ಹೇಳಿಕೊಂಡಿರುತ್ತಾರೆ ಆದ್ದರಿಂದ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 506 ಕ್ರಿಮಿನಲ್ ಬೆದರಿಕೆ ಐಪಿಸಿ ಸೆಕ್ಷನ್ 300 ರ ಅಡಿಯಲ್ಲಿ ಮಾಟ, ಮಂತ್ರ, ಮೂಡನಂಬಿಕೆ, ಹೆಸರೆಳಿ ಹೆಣ್ಣುಮಕ್ಕಳಿಗೆ ಬಾಲ್ಯವಿವಾಹ ಮಾಡುತ್ತಿರುವ ವರ ವಿರುದ್ದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಸ್ವಾತಂತ್ರ್ಯ ದೊರಕಿ 78 ವರ್ಷವಾದರು ಇನ್ನು ಮೂಡನಂಬಿಕೆ ಜೀವಂತವಿದೆ ಆದರೆ ಗ್ರಾಮಗಳಲ್ಲಿ ದೇವರುಗಳು ಹೆಸರು ಹೇಳಿ ಸಮಾಜಕ್ಕೆ ಮೋಸ ವಂಚನೆ ಮಾಡುತ್ತಿರುವಂತ ಡಾಂಬಿಕೋರರ ಅವಳಿ ಹೆಚ್ಚಾಗಿದೆ ಜಿಲ್ಲಾಢಳಿತ ಇವರ ಡಾಂಬಿಕೋರರ ವಿರುದ್ಧ ಮತ್ತು ಇವರ ಶಿಷ್ಯಂದರ ವಿರುದ್ಧ ಪರಿಶೀಲನೆ ಮಾಡಿ ಕಾನೂನು ಚೌಕಟ್ಟಿನಲ್ಲಿ ಮೂಡನಂಬಿಕೆ ಹರಡುತ್ತಿರುವವರ ವಿರುದ್ಧ ಕಾನೂನಿನ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಸಂಘಟನಾ ಸಂಚಾಲಕರಾದ ಯೇಸು ಹೊಸಳ್ಳಿ.ಕೆ, ನಾಗು ಗುತ್ತಿಪೇಟೆ ಸುಂದರ್ ರಸ್ತಾಪುರ,

ಶಹಾಪುರ ತಾಲ್ಲೂಕು ಸಂಚಾಲಕ ಹನುಮಂತ ಗೊಬ್ಬೂರ, ಧರ್ಮರಾಜ ನಾಟೇಕರ್, ಭೀಮು ಹುಲಿಮನಿ, ಆಂಜನೇಯ ಟೊಣ್ಣುರು, ಕಾಮಣ್ಣ ದೇವಿನಗರ, ವಿಭಾಗೀಯ ಸಂಚಾಲಕ ಭೀಮಣ್ಣ ಬಡಿಗೇರ, ಧರ್ಮರಾಜ ನಾಟೇಕರ್, ಭೀಮರಾಯ ದೊಡ್ಡಮನಿ, ಭೀಮರಾಯ ಹೊಸಮನಿ, ಶಹಾಪೂರ ತಾಲ್ಲೂಕು ವಿದ್ಯಾರ್ಥಿ ಒಕ್ಕೂಟ ಸಂಚಾಲಕ ಭೀಮಶಂಕರ್ ಮಲಾರ ಇನ್ನಿತರರು ಇದ್ದರು.

## ಹುಣಸಗಿ ತಾಲೂಕಿನ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಜನಸಂಪರ್ಕ ಸಭೆ ಕಾರ್ಯಕ್ರಮ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪೃಥ್ವಿ ಶಂಕರ್, ಸುರಪುರ ಡಿವೈಎಸ್ಪಿ ಜಾವಿದ ಇನಾಮ್ದಾರ, ಹಾಗೂ ಹುಣಸಗಿ ಪೊಲೀಸ ಠಾಣೆ ಸಿಪಿಐ ರವಿಕುಮಾರ, ಹುಣಸಗಿ ಪಿಎಸ್ಐ ಚಂದ್ರಶೇಖರ್ ಭಾಗಣ್ಣ ಕ್ರೈಂ ಪಿಎಸ್ಐ ಹುಣಸಗಿ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂದಿಗಳು ಹಾಗೂ ಈ ಕಾರ್ಯಕ್ರಮದಲ್ಲಿ

ಸಂಘಟನೆಯ ಮುಖಂಡರುಗಳು ಊರಿನ ಹಿರಿಯ ನಾಗರಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಈ ಕಾರ್ಯಕ್ರಮದಲ್ಲಿ ಮಾತನಾಡಿದ ನಾಗಯ್ಯ ಸ್ವಾಮಿ ದೇಸಾಯಿ ಗುರು ಜಿಲ್ಲಾ ಅಧ್ಯಕ್ಷರು ಬೇಡ ಜಂಗಮ ಮಹಾಸಭಾ ಯಾದಗಿರಿ ಮಾತನಾಡಿ ಹುಣಸಗಿ ಪಟ್ಟಣದಲ್ಲಿ ಭಾನುವಾರ ಎಪಿಎಂಸಿಯಲ್ಲಿ ಕುರಿ ಮಾರ್ಕೆಟ್ ಇದ್ದರೂ ಕೂಡ ರಸ್ತೆಯಲ್ಲಿ ಕುರಿ ಮಾರಾಟ ಮಾಡುತ್ತಾರೆ ಅದ-ರಿಂದ ಸರ್ಕಾರಿ ಬಸ್ಸುಗಳಿಗೆ ಬಸ್ಸಲ್ಲಿರುವ ಪ್ರಯಾಣಿಕರಿಗೆ ಹಾಗೂ ಮೋಟಾರ್ ಬೈಕ್ ಸವಾರರಿಗೆ ಅನೇಕ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತದೆ ಕೂಡಲೇ ಕುರಿ ಮಾರುಕಟ್ಟೆ ಬೇರೆ ಕಡೆ ಶಿಫ್ಟ್ ಮಾಡಬೇಕು ಎಂದು ಒತ್ತಾಯಿಸಿದರು.

ಮತ್ತು ಈ ಸಂದರ್ಭದಲ್ಲಿ ಹುಣಸಗಿ ತಾಲೂಕ ಡಿಎಸ್ಎಸ್ ಸಂಘದ ಅಧ್ಯಕ್ಷ ವೀರೇಶ್ ಗುಳಬಾಳ್ ಅವರು ಮಾತನಾಡಿ ಹುಣಸಗಿಯ ತಾಲೂಕಿನ ಕೆಲವೊಂದು ಹಳ್ಳಿಗಳಲ್ಲಿ ಇಸ್ಪೇಟ್ ಅಂದರ್ ಬಾರ್ ಆಟ ಹಾಗೂ ಮಟಕ ಕ್ರಿಕೆಟ ಬೆಟ್ಟಿಂಗ ದಂದೆ ನಡಿತಾ ಇದೆ ಕೂಡಲೆ ಪೊಲೀಸರ ಗಮನಕ್ಕೆ ಬಂದರೆ ಅಂತವರು ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು ಎಂದು ಹೇಳಿದರು

, ಈ ಕಾರ್ಯಕ್ರಮ ದಲ್ಲಿ ಮಾತನಾಡಿದ ಹುಣಸಗಿ

ತಾಲೂಕ್ ಟಿಪ್ಪು ಸುಲ್ತಾನ ಸಂಯುಕ್ತರಂಗದ ಅಧ್ಯಕ್ಷ ರಸುಲ ಬೆನ್ನೂರು

ಹುಣಸಗಿ ತಾಲೂಕ್ ಆಗಿದ್ದರು ಕೂಡ ಬಸವೇಶ್ವರ ಸರ್ಕಲ್ ಮಾಂತಸ್ವಾಮಿ ಸರ್ಕಲ್ ಬಸ್ ಸ್ಟಾಪ್ ಹತ್ತಿರ ಮೂರು ಸಿಸಿ ಕ್ಯಾಮೆರಾ ಗಳನ್ನು ಅಳವಡಿಸಿದ್ದರು

ಸಿ ಸಿ ಕ್ಯಾಮೆರಾ ಗಳನ್ನು ಬಂದಾಗಿದ್ದು ಕಳ್ಳತನ ದರೋಡೆ ಮೋಟರ್ ಸೈಕಲ ಹಾಗೂ ಸರಗಳ್ಳರಿಗೆ ಮಾಡುವರಿಗೆ ಅನುಕೂಲವಾಗಿದೆ ಕೂಡಲೇ ಬಸವೇಶ್ವರ ಸರ್ಕಲ ಹಾಗೂ ಮಾಂತಸ್ವಾಮಿ ಸರ್ಕಲ್ ಹಾಗೂ ಬಸ್ ಸ್ಟಾಪ್ ಹತ್ತಿರ ಮೂರು ಬಂದ್ ಆಗಿರುವ ಸಿ ಸಿ ಕ್ಯಾಮೆರಾ ಗಳನ್ನು ರಿಪೇರಿ ಮಾಡಿಸಿ ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ಯಾವುದೇ ತೆ-ಊಂದರೆಯಾಗದಂತೆ ಸಿ ಸಿ ಕ್ಯಾಮೆರಾ ಗಳನ್ನು ಅಳವಡಿಸಬೇಕೆಂದು ಯಾದಗಿರಿ ಪೊಲೀಸ ವರಿಷ್ಠ ಅಧಿಕಾರಿಗಳಿಗೂ ಹಾಗೂ ಸುರಪುರ ಡಿವೈಎಸ್ಪಿ ಅವರಿಗೂ ರಸುಲ್ ಬೆನ್ನೂರ್ ಮಾತನಾಡಿ ತಿಳಿಸಿದರು

ಜನ ಸಂಪರ್ಕ ಕಾರ್ಯಕ್ರಮದಲ್ಲಿ ಮಾತನಾಡಿದ ಯಾದಗಿರಿ ಹಿರಿಯ ಪೊಲೀಸ್ ವರಿಷ್ಠ ಅಧಿಕಾರಿಗಳು ಪೃಥ್ವಿ ಶಂಕರ

ಮೊನ್ನೆ ಇಸ್ಲಾಂಪುರ ವರವಲ್ಲದಲ್ಲಿ ಜೂಜಾಟ ಆಡುವರನ್ನು ಬಂಧಿಸಿ ನಾಲ್ಕು ಕಾರುಗಳು ಹಾಗೂ 14 ಮೋಟರ್ ಸೈಕಲ್ ಗಳನ್ನು ವಶಕ್ಕೆ ಪಡೆದಿದ್ದೇವೆ ಎಂಟು ಜನರ ಮೇಲೆ ಪ್ರಕರಣ ದಾಖಲಿಸಿದ್ದೇವೆ ಇನ್ನು ಎಲ್ಲಿ ಮಟ್ಕಾ ಇಸ್ಪೇಟ್ ಕ್ರಿಕೆಟ್ ಬೆಟ್ಟಿಂಗ ಆಡಿಸುತ್ತಾರೆ ಮಾಹಿತಿ ಕೊಡಿ ನಮಗೆ ಅಂತವರ ಮೇಲೆ ಪ್ರಕರಣ ದಾಖಲಿಸುತ್ತೇವೆ ಎಂದು

ಮಾತನಾಡಿ ಹೇಳಿದರು

ಈ ಕಾರ್ಯಕ್ರಮದಲ್ಲಿ ಇನ್ನೂ ಅನೇಕರು ಜನರ ಸಮಸ್ಯೆಗಳ ಬಗ್ಗೆ ಮಾತನಾಡಿದರು.

## ಮನೆಗೆಲಸ ಮಾಡುವಂತೆ ತಾಯಿ ಬೈಯ್ದು ಬುದ್ಧಿವಾದ ಹೇಳಿದಕ್ಕೆ ಮಗಳು ಆತ್ಮಹತ್ಯೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.12-ಮನೆಯ ಕೆಲಸ ಮಾಡುವಂತೆ ತಾಯಿ ಬೈಯ್ದು ಬುದ್ಧಿವಾದ ಹೇಳಿದಕ್ಕೆ ಮಗಳು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಅಂಬೇಡ್ಕರ್ ಆಶ್ರಯ ಕಾಲೋನಿಯಲ್ಲಿ ನಡೆದಿದೆ. ಪುತಳಬಾಯಿ ತಂದೆ ಸಂತೋಷ ಕಟ್ಟಿಮನಿ (18) ಆತ್ಮಹತ್ಯೆ ಮಾಡಿಕೊಂಡ ಯುವತಿ.

ಮನೆಯ ಕೆಲಸ ಮಾಡುವಂತೆ ತಾಯಿ ವಿಜಯಲಕ್ಷ್ಮೀ ಬೈಯ್ದು ಬುದ್ಧಿವಾದ ಹೇಳಿದಕ್ಕೆ ಪುತಳಬಾಯಿ ಅಡುಗೆ ಮನೆಯಲ್ಲಿ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ತಿಳಿದುಬಂದಿದೆ.

# ನಿಶುಲ್ಕವಿಲ್ಲದೆ ವಕೀಲರಾಗಿ ಮಾಡಿದ ಪ್ರಭಾಕರರ ಸೇವೆ ಚಿರಸ್ಮರಣೆಯ: ಶಿವಶರಣಪ್ಪ ವಾಲಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಬಾಲ್ಯದಲ್ಲಿಯೆ ಬಾಬಾ ಅವರ ಮನೆಯ ಸೇವಕನಾಗಿನಿಂತ ಬಿ.ಕೆ ಪ್ರಭಾಕರ್ ಅವರು ತಮ್ಮ ಲೌಕಿಕ ಬದುಕಿನಲ್ಲಿ ವಕೀಲರಾಗಿ ಸೇವೆ ಸಲ್ಲಿಸುವಾಗ ಯಾರ ಬಳಿ ಒಂದು ನಯಾ ಪೈಸೆ ಶುಲ್ಕವಿಲ್ಲದೆ ಮಾಡಿದ ಕಾರ್ಯ ಸ್ಮರಣಿಯವಾಗಿದೆ ಎಂದು ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಹೇಳಿದರು.ನಗರದ ಜನವಾಡ ರಸ್ತೆಯಲ್ಲಿರುವ ಬ್ರಹ್ಮಾಕುಮಾರಿ ಕೇಂದ್ರಪಾವನಧಾಮ ಅವರಣದಲ್ಲಿ ಶನಿವಾರ ಶುಕ್ರವಾರ ಪೌಂಟ್ ಅಬುದಲ್ಲಿ ದೇಹ ತ್ಯಾಗ ಮಾಡಿದ್ದ ಬಿ.ಕೆಪ್ರಭಾಕರ್ ಅವರ ಶೃದ್ಧಾಂಜಲಿ ಕಾರ್ಯಕ್ರಮಉದ್ದೇಶಿಸಿಮಾತನಾಡಿದ ಅವರು, ಅವರ ನೇರ ನುಡಿ, ನಿಷ್ಠುರತೆ, ಮಾತೃಹೃದಯತೆ, ಮಧುರತೆ ನಮ್ಮೆಲ್ಲರಿಗೆ ಮಾದರಿ. ಅವರ ಪರಮಧಾಮ ಯಾತ್ರೆ ಸುಖಮಯವಾಗಿರಲಿ ಎಂದು ಹರಿಸಿದರು.ಕರ್ನಾಟಕಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ಈ ಸಂದರ್ಭದಲ್ಲಿ ಮಾತನಾಡಿ, ಮೌಂಟ್ ಅಬು ನಮ್ಮೆಲ್ಲರಿಗೆ ತಪಸ್ಸು ಧಾಮ. ಆ ತಪಸ್ಸು ನೆಲೆಯಲ್ಲಿ ಮುರ್ಲಿ ಓದುವ ಅಮೃತ ಘಳಿಗೆಯಲ್ಲಿ ಶರೀರ ತ್ಯಾಗ ಮಾಡಿರುವ ಪ್ರಭಾಕರ್ ಅಣ್ಣನವರಂಥ ಸಾವು ಕೋಟಿಯಲ್ಲಿ ಒಬ್ಬರಿಗೆ ಸಿಗುತ್ತದೆ. 2013ರಲ್ಲಿ ತಾನು ಈ ಪರಮಾತ್ಮನ ಮನೆಗೆ ಪರಿಚಯವಾಗುವುದಕ್ಕಿಂತಮುಂಚೆ ಮಾಧ್ಯಮಗಳಿಗೆ ಬಾಬಾ ಅವರ ಮನೆಯ ಕಾರ್ಯಕ್ರಮದ ಸುದ್ದಿಗಳು ಕೈಯಿಂದ ಬರೆದು ಕೊಡುತ್ತಿದ್ದರು.ನಾನುಪರಿಚಯವಾದ ಬಳಿಕಅವರ ಬರವಣಿಗೆ ನಿಂತು ಹೊಯಿತು. ನನ್ನ ಜವಾಬ್ದಾರಿ ತಾವು ನಿಭಾಯಿಸುತ್ತಿದ್ದಿರಿ ಎಂದು ಹೇಳುತ್ತಿದ್ದರು ಎಂದರು.ಕೇಂದ್ರದ ಸಂಚಾಲಕರಾದ ಬಿ.ಕೆ ಪ್ರತಿಮಾ ಬಹೆನ್ ಜಿ ಮಾತನಾಡಿ,ಪ್ರಭಾಕರ ಭಾಯಿ ಅವರು ನಮ್ಮನ್ನು ಬಿಟ್ಟು ಎಲ್ಲಿ ಹೋಗಿಲ್ಲ. ಸದಾ ಅವರ ಚೈತನ್ಯ ಆತ್ಮಶಕ್ತಿನಮ್ಮೊಂದಿಗಿದೆ. ಅವರ ಪರಮಾತ್ಮನ ಸೇವೆ ತಾನು ಬೀದರ್ ಗೆ ಬಂದಾಗಿನಿಂದ ಪರಮಾತ್ಮನಿಗೆ ಸಮರ್ಪಿತನಾಗಿ ಹಿರಿಯ ಸಹೋದರನ ಸ್ಥಾನ ತುಂಬಿದ ಮಹಾನುಭಾವರು.

ಅವರ ಅಧ್ಯಾತ್ಮಿಕ ಬದುಕು ಲೌಕಿಕ ಹಾಗೂ ಅಲೌಕಿಕದಲ್ಲಿರುವ ಎಲ್ಲರಿಗೂ ಪ್ರೇರಣಾದಾಯಕವಾಗಿದೆ ಎಂದರು.

ನಂತರ ನೆರೆದ ಸಹೋದರ, ಸಹೋದರಿಯರು ಒಬ್ಬೊಬ್ಬರಾಗಿ ಬಂದು ಪ್ರಬವಾಕರ ಅವರ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು.

ಕೇಂದ್ರದ ಸಮರ್ಪಿತ ಸಹೋದರಿಯರು ಸರದಿಯಂತೆ ಯೋಗದಲ್ಲಿ ತಲ್ಲಿನರಾದರು. ಸರಿಯಾಗಿ 3 ಗಂಟೆಗೆ ನಗರದ ಸರಸಿಂಹ ಝುರಣಿ ಬಳಿ ಇರುವ ರುದ್ರಭೂಮಿಯಲ್ಲಿ ಅವರ ಅಂತ್ಯಸಂಸ್ಕಾರ ನೆರವೇರಿತು.

# “173ನೇ ತಿಂಗಳ ಅನುಭವ ಮಂಟಪ ಕಾರ್ಯಕ್ರಮ ಹಾಗೂ ವೈರಾಗ್ಯನಿಧಿ ಅಕ್ಕಮಹಾದೇವಿ ರವರ ಜಯಂತೋತ್ಸವ”



ಮಲ್ಲಮ್ಮ ನುಡಿ ವಾರ್ತೆ

ಬೀದರ:-ನಗರದಡಾ॥ಚನ್ನಬಸವ ಪಟ್ಟದೇವರ ಪ್ರಸಾದ ನಿಲಯದಲ್ಲಿ ದಿನಾಂಕ 1/04/2025 ರಂದು ಸಾಯಂಕಾಲ 6:30 ಗಂಟೆಗೆ 173ನೇ ತಿಂಗಳ ಅನುಭವ ಮಂಟಪ ಕಾರ್ಯಕ್ರಮ ಹಾಗೂ ವೈರಾಗ್ಯನಿಧಿ ಅಕ್ಕಮಹಾದೇವಿ ರವರ ಜಯಂತೋತ್ಸವ ನಿಮಿತ್ಯ ಅನುಭವ ಚಿಂತನ ಗೋಷ್ಠಿ ಜರುಗಿತು.

ಸಾನಿದ್ಯವಹಿಸಿರುವ ಹೀರೆಮಠ ಸಂಸ್ಥಾನ ಭಾಲ್ಕಿಯ ಪೂಜ್ಯಶ್ರೀ ಮಹಾಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತ,ಜಗತ್ತಿನ ಇತಿಹಾಸದಲ್ಲಿಅಕ್ಕಮಹಾದೇವಿಯವರು ವೈರಾಗ್ಯದ ಮೇರು ವ್ಯಕ್ತಿತ್ವದ ಮಹಾಚೇತನರವರಾಗಿದ್ದರು.ಅಕ್ಕ ನಿಸರ್ಗವನ್ನು ಪ್ರೀತಿಸುತ್ತಿದ್ದರು, ಅವರ ಧ್ಯಾನಾತ್ಮಕ ಮತ್ತು ಆಧ್ಯಾತ್ಮಿಕ ತೇಜ ಉಳ್ಳವರಾಗಿದ್ದರು. 12ನೇ ಶತಮಾನದ ಬಸವಾದಿ ಶರಣರ ಅಕ್ಕಆಗಿದ್ದರು. ಅವರ ವಚನಗಳಲ್ಲಿ ಆಧ್ಯಾತ್ಮಿಕ ಮತ್ತು ಶಿವಯೋಗ ಚಿಂತನೆಗಳು ಅಡಗಿವೆ. ಎಲ್ಲವನ್ನು ಅರಿಯಬಹುದು ಆದರೆ ತಾನಾರು? ಎಂಬ ಅರಿವಿನ ಮಾತನ್ನು ತಿಳಿಸಿದ್ದಾರೆ. ಬಸವಣ್ಣನವರು ಭಕ್ತಿ ಭಂಡಾರಿಯಾಗಿದ್ದರೆ, ಚನ್ನಬಸವಣ್ಣನವರು ಚಿನ್ಮಯ ಜ್ಞಾನಿಯಾಗಿದ್ದರು. ಅಕ್ಕನವರು ವೈರಾಗ್ಯದ ಖಣಿಯಾಗಿದ್ದರು ಎಂದು ನುಡಿದರು.

ಔರಾದ ತಾಲೂಕಿನ ತಹಸೀಲ್ದಾರರಾಗಿದ್ದ ಮಹೇಶ ಪಾಟೀಲ ರವರು ಬಸವಜ್ಯೋತಿ ಪ್ರಜ್ವಲನೆ ಮಾಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ, ವ್ಯಕ್ತಿಯ ವ್ಯಕ್ತಿತ್ವ ವಿಕಸನವು ಅಕ್ಷರ ಸಂಸ್ಕೃತಿಯಿಂದ ಮಾತ್ರ ಸಾಧ್ಯವಿದೆ, ಕನ್ನಡ ಭಾಷೆಯ ರಾಜಾಶ್ರಯ ದೊರಕದೆ ಇದ್ದಲ್ಲಿ ಅಂದು ಅನೇಕ ಮಠಾಧೀಶರು ಕನ್ನಡ ಭಾಷೆ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕನ್ನಡನಾಡು-ನುಡಿಬೆಳೆಸುವುದರಲ್ಲಿ ಪೂಜ್ಯ ಶ್ರೀ ಡಾ॥ ಚನ್ನಬಸವ ಪಟ್ಟದೇವರು ಆಗಿದ್ದಾರೆ. ಅನೇಕ ಭಾಷೆಗಳ ದಬ್ಬಾಳಿಕೆಯಲ್ಲಿ ಕನ್ನಡದ ಗುರುಗಳಾದ ಪಟ್ಟದೇವರು ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸಿದ್ದಾರೆ.

ಬಸವಾದಿ ಶರಣರು ರಚಿಸಿದ ವಚನಗಳು ಕನ್ನಡ ಭಾಷೆಯ ಶ್ರೀಮಂತಿಕೆಗೆ ಪ್ರಮುಖ ಪಾತ್ರವಾಗಿದೆ ಎಂದು ನುಡಿದರು.

ಚಿಕ್ಕಮಂಗಳೂರಿನ ಸಿಂಗಟಗೇರಿಯ ಕಡೂರಿನ ಶರಣ ಚಿಂತಕರಾದ ಡಾ.ಜಿ.ವಿ.ಮಂಜುನಾಥ ರವರು ವೈರಾಗ್ಯನಿಧಿ ಅಕ್ಕಮಹಾದೇವಿಯವರನ್ನು ಕುರಿತು ಅನುಭಾವ ಮಂಡಿಸುತ್ತ, ಚಿಕ್ಕ ವಯಸ್ಸಿನಲ್ಲಿಯೇ ಅಕ್ಕ ಮರುಳಸಿದ್ಧರಿಂದ ಲಿಂಗದೀಕ್ಷೆ ಪಡೆದುಕೊಂಡು, ಶರಣಸತಿ ಲಿಂಗಪತಿ ಭಾವನೆಯಲ್ಲಿ ಲಿಂಗವನ್ನೇ ತನ್ನ ಆರಾಧ್ಯ ದೈವ ಪತಿಯನ್ನಾಗಿ ಮೆಚ್ಚಿಕೊಂಡವರು. ಹಾಗಾಗಿ ಸಾಮಾಜಿಕ ಪ್ರಭುತ್ವ ಮತ್ತು ರಾಜ್ಯ ಪ್ರಭುತ್ವ ಎರಡನ್ನು ಧಿಕ್ಕರಿಸಿ, ತನ್ನ ಆರಾಧ್ಯ ದೈವ ಚನ್ನಮಲ್ಲಿಕಾರ್ಜುನನ್ನು ಕಾಣಲು ಶ್ರೀಶೈಲಕ್ಕೆ ಹೋಗುತ್ತಾರೆ. ಮಧ್ಯದಲ್ಲಿ ಕಲ್ಯಾಣದ ಶರಣರ ಸಂಗದಲ್ಲಿ ಹಲವು ವರ್ಷಗಳ ಕಾಲ ಬದುಕಿ ಶರಣರ ಸಂಗದ ಮಹತ್ವವನ್ನು ತಿಳಿಸಿರುತ್ತಾರೆ. ತಾಯಿಯವರ 434 ವಚನಗಳು, 45 ಸ್ವರ ವಚನಗಳು ಮತ್ತು 67 ದ್ವಿಪದಿಗಳನ್ನೊಳಗೊಂಡ ಯೋಗಾಂಗ ತ್ರಿವಿಧಿ ಗ್ರಂಥ ರಚಿಸಿದ್ದಾರೆ. ಅಕ್ಕ ಲಿಂಗೈಕ್ಯ ಸ್ಥಳವಾದ ಅಕ್ಕನಗವಿಯನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಡಾ॥ ಚನ್ನಬಸವ ಪಟ್ಟದೇವರಿಗೆ ಮತ್ತು ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರಿಗೆ ಸಲ್ಲುತ್ತದೆ ಎಂದು ವಿಷಯ ಪ್ರತಿಪಾದಿಸಿದರು.

ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯದ ಸಂಚಾಲಕಿ ಸುವರ್ಣಾ ಚಿಮಕೋಡೆ ವೇದಿಕೆಯ ಮೇಲೆ ಗೌರವ ಉಪಸ್ಥಿತಿ ಇದ್ದರು. ಪ್ರೊ. ಉಮಾಕಾಂತ ಮೀಸೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯದ ವಿದ್ಯಾರ್ಥಿನಿ ರೇಣುಕಾ ಎಂ. ವಚನ ಚಿಂತನೆ ನೀಡಿದರು. ದಾಸೋಹಿಗಳಾದ ದೀಪಾ ಸೋಮಶೇಖರ ಬಿರಾದಾರ, ಚಿದ್ರಿ ರವರು ಗುರುಬಸವ ಪೂಜೆ ನೆರವೇರಿಸಿದರು. ಚನ್ನಬಸಪ್ಪ ನೌಬಾದೆ, ಸಂಗಯ್ಯಾ ಸ್ವಾಮಿ ಮತ್ತು ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯದ ವಿದ್ಯಾರ್ಥಿಗಳು ವಚನ ಗಾಯನ ನಡೆಸಿಕೊಟ್ಟರು.

ಲಕ್ಷ್ಮೀಬಾಯಿ ಬಿರಾದಾರ ಸ್ವಾಗತ ಕೋರಿದರೆ, ದೀಪಿಕಾ ಘಾಳೆಪ್ಪಾ ನಿರೂಪಿಸಿದರು. ಶ್ರಾವಣಿ ಚಿತೇಂದ್ರ ವಂದಿಸಿದರು. ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಸಂಘ ಬೀದರ ರವರು ಗುರುಬಸವ ಪ್ರಾರ್ಥನೆ ನೆರವೇರಿಸಿದರು. ಪ್ರಮುಖರಾದ ಸಂಗ್ರಾಮಪ್ಪ ಬಿರಾದಾರ, ಶ್ರೀಕಾಂತ ಬಿರಾದಾರ, ಮಹಾಲಿಂಗಪ್ಪಾ ಬೆಲ್ದಾಳೆ, ಸಂಗ್ರಾಮ ಎಂಗಳೆ, ಪಂಚಾಕ್ಷರಿ ಪುಣ್ಯಶೆಟ್ಟಿ, ಶ್ರೀಕಾಂತ ಸ್ವಾಮಿ, ನಾಗಶೆಟ್ಟಿ ಧರ್ಮಪೂರೆ, ಬಸವರಾಜ ಹಳ್ಳೆ, ಶರಣಪ್ಪಾ ಚಿಮಕೋಡೆ, ಸೂರ್ಯಕಾಂತ ಮಾಳಗೆ, ಶಾಮರಾವ ಮ್ಯಾಕರೆ, ಮಲ್ಲಿಕಾರ್ಜುನ ಹುಡುಗೆ, ವಿಜಯಲಕ್ಷ್ಮೀ ಹುಗ್ಗೆಳ್ಳಿ, ಮೀನಾಕ್ಷಿ ಪಾಟೀಲ, ಕಸ್ತೂರಿಬಾಯಿ ಬಿರಾದಾರ, ಶಕುಂತಲಾ ಮಲ್ಕಪ್ಪನೋರ್, ಲಕ್ಷ್ಮೀಬಾಯಿ ರಾಮಶೆಟ್ಟಿ ಮಾಳಗೆ, ಶಶಿಕಲಾ ಪಾಟೀಲ ಮುಂತಾದವರು ಭಾಗವಹಿಸಿದ್ದರು.

# ಜಿಲ್ಲೆಯಲ್ಲಿ ಮೌಢ್ಯ ಹುಟ್ಟುಹಾಕುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಿ: ಡಿಸಿಗೆ ದಸಂಸ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜಿಲ್ಲೆ ಮತ್ತು ಎಲ್ಲಾ ತಾಲೂಕಗಳು ಒಳಪಟ್ಟಂತೆ ಎಲ್ಲೆಡೆ ಮೂಡನಂಬಿಕೆ ಹೆಚ್ಚಾಗುತ್ತಿದ್ದು ಇದರ ವಿರುದ್ಧ ಕ್ರಮಕೈಗೊಂಡು ಜಿಲ್ಲೆಗೆ ಕೆಟ್ಟ ಹೆಸರು ಬರುತ್ತಿರುವುದನ್ನು ತಡೆಗಟ್ಟುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ॥ ಬಿ. ಕೃಷ್ಣಪ್ಪ ಸ್ಥಾಪಿತ ಹೆಣ್ಣೂರು ಶ್ರೀನಿವಾಸ ಬಣ) ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ದಸಂಸ ಜಿಲ್ಲಾಸಂಚಾಲಕ ಮೋಹನರಾಜ್ ಗೌಡ್ ಮಾತನಾಡಿ, ಮೂಡನಂಬಿಕೆ ಹೇಳಿಕೆಯ ಮೂಲಕ ಸರ್ವ ಜನರಿಗೆ ಅವರ ಬದುಕಿಗೆ ದಾರಿ ತಪ್ಪಿಸುವಂಥ ಕೆಲಸ ನಡೆದಿದೆ ಸುಳ್ಳುಹೇಳಿ ಜನರ ಕಣ್ಣುಮುಂದೇನೆ ಸ್ವಾಮೀಜಿಗಳಂತೆ ಹೇಳಿ ದ-ರೋಡೆ ಮಾಡುತ್ತಿರುವ ಢೋಂಗಿ ಸ್ವಾಮಿಗಳು ಹಸಿ ಮಾಂಸದಂತೆ ಜನರಿಂದ ರೂಪಾಯಿಗಳನ್ನು ಕಿತ್ತಿ ತಿನ್ನುತ್ತಿದ್ದಾರೆ. ದಿನಗುಲಿ ಮಾಡುವಂತ ಬಡಪಾಯಿ ಜನರಿಗೆ ಮರಳುಇ ಮಾಡಿ ಅವರನ್ನು ಸುಲಿಗೆ ಮಾಡುತ್ತಾ ಬಡವರ ಹೊಟ್ಟೆಮೆಲೆ ಬರೆ ಎಳೆಯುತ್ತಿದ್ದಾರೆ. ಆದ ಕಾರಣ ಕರ್ನಾಟಕ ದಲಿತ ಸಂಘರ್ಷ ಸಮಿತಿಗೆ ಜನರು ಕಷ್ಟ ಹೇಳಿಕೊಂಡಿರುತ್ತಾರೆ ಆದ್ದರಿಂದ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 506 ಕ್ರಿಮಿನಲ್ ಬೆದರಿಕೆ ಐಪಿಸಿ ಸೆಕ್ಷನ್ 300 ರ ಅಡಿಯಲ್ಲಿ ಮಾಟ, ಮಂತ್ರ, ಮೂಡನಂಬಿಕೆ, ಹೆಸರೇಳಿ ಹೆಣ್ಣು ಮಕ್ಕಳಿಗೆ ಬಾಲ್ಯವಿವಾಹ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಸ್ವಾತಂತ್ರ್ಯ ದೊರಕಿ 78 ವರ್ಷವಾದರು ಇನ್ನು ಮೂಡನಂಬಿಕೆ ಜೀವಂತವಿದೆ ಆದರೆ ಗ್ರಾಮಗಳಲ್ಲಿ ದೇವರುಗಳು ಹೆಸರು ಹೇಳಿ ಸಮಾಜಕ್ಕೆ ಮೋಸ ವಂಚನೆ ಮಾಡುತ್ತಿರುವಂತ ಡಾಂಬಿಕೋರರ ಅವಳಿ ಹೆಚ್ಚಾಗಿದೆ ಜಿಲ್ಲಾಢಳಿತ ಇವರ ಡಾಂಬಿಕೋರರ ವಿರುದ್ಧ ಮತ್ತು ಇವರ ಶಿಷ್ಯಂದರ ವಿರುದ್ಧ ಪರಿಶೀಲನೆ ಮಾಡಿ ಕಾನೂನು ಚೌಕಟ್ಟಿನಲ್ಲಿ ಮೂಡನಂಬಿಕೆ ಹರಡುತ್ತಿರುವವರ ವಿರುದ್ಧ ಕಾನೂನಿನ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಜಿಲ್ಲಾಸಂಘಟನಾಸಂಚಾಲಕರಾದ ಯೇಸು ಹೊಸಳ್ಳಿ.ಕೆ, ನಾಗು ಗುತ್ತಿಪೇಟೆ ಸುಂದರ್ ರಸ್ತಾಪುರ, ಶಹಾಪುರ ತಾಲ್ಲೂಕು ಸಂಚಾಲಕ ಹನುಮಂತ ಗೊಬ್ಬೂರ, ಧರ್ಮರಾಜ ನಾಟೇಕರ್, ಭೀಮು ಹುಲಿಮನಿ, ಆಂಜನೇಯ ಟೊಣ್ಣೂರು, ಕಾಮಣ್ಣ ದೇವಿನಗರ, ವಿಭಾಗೀಯ ಸಂಚಾಲಕ ಭೀಮಣ್ಣ ಬಡಿಗೇರ, ಧರ್ಮರಾಜ ನಾಟೇಕರ್, ಭೀಮರಾಯ ದೊಡ್ಡಮನಿ, ಭೀಮರಾಯ ಹೊಸಮನಿ, ಶಹಾಪೂರ ತಾಲ್ಲೂಕು ವಿದ್ಯಾರ್ಥಿ ಒಕ್ಕೂಟ ಸಂಚಾಲಕ ಭೀಮಶಂಕರ್ ಮಲಾರ ಇನ್ನಿತರರು ಇದ್ದರು.

ನ್ಯಾಷನಲ್ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ ಹಾಗೂ ಸೈನಿಕ ಶಾಲೆಯ ಬೀದರ ಸಂಯುಕ್ತಾಶ್ರಯದಲ್ಲಿ

# ಒಂದು ದಿನದ ಶಿಕ್ಷಕರಿಗೋಸ್ಕರ ಸಾಮರ್ಥ್ಯ ವೃದ್ಧಿ ವಿಚಾರ ಸಂಕಿರಣದ ಉದ್ಘಾಟನೆ



ಮಲ್ಲಮ್ಮ ನುಡಿ ವಾರ್ತೆ

ಬೀದರ::12ನೇ ಏ 2025ರಂದು ನಗರದ ಹೈ.ಕ.ಶಿ. ಸಂಸ್ಥೆಯ ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯದ ಆವರಣದಲ್ಲಿನ ನ್ಯಾಷನಲ್ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ ಮತ್ತು ಸೈನಿಕ ಶಾಲೆಯ ಸಂಯುಕ್ತಾಶ್ರಯದಲ್ಲಿ ಒಂದು ದಿನದ ಶಿಕ್ಷಕರಿಗೋಸ್ಕರ ಸಾಮರ್ಥ್ಯವೃದ್ಧಿ ವಿಚಾರಸಂಕಿರಣದ ಉದ್ಘಾಟನೆಯನ್ನು ಬಿ.ವಿ. ಭೂಮರಡ್ಡಿ ಕಲಾ, ವಿಜ್ಞಾನ ಹಾಘೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪಿ. ವಿಠ್ಠಲ ರಡ್ಡಿಯವರ ಅಮೃತ ಹಸ್ತದಿಂದ ಸಸಿಗೆ ನೀರೇರೆದು ಉದ್ಘಾಟಿಸಿ ಮಾತನಾಡುತ್ತಾ ಇಂದು ಶಿಕ್ಷಕರು ಸಮಾಜ ಶಿಲ್ಪಿಗಳು ಒಂದು ರಾಷ್ಟ್ರ ವಿಶ್ವದಲ್ಲಿ ಎಲ್ಲಾ ರಂಗಗಳಲ್ಲಿ ಉನ್ನತ ಹಂತಕ್ಕೇರಬೇಕಾದರೆ ಶಿಕ್ಷಕರ ಪಾತ್ರ ಬಹಳ ಪ್ರಮುಖವಾಗಿದೆ. ಶಿಕ್ಷಕರಿಂದಲೇ ವಕೀಲರು, ವೈದ್ಯರು, ಅಭಿಯಂತರರು, ಕವಿಗಳು, ಸಾಹಿತಿಗಳು ಹಾಗೂ ವಿಜ್ಞಾನಿಗಳು ಆಗಲು ಸಾಧ್ಯ ಉದಾಹರಣೆಗೆ ಭಾರತದ ಎರಡನೇಯ ರಾಷ್ಟಪತಿ ಡಾ. ಎಸ್. ರಾಧಾಕೃಷ್ಣನ್ ಶಿಕ್ಷಕ ವೃತ್ತಿಯಿಂದಲೆ ರಾಷ್ಟ್ರಪತಿ ಹುದ್ದೆಗೇರಿದ ಪ್ರಥಮ ವ್ಯಕ್ತಿ ಅದು ಶಿಕ್ಷಕ ಸಮುದಾಯಕ್ಕೆ ಹೆಮ್ಮೆಯ ವಿಷಯ, ಅಷ್ಟೇ ಅಲ್ಲದೆ ಗುರು ದ್ರೋಣಾಚಾರ್ಯರು ತಮ್ಮ ಶಿಷ್ಯನಾದ ಅರ್ಜುನನಿಗೆ ಬಿಲ್ವಿದ್ಯೆಯಲ್ಲಿ ಪಾರಂಗತ ಮಾಡಿ, ಕುರುಕ್ಷೇತ್ರದಲ್ಲಿ ಕೌರವರ ವಿರುದ್ದ ಗೆಲ್ಲಲು ಸಾಧ್ಯವಾಯಿತು. ಅದಕ್ಕೆ ಗುರುವೇ ಕಾರಣ ಇಂದು ಶಿಕ್ಷಕರು ಹೊಸ ಹೊಸ ತಂತ್ರಜ್ಞಾನದ ತರಬೇತಿ ಪಡೆದುಕೊಂಡು ವಿದ್ಯಾರ್ಥಿಗಳಿಗೆ ಧಾರೆಯೇರೆದು ಉನ್ನತ ಪದವಿ ಪಡೆಯಲು ಪ್ರೋತ್ಸಾಹಿಸಬೇಕೆಂದು ನುಡಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀಮತಿ ರವೀಂದ್ರ ಕೌರ ಅವರು ಮಾತನಾಡುತ್ತಾ ಬೀದರ ಜಿಲ್ಲೆಯ ಬಹುತೇಕ ಎಲ್ಲಾ ಸಿ.ಬಿ.ಎಸ್.ಸಿ. ಶಾಲೆಗಳ ಶಿಕ್ಷಕರಿಗೆ ವಿದ್ಯಾರ್ಥಿಗಳಂತೆ ಅವರನ್ನು ಸಂಭೋಧಿಸಿ ವಿವಿಧ ಕಿರು ಪರೀಕ್ಷೆ ಮುಖಾಂತರ ಪ್ರೇರಣೆ ನೀಡಿ ನೀವು ಸಹ ನಿಮ್ಮ ನಿಮ್ಮ ಶಾಲೆಯ ಮಕ್ಕಳಿಗೆ ಹೊಸ ಹೊಸ ಕಲಿಕಾ ಕೌಶಲಗಳನ್ನು ಹೆಚ್ಚಿಸಿ ಅವರಿಗೆ ಇಂದಿನ ತಂತ್ರಜ್ಞಾನ ಯುಗದಲ್ಲಿ ಮುನ್ನಡೆಸಲು ತಾಕೀತು ಮಾಡಿದರು.

ಇನ್ನೋರ್ವ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀಮತಿ ವಿನೀತಾ ಬಿ. ಅವರು ಮಾತನಾಡುತ್ತಾ ಶಿಕ್ಷಕರಿಗೆ ಬಲೂನ್‌ನ ಹಾಗೂ ಪ್ರೋಜೆಕ್ಟರ್ ಮೂಲಕ ಹಲವಾರು ಪ್ರಾತ್ಯೇಕ್ಷಿಕೆಗಳನ್ನು ತೋರಿಸುವುದರ ಮುಖಾಂತರ ಜಿಲ್ಲೆಯ ಎಲ್ಲಾ ಶಿಕ್ಷಕ ಮಿತ್ರರಿಗೆ ತಮ್ಮ ಅನುಭವಗಳನ್ನು ಅತೀವ ಕಾಳಜಿಯಿಂದ ಗುರುಬ್ರಹ್ಮಾ, ಗುರುವಿಷ್ಣು, ಗುರುದೇವ ಮಹೇಶ್ವರ, ಎಂಬ ಸಂಸ್ಕೃತ ಶ್ಲೋಕದಂತೆ ಗುರುವಿಗೆ ಭಾರತದಲ್ಲಿ ಅತೀ ಉನ್ನತ ಸ್ಥಾನವಿದೆ ಆ ಸ್ಥಾನವನ್ನು ಗುರುಗಳಾದ ನಾವು ಕಾಪಾಡಿಕೊಂಡು ಹೋಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಮತ್ತು ದಾರಿದೀಪವಾಗಿ ಹೊರಹೊಮ್ಮಬೇಕೆಂದು ನುಡಿದರು.

ವೇದಿಕೆಯ ಮೇಲೆ ನ್ಯಾಷನಲ್ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಶ್ರೀಲತಾ ಜಿ. ಸ್ವಾಮಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಚಾಲನೆಯನ್ನು ಶಿಕ್ಷಕರಾದ ಜಗದೀಶ ಮಾಡಿದರೆ, ಸಾಗರ ಸ್ವಾಗತ ಹಾಗೂ ಆಕಾಶ ಕೊಳಾರೆ ವಂದಿಸಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಆಂಗ್ಲ ಮಾಧ್ಯಮ ಶಾಲೆ ಶಿಕ್ಷಕರು, ಶಿಕ್ಷಕಿಯರು ಉಪಸ್ಥಿತರಿದ್ದರು.


# ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಸಂಪೂರ್ಣ ಬಂದ್ ಮಾಡಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ಜಿಲ್ಲೆಯಾದ್ಯಂತ ರಾಜಾರೋಷವಾಗಿ ಯಾರ ಅಂಜಿಕೆಯಿಲ್ಲದೆ ನಡೆಯುತ್ತಿರುವ ಅನಧಿಕೃತ ಕೋಚಿಂಗ್ ಸೆಂಟರ್‌ಗಳನ್ನು ಸಂಪೂರ್ಣವಾಗಿ ಬಂದ್ ಮಾಡಬೇಕೆಂದು ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಅಡಳಿತ ಮಂಡಳಿ ಸಂಘ ಒತ್ತಾಯಿಸಿದೆ.ಶುಕ್ರವಾರ ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ತೆರಳಿ ಬಿ.ಇ.ಒ ಟಿ.ಆರ್ ದೊಡ್ಡೆ ಅವರಿಗೆ ಲಿಖಿತ ಮನವಿ ಪತ್ರ ಸಲ್ಲಿಸಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳ ಹಾವಳಿಯಿಂದ ಎಲ್ಲ ರೀತಿಯ ಶಾಲೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ, ನಮ್ಮಲ್ಲಿ ಓದುವ ಮಕ್ಕಳು ಕೋಚಿಂಗ್ ಆಸೆಗಾಗಿ ಅನಧಿಕೃತ ಸೆಂಟರ್‌ಗಳಲ್ಲಿ ಪ್ರವೇಶ ಪಡೆಯುತ್ತಿರುವುದರಿಂದ ಶಾಲೆಗಳ ಸ್ಥಿತಿ ಚಿಂತಾಜನಕವಾಗುತ್ತಿದೆ. ಈ ಸೆಂಟರ್‌ಗಳು ಹಣದ ಲಾಲಚಿಗಾಗಿ ನಿತ್ಯ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆ ಹಾಗೂ ಸಾಯಂಕಾಲ 5 ಗಂಟೆಯಿಂದ ರಾತ್ರಿ 9 ಗಂಟೆ ವರೆಗೆ ಕೋಚಿಂಗ್ ನಡೆಸುತ್ತಿರುವುದರಿಂದ ಪಾಲಕರು ಏನು ಅರಿಯದೆ ತಮ್ಮ ಮಕ್ಕಳು ಹೆಚ್ಚೆಚ್ಚುಓದಬೇಕೆಂಬ ಬಯಿಕೆಯಿಂದ ಅಂತಹ ಅನಧಿಕೃತ ಸೆಂಟರ್‌ಗಳತ್ತ ಮುಖ ಮಾಡುತ್ತಿರುವರು. ಇದು ನೇರಾ ನೇರ ಖಾಸಗಿ ಶಾಲೆಗಳ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಸಹ ಈ ಕುರಿತು 05/07/2024ಹಾಗೂ21/08/2024 ಎರಡು ಬಾರಿ ಈ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಬ್ಯಾನ್ ಮಾಡಬೇಕೆಂದು ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಜರುಗಿಸಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಹಾಗೇ ಯಾವುದೇ ಕೋಚಿಂಗ್ ಸೆಂಟರ್‌ಗಳು ಇಲ್ಲಿ ವರೆಗೆ ಬಂದ್ ಆಗಲಿಲ್ಲ ಬದಲಿಗೆ ಹೆಚ್ಚಿಗೆ ಆಗಿರುತ್ತವೆ. ಈಗ ಮತ್ತೊಮ್ಮೆ ತಮಗೆ ಮನವಿ ಸಲ್ಲಿಸಿದ್ದು, ಈಗಲಾದರೂ ವಿದ್ಯಾರ್ಥಿಗಳ ಹಾಗೂ ಶಾಲೆಗಳ ಹಿತದೃಷ್ಟಿಯಿಂದ ಕೂಡಲೇ ಬೀದರ್ ಜಿಲ್ಲೆಯಲ್ಲಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಸಂಪೂರ್ಣವಾಗಿ ಬ್ಯಾನ್ ಮಾಡಬೇಕೆಂದು ಆಗ್ರಹಿಸಿದರು.ಒಂದು ವಾರದ ಹಿಂದಷ್ಟೆ ಈ ವಿಚಾರವಾಗಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿರುವುದಾಗಿ ತಿಳಿಸಿದ ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಅಡಳಿತ ಮಂಡಳಿ ಸಂಘವು ಮುಂದಿನ ವಾರ ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸಹ ಮನವಿ ಸಲ್ಲಿಸುವುದಾಗಿ ಎಚ್ಚರಿಸಿದರು. ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಅಡಳಿತ ಮಂಡಳಿ ಸಂಘದ ಗೌರವಾಧ್ಯಕ್ಷ ರೇವಣಸಿದ್ದಪ್ಪಜಲಾದೆ, ಅಧ್ಯಕ್ಷರಾದ ರಾಜೇಂದ್ರಕುಮಾರ ಮಣಗೀರೆ, ಕಾರ್ಯದರ್ಶಿ ಗುರುನಾಥರೆಡ್ಡಿ ಚಿಂತಾಕಿ, ಬೀದರ್ ತಾಲೂಕಾಧ್ಯಕ್ಷ ಸಂದೀಪ ಶಟಕಾರ ಹಾಗೂ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಆಯೋಧ್ಯ ಶ್ರೀ ರಾಮ ಮಂದಿರ ನಿರ್ಮಾಣದ ಉಸ್ತುವಾರಿಯಾದ ಶ್ರೀ ಗೋಪಾಲ ಜಿ ಅವರಿಗೆ ಇಂದು ಬೀದರ ನಗರದಲ್ಲಿ ಜೈ ಭಾರತ ಮಾತಾ ಸೇವಾ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

# ಬೀದರ್ ವಿವಿಗೆ ನೇಮಕ: ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡ ಅರ್ಜುನ ಕನಕ್ ಅವರನ್ನು ವಿವಿಧ ಸಂಘ ಸಂಸ್ಥೆಗಳಿಂದ ನಗರದಲ್ಲಿ ಶುಕ್ರವಾರ ಸನ್ಮಾನಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ ಭಾಲ್ಕಿ ತಾಲ್ಲೂಕು ಘಟಕದ ಗೌರವ ಕಾರ್ಯದರ್ಶಿ ರಮೇಶ ಚಿದ್ರಿ, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಕಿರಣಕುಮಾರ ಕಾಮಶೆಟ್ಟಿ, ಧನ್ನೂರ(ಎಸ್) ಪಿಕೆಪಿಎಸ್ ಅಧ್ಯಕ್ಷ ಗುರುನಾಥ ಹಿಂದೊಡ್ಡಿ, ಗೋರ್ಟಾ ಪಿಕೆಪಿಎಸ್ ಅಧ್ಯಕ್ಷ ಶಾಂತಕುಮಾರ ಮತ್ತಿತರರು ಇದ್ದರು.

# ಸಹಕಾರಿಗಳಲ್ಲಿ ಮಿತವ್ಯಯ, ಉಳಿತಾಯ ಅತ್ಯಗತ್ಯ-ಜ್ಯಾಂತೀಕರ್



ಮಲ್ಲಮ್ಮ ನುಡಿ ವಾರ್ತೆ

ಬೀದರ:ಸಹಕಾರ ಸಂಘಗಳು ಸಮೃದವಾಗಿ ಬೆಳೆಯ ಬೇಕಾದರೆ ಸಹಕಾರಿಗಳಲ್ಲಿ ಮಿತವ್ಯಯ ಉಳಿತಾಯ ಅತ್ಯಗತ್ಯವಾಗಿದೆ ಎಂದು ಸಂಯುಕ್ತ ಸಹಕಾರಿಯ ರಾಜ್ಯ ನಿರ್ದೇಶಕ ಗುರುನಾಥ ಜ್ಯಾಂತಿಕರ್ ನುಡಿದರು. ಬೀದರ ನಗರದ ಓಲ್ಡ ಆದರ್ಶ ಕಾಲೋನಿಯಲ್ಲಿ ನೂತನ ವಿನ್ನಿ ಸೌಹಾರ್ದ ಸಹಕಾರಿ ಸಂಘದ ಕಛೇರಿ ಉದ್ಘಾಟಿಸಿ ಮಾತನಾಡಿದರು. ಸಹಕಾರ ಸಂಘಗಳು ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕು, ಸದಸ್ಯರಲ್ಲಿ ಉಳಿತಾಯ ಮನೊಭಾವ ಮೂಡಿಸಬೇಕು ಸಹಕಾರಿಯಿಂದ ಬಡವರಿಗೆ ಹೆಚ್ಚಿನ ಸಹಾಯ ಮಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಬ್ಲೇಸಿಂಗ್ ಚರ್ಚ ಚಿಕ್ಕಪೇಟ ಬೀದರ ಸಲೋಮಾನ ಪಾಸ್ಟರ್ ವಹಿಸಿದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ದೇವೀಂದ್ರ ಭದ್ರಪ್ಪಾ ವಹಿಸಿದರು. ಮುಖ್ಯ ಅತಿಥಿಗಳಾದಿ ಧರಿನಾಡು ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಶಿವಶಂಕರ ಬೆಮಳಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶಟ್ಟಿ ಕಾಮಣ್ಣಾ ಉಪಸ್ಥಿತರಿದ್ದರು. ಜಿಲ್ಲಾ ಒಕ್ಕೂಟದ ಸಿ.ಇ.ಓ ಅಮೃತ ಹೊಸಮನಿ ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತ್ತು. ಸಹಕಾರಿಯ ಉಪಾಧ್ಯಕ್ಷರಾದ ಅಶ್ವಿನ ಮುಖ್ಯಕಾರ್ಯನಿರ್ವಾಹಕ ಸಾಮುವೇಲ್, ಆಡಳಿತಮಂಡಳಿಯ ನಿರ್ದೇಶಕರು, ಸದಸ್ಯರು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಏ.15 ರಂದು ಬಸವ ಜಯಂತಿ ಕುರಿತು ಪೂರ್ವಭಾವಿ ಸಭೆ

ಮಲ್ಲಮ್ಮ ನುಡಿ ವಾರ್ತೆ
ಬಳ್ಳಾರಿ,ಏ.12–:ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಏ.30 ರಂದು ಬಸವ ಜಯಂತಿ ಆಚರಣೆ ಕುರಿತು ಚರ್ಚಿಸಲು ಏ.15 ರಂದು ಸಂಜೆ 04.30 ಗಂಟೆಗೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಅಪರಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ಅಧ್ಯಕ್ಷತೆ ವಹಿಸುವರು.

ಸಭೆಗೆ ಸಮುದಾಯದ ಮುಖಂಡರು, ಜಿಲ್ಲಾ ಮಟ್ಟದ ' ಅಧಿಕಾರಿಗಳು ತಪ್ಪದೇ ಹಾಜರಾಗಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

# ಸರ್ವೋತ್ತಮ ಸೇವಾ ಪ್ರಶಸ್ತಿ: ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಏ.12–ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ನೌಕರರಿಗೆ 2024–25ನೇ ಸಾಲಿನಲ್ಲಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ" ಪಡೆಯಲು ತಮ್ಮ ನಾಮ ನಿರ್ದೇಶನ ಸಲ್ಲಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

"ಸರ್ವೋತ್ತಮಸೇವಾಪ್ರಶಸ್ತಿ"ಯ ಎರಡು ಹಂತದ ಪ್ರಶಸ್ತಿಗಳಿಗೂ ಅರ್ಜಿ ಸಲ್ಲಿಸಬಯಸುವವರು, ಪ್ರತಿ ಹಂತಕ್ಕೂ ಪ್ರತ್ಯೇಕವಾಗಿ ತಮ್ಮ ನಾಮ ನಿರ್ದೇಶನವನ್ನು ಸಲ್ಲಿಸಬೇಕು.ನಾಮನಿರ್ದೇಶನವನ್ನು ಸಲ್ಲಿಸಬಯಸುವವರು ಜಾಲತಾಣ https://dparar.karnataka.gov.in/CxÀªÁhttps://sarvothamaawards.karnataka.gov.in/ನಲ್ಲಿ ಏ.28 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಆದೇಶದ ಪ್ರತಿಗಳನ್ನು ಜಾಲತಾಣ https://dparar.karnataka.gov.in/ರ ಸರ್ಕಾರದ ಆದೇಶಗಳು, ತರಬೇತಿ ಹಾಗೂ ಇತರೆ ವಿವರಗಳನ್ನು ಇಲ್ಲಿ ಅವಲೋಕಿಸಬಹುದಾಗಿದೆ.

ಪ್ರಶಸ್ತಿ ವಿವರ: ಜಿಲ್ಲಾ ಮಟ್ಟದ (31ಜಿಲ್ಲೆ*10ಪ್ರಶಸ್ತಿ) ಸೇರಿದಂತೆ 310 ಪ್ರಶಸ್ತಿಗಳು, ರಾಜ್ಯ ಮಟ್ಟದ 30 ಪ್ರಶಸ್ತಿಗಳನ್ನು ವಿತರಿಸಲಾಗುವುದು.ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 080–22230060ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

# ಗರ್ಭಿಣಿಯರು ವೈದ್ಯರ ಸಲಹೆಗಳನ್ನು ತಪ್ಪದೆ ಪಾಲಿಸಲು ಕರೆ



ಮಲ್ಲಮ್ಮ ನುಡಿ ವಾರ್ತೆ
ಕೂಡ್ಲಿಗಿ. ಏ. 12–– ಗರ್ಭಿಣಿಯರು ತಮ್ಮ ಹಾಗೂ ತಮ್ಮ ಮಗುವಿನ ಆರೋಗ್ಯ ಕಾಪಾಡಿಕೊಳ್ಳಲು ವೈದ್ಯರು ನೀಡುವ ಸಲಹೆಯನ್ನು ತಪ್ಪದೆ ಪಾಲಿಸುವಂತೆ ಕೂಡ್ಲಿಗಿ ಶಾಸಕ ಡಾ ಶ್ರೀನಿವಾಸ ಎನ್ ಟಿ ತಿಳಿಸಿದರು. ಅವರು ತಾಲೂಕಿನ ನರಸಿಂಹನಗಿರಿ ಗ್ರಾಮದಲ್ಲಿ ದೊಡ್ಮನೆ ಕುಟುಂಬದಿಂದ ಪ್ರತಿವರ್ಷದಂತೆ ಈ ವರ್ಷವೂ ಸಹ ಮಹಿಳಾ ದಿನದ ನಿಮಿತ್ತ ಗುರುವಾರ ಗುಡೇಕೋಟೆ ಹೋಬಳಿ ವ್ಯಾಪ್ತಿಯ ಗರ್ಭಿಣಿಯರ ಸೀಮಂತ ಹಾಗೂ ಆಶಾ ಕಾರ್ಯಕರ್ತೆಯರ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿ ಮಾತನಾಡುತ್ತ ಕ್ಷೇತ್ರದ ಹಳ್ಳಿಗಾಡಿನಲ್ಲಿ ಸಾಕಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದು, ವೈದ್ಯರು, ನರ್ಸ್‌ಗಳು ನೀಡುವ ಸಲಹೆ ಪಾಲಿಸಬೇಕು. ಅಲ್ಲದೆ, ಗರ್ಭಿಣಿಯರು ಮಗುವಿನ ಆರೋಗ್ಯ ಮತ್ತು ಉತ್ತಮ ಬೆಳವಣಿಗೆ ದೃಷ್ಟಿಯಿಂದ ವೈದ್ಯರು ನೀಡುವ ಚಿಕಿತ್ಸೆ ಜತೆಗೆ ಸಲಹೆ ಪಾಲಿಸಬೇಕು ಎಂದರಲ್ಲದೆ ಕ್ಷೇತ್ರದಲ್ಲಿ ಜನರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಉತ್ತಮ ಆಸ್ಪತ್ರೆಗಳ ಜತೆಗೆ ತಜ್ಞ ವೈದ್ಯರು ಕಾರ್ಯ ನಿರ್ವಹಿಸುವಂತಾಗಲು ಹೆಚ್ಚಿನ ಒತ್ತು ನೀಡಲಾಗುವುದು ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ತಿಳಿಸಿದರು.

ದೊಡ್ಮನೆ ಕುಟುಂಬದ ಹಿರಿಯ ಪುತ್ರ ಹಾಗೂ ಶಾಸಕ ಡಾ ಶ್ರೀನಿವಾಸ ಅವರ ಸಹೋದರ, ಸಮಾಜಸೇವಕ ಎನ್.ಟಿ.ತಮ್ಮಣ್ಣ ಮಾತನಾಡಿ, ಗರ್ಭಿಣಿಯರಿಗೆ ಉಡಿತುಂಬಿ ಹರಸುವಂಥ ಸೀಮಂತ ಕಾರ್ಯಕ್ರಮ, ಗ್ರಾಮೀಣ ಭಾಗದಲ್ಲಿ ಗರ್ಭಿಣಿಯರು ಸೇರಿ ಎಲ್ಲರ ಆರೋಗ್ಯ ಕಾಳಜಿ ವಹಿಸುವಂಥ ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸುವುದು ಈ ಹಿಂದಿನಿಂದಲೂ ನಡೆಸಿಕೊಂಡು ಬಂದ ದೊಡ್ಮನೆ ಕುಟುಂಬಕ್ಕೆ ಹೆಮ್ಮೆಯ ಕಾರ್ಯವಾಗಿದೆ. ಈ ಹಿಂದೆ ನಮ್ಮ ತಂದೆ, ಮಾಜಿ ಶಾಸಕ ದಿ.ಎನ್.ಟಿ.ಬೊಮ್ಮಣ್ಣ ಅವರು ಇಂತಹ ಉತ್ತಮ ಕಾರ್ಯಕ್ಕೆ ಒತ್ತು ನೀಡಿದ್ದರಿಂದ ಮಕ್ಕಳಾದ ನಾವು ನಮ್ಮ ತಾಯಿಯಾದ ಓಬಮ್ಮ ಅವರ ಆಶೀರ್ವಾದದಲ್ಲಿ ಮುನ್ನಡೆಸಿಕೊಂಡು ಹೋಗುತ್ತಿದ್ದೇವೆ ಮತ್ತು ಸಹೋದರ ಡಾ ಶ್ರೀನಿವಾಸ ಹಾಲಿ ಕೂಡ್ಲಿಗಿ ಕ್ಷೇತ್ರದ ಶಾಸಕರಾಗಿದ್ದು ಆರೋಗ್ಯ, ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಅವರು ಮಾಡಿದ ಅಭಿವೃದ್ಧಿ ಕೆಲಸಗಳು ಈಗಾಗಲೇ ನೂರಾರು ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಊಟ ಬಡಿಸಿದ ದೊಡ್ಮನೆ ಕುಟುಂಬ: ಸೀಮಂತ ಕಾರ್ಯಕ್ರಮದ ನಂತರ ನಡೆದ ಭೋಜನದಲ್ಲಿ ಗರ್ಭಿಣಿಯರು, ಆಶಾ ಕಾರ್ಯಕರ್ತೆಯರಿಗೆ ದೊಡ್ಮನೆ ಕಿರಿಯ ಮಗ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹಾಗೂ ಅವರ ಸಹೋದರ, ಸಹೋದರಿಯರು ಸೇರಿ ದೊಡ್ಮನೆ ಕುಟುಂಬವು ಸ್ವತಃ ಮುಂದೆ ನಿಂತು ಊಟ ಬಡಿಸಿದರು. ಅಲ್ಲದೆ, ಅವರ ಯೋಗಕ್ಷೇಮ ಸಹ ವಿಚಾರಿಸಿಕೊಂಡು, ಉಡಿ ತುಂಬಿ ಹರಸಿದ ದೊಡ್ಮನೆ ಕುಟುಂಬದ ಕಾರ್ಯವನ್ನು ಕೆಲ ಗರ್ಭಿಣಿಯರು, ಆಶಾ ಕಾರ್ಯಕರ್ತೆಯರು ಶ್ಲಾಘಿಸಿದರು.

ಮಾಜಿ ಶಾಸಕ ದಿ.ಎನ್.ಟಿ.ಬೊಮ್ಮಣ್ಣ ಅವರ ಧರ್ಮಪತ್ನಿ ದೊಡ್ಮನೆ ಓಬಮ್ಮ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾಧ್ಯಾಪಕಿ ಪ್ರೊ.ಎನ್.ಟಿ.ಗಂಗಮ್ಮ, ಜಿ.ಪಂ. ಮಾಜಿ ಸದಸ್ಯ ಎಸ್.ವೆಂಕಟೇಶ, ತಾಲೂಕು ಆರೋಗ್ಯಾಧಿಕಾರಿ ಡಾ.ಎಸ್.ಪಿ.ಪ್ರದೀಪ್ ಕುಮಾರ್ ಸೇರಿ ಇತರರಿದ್ದರು.

# ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಪ್ರಾಶಂತ್ ಕುಮಾರ್ ಮಿಶ್ರಾ ಆದೇಶ

ಮಲ್ಲಮ್ಮ ನುಡಿ ವಾರ್ತೆ
ಬಳ್ಳಾರಿ,ಏ.12– ನಗರದ 11 ಪರೀಕ್ಷಾ ಕೇಂದ್ರಗಳಲ್ಲಿ ಏ.16 ಮತ್ತು 17 ರವರೆಗೆ ಸಾಮಾನ್ಯ ಪ್ರವೇಶ (ಸಿಇಟಿ–2025) ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023 ರ ಕಲಂ 163 ರಡಿ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣದಲ್ಲಿನ ಜೆ–ರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಿ ಆದೇಶಿಸಿದ್ದಾರೆ.

ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ.

ಈ ಆದೇಶವು ಪರೀ–ಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಶರಣಪ್ಪ ಕಿಲಾರಹಟ್ಟಿ ಅವರಿಗೆ ಪಿಎಚ್‌ಡಿ ಪದವಿ

**ಮಲ್ಲಮ್ಮ ನುಡಿ ವಾರ್ತೆ**
ಬಳ್ಳಾರಿ,ಏ.12–ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯ ಅಧ್ಯಯನ ವಿಭಾಗದ ವಿದ್ಯಾರ್ಥಿಯಾಗಿದ್ದ ಶರಣಪ್ಪ ಕಿಲಾರಹಟ್ಟಿ ಅವರಿಗೆ ಪಿಎಚ್‌ಡಿ ಪದವಿ ಲಭಿಸಿದೆ.ವಿವಿಯ ವಾಣಿಜ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಜೀಲಾನ್ ಭಾಷಾ.ವಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದ "ಆ್ಯನ್ ಎಂಪಿರಿಕಲ್ ಸ್ಟಡಿ ಆಫ್ ಐಪಿಓಸ್: ಎವಿಡೆನ್ಸ್



ಫ್ರಮ್ ಇಂಡಿಯನ್ ಸ್ಟಾಕ್ ಮಾರ್ಕೆಟ್" ಎಂಬ ಪ್ರೌಢ ಪ್ರಬಂಧ ಮಂಡಿಸಿದ್ದಕ್ಕೆ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

# ಕೂಡ್ಲಿಗಿ : ಸಿಡಿಲಿಗೆ 16 ವರ್ಷದ ಬಾಲಕ ಬಲಿ.ತಹಸೀಲ್ದಾರ್ ಭೇಟಿ ಪರಿಶೀಲನೆ.

ಮಲ್ಲಮ್ಮ ನುಡಿ ವಾರ್ತೆ
ಕೂಡ್ಲಿಗಿ. ಏ. 11 : ಮಳೆ ಬರುತ್ತದೆ ಎಂದು ಮನೆಯ ಮೇಲೆ ಒಣಗಿ ಹಾಕಿದ್ದ ಬೆಡ್ ಶೀಟ್ ನ್ನು ತೆಗೆದುಕೊಂಡು ಮನೆಯೊಳಗೇ ಹೋಗುವಷ್ಟರಲ್ಲಿ ಪ್ರಕೃತಿಯ ವಿಧಿಯಾಟದ ಸಿಡಿಲಿಗೆ 16 ವರ್ಷದ ಬಾಲಕನೋರ್ವ ಬಲಿಯಾದ ಘಟನೆ ತಾಲೂಕಿನ ಬಂಡೆಬಸಾಪುರ ತಾಂಡಾದಲ್ಲಿ ಗುರುವಾರ ಸಂಜೆ 6–15 ಗಂಟೆಗೆ ಜರುಗಿದ್ದು ಕೂಡ್ಲಿಗಿ ತಹಸೀಲ್ದಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬಂಡೆ ಬಸಾಪುರ ತಾಂಡದ ಪಾಂಡುನಾಯ್ಕ್ (16) ಪ್ರಕೃತಿ ವಿಕೋಪದ ಸಿಡಿಲಿಗೆ ಬಲಿಯಾದ ದುರ್ದೈವಿ ಬಾಲಕನಾಗಿದ್ದಾನೆ ಎಂದು ಹೇಳಬಹುದಾಗಿದೆ. ಈತನು ಗುರುವಾರ ಸಂಜೆ ಮಳೆ ಬೀಳುತ್ತಿರುವುದರಿಂದ ಮನೆಯ ಮೇಲೆ ಒಣಗಿ ಹಾಕಿದ್ದ ಬೆಡ್ ಶೀಟ್ ನ್ನು ತೆಗೆದುಕೊಂಡು ಬಂದು ಇನ್ನೇನು ಒಂದೆರಡು ಹೆಜ್ಜೆಯಲ್ಲಿ ಮನೆಯೊಳಗೇ ಹೋಗುವಷ್ಟರಲ್ಲಿ ಪ್ರಕೃತಿಯ ವಿಧಿಯಾಟದ ಸಿಡಿಲಿಗೆ ತೀವ್ರಗಾಯಗೊಂಡಿದ್ದು ತಕ್ಷಣ ಆಟೋದಲ್ಲಿ ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಗೆ ಕರೆತರಲಾಗಿ ಪರೀಕ್ಷೆ ಮಾಡಿದ ವೈದ್ಯರು ಮೃತಪಟ್ಟ ಬಗ್ಗೆ ತಿಳಿಸಿದ್ದಾರೆ.

ಮೃತ ಪಾಂಡು ನಾಯ್ಕ್ ಈತನು ಗುಡೇಕೋಟೆ ಸಮೀಪದ ಸರ್ವೋದಯ ವಸತಿ ಶಾಲೆಯಲ್ಲಿ ಎಸ್



ಎಸ್ ಎಲ್ ಸಿ ವ್ಯಾಸಂಗ ಮಾಡುತ್ತಿದ್ದು ಇತ್ತೀಚೆಗೆ ಶಾಲೆಗೆ ಹೋಗಿರಲಿಲ್ಲ ಈತನ ತಂದೆ ಉಮೇಶ ಹಾಗೂ ತಾಯಿ ಸುಶೀಲಬಾಯಿ ದಂಪತಿಗೆ ಒಬ್ಬನೇ ಗಂಡು ಮಗನಿದ್ದು ಈತನನ್ನು ಬಿಟ್ಟು ದುಡಿಯಲು ವಲಸೆ ಹೋಗಿದ್ದಾರೆ ಇತ್ತ ಇದ್ದೊಬ್ಬ ಗಂಡು ಮಗ ಸಿಡಿಲಿಗೆ ಬಲಿಯಾದ ಘಟನೆ ತಿಳಿದ ಕುಟುಂಬದ ಕಂಬನಿ ಮುಗಿಲು ಮುಟ್ಟಿದೆ. ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಮೃತನ ಚಿಕ್ಕಪ್ಪ ನೀಡಿದ ಹೇಳಿಕೆಯಂತೆ ಪ್ರಕರಣ ದಾಖಲಾಗಿದೆ.

ಸಿಡಿಲಿಗೆ ಬಲಿಯಾದ ಬಾಲಕ ಪಾಂಡು ನಾಯ್ಕ್ ನ ಮೃತದೇಹವನ್ನು ಕೂಡ್ಲಿಗಿ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದ್ದು ಕೂಡ್ಲಿಗಿ ತಹಸೀಲ್ದಾರ್ ವಿ ಕೆ ನೇತ್ರಾವತಿ, ಕೂಡ್ಲಿಗಿ ಕಂದಾಯ ನಿರೀಕ್ಷಿಕ ಪ್ರಭು ಹಾಗೂ ಗ್ರಾಮ ಆಡಳಿತಾಧಿಕಾರಿ ಸಿದ್ದಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಸಮಾಜ ಕಲ್ಯಾಣ ಇಲಾಖೆ: ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ
ಬಳ್ಳಾರಿ,ಏ.12–ಜಿಲ್ಲೆಯಲ್ಲಿನ ಪರಿಶಿಷ್ಟಜಾತಿಯ 2025–26ನೇ ಸಾಲಿನ 50 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ 6 ನೇ ತರಗತಿ ಪ್ರವೇಶಕ್ಕೆ ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಷ್ಠಿತ ಶಾಲೆಗಳಾದ ಶ್ರೀ ವಿಶ್ವೇಶ್ವರಯ್ಯ ಪ್ರೌಢ ಶಾಲೆ ಅಲ್ಲೀಪುರ (ಬೆಸ್ಟ್ ಸ್ಕೂಲ್), ಶ್ರೀ ನಂದ ವಸತಿ ಶಾಲೆ ವಿದ್ಯಾನಗರ, ಶ್ರೀ ನಂದಿ ಪ್ರೌಢಶಾಲೆ (ಸಿಬಿಎಸ್‌ಇ) ಬೆಳಗಲ್ ಕ್ರಾಸ್, ವಿಜಯಮೇರಿ ಪ್ರಾಥಮಿಕ ಶಾಲೆ ಸಿರುಗುಪ್ಪ (ವಸತಿ ಸಹಿತ), ಬೃಂದಾ ಇಂಟರ್ ನ್ಯಾಷನಲ್ ಸ್ಕೂಲ್ ದಮ್ಮೂರು(ವಸತಿ ಸಹಿತ) ಶಾಲೆಗಳಿಗೆ ಏ.15 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರವೇಶ ಪರೀಕ್ಷೆ ಬರೆಯಲು ಇಚ್ಛಿಸುವ ಪರಿಶಿಷ್ಟ ಜಾತಿಯ ಅರ್ಹ ವಿದ್ಯಾರ್ಥಿಗಳು ಅರ್ಜಿಗಳನ್ನು ಸಮಾಜ ಕಲ್ಯಾಣಧಿಕಾರಿಗಳ ಕಚೇರಿಯಲ್ಲಿ ಪಡೆದುಕೊಳ್ಳಬಹುದು.

ಅರ್ಜಿ ಸಲ್ಲಿಸಲು ಮೇ.03 ಕೊನೆಯ ದಿನವಾಗಿದೆ.

*ಅರ್ಹತೆಗಳು:*
ಪರಿಶಿಷ್ಟ ಜಾತಿಯ ವಿದ್ಯಾರ್ಥಿಯಾಗಿರಬೇಕು.
ಅಭ್ಯರ್ಥಿಯ ಕುಟುಂಬದ ಆದಾಯ ರೂ.2.00 ಲಕ್ಷದ ಒಳಗಿರಬೇಕು.
ಅಭ್ಯರ್ಥಿ 5ನೇ ತರಗತಿಯಲ್ಲಿ ಕನಿಷ್ಠ ಶೇ.60 ಅಂಕ ಪಡೆದಿರಬೇಕು.

*ಬೇಕಾದ ದಾಖಲೆಗಳು:*
ವಿದ್ಯಾರ್ಥಿಯ ಆಧಾರ್ ಕಾರ್ಡ್, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಸೈಜ್ 2 ಫೋಟೋ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, 5ನೇ ತರಗತಿ ಅಂಕಪಟ್ಟಿ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, ಮುಖೋಪಾಧ್ಯಾಯರಿಂದ ನಡತೆ ಪ್ರಮಾಣ ಪತ್ರ.

ಹೆಚ್ಚಿನ ಮಾಹಿತಿಗಾಗಿ ದೂ.08392–244738, ಮೊ.9480843073 ಅಥವಾ 1ನೇ ಗೇಟ್ ಹತ್ತಿರ ಅಂಬೇಡ್ಕರ್ ಭವನದ ಸಮಾಜ ಕಲ್ಯಾಣಧಿಕಾರಿಗಳ ಕಚೇರಿಗೆ ಭೇಟಿ ನೀಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.14 ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ
ಬಳ್ಳಾರಿ,ಏ.12–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 134 ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಏ.14 ರಂದು ಮಧ್ಯಾಹ್ನ 01 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ.ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.ಸಮಾಜ ಕಲ್ಯಾಣ ಸಚಿವರಾದ ಡಾ.ಹೆಚ್.ಸಿ ಮಹದೇವಪ್ಪ ಅವರು ಘನಉಪಸ್ಥಿತಿ ಇರುವರು.ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ,



ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಾಸಕರಾದ ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು, ಜಿಲ್ಲಾ ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಅಧ್ಯಕ್ಷ ಬಿ.ಕೆ. ಅನಂತ ಕುಮಾರ್ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.ವಿವಿಯ ಡಾ.ಬಿ.ಆರ್. ಅಂಬೇಡ್ಕರ್ ಬಹುಶಿಸ್ತೀಯ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರು ಮತ್ತು ನಿರ್ದೇಶಕರಾದ ಡಾ.ಗೌರಿ ಮಾಣಿಕ್ ಮಾನಸ್ ಅವರು ವಿಶೇಷ ಉಪನ್ಯಾಸ ನೀಡುವರು. ಏ.14 ರಂದು ಬೆಳಿಗ್ಗೆ 09 ಗಂಟೆಗೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು.*ಮೆರವಣಿಗೆ:*ಬಳಿಕ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಿಂದ ಗಡಿಗಿ ಚೆನ್ನಪ್ಪ ವೃತ್ತ–ಬೆಂಗಳೂರು ರಸ್ತೆ–ಬ್ರೂಸ್‌ಪೇಟೆ ಪೊಲೀಸ್ ಠಾಣೆ–ಹೆಚ್.ಆರ್.ಗವಿಯಪ್ಪ ವೃತ್ತ–ರೈಲ್ವೇ ಸ್ಟೇಷನ್ ರಸ್ತೆ ಮೂಲಕ ಮುನಿಸಿಪಲ್ ಕಾಲೇಜು ಮೈದಾನದವರೆಗೆ ಮೆರವಣಿಗೆ ನಡೆಯಲಿದೆ.ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್ ಲೋಕೇಶ್ ಕುಮಾರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಬಳ್ಳಾರಿ ಮಹಾನಗರ ಪಾಲಿಕೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ.ಬಿ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಪ್ರಾಶಂತ್ ಕುಮಾರ್ ಮಿಶ್ರಾ ಆದೇಶ

ಬಳ್ಳಾರಿ,ಏ.12–ನಗರದ 11 ಪರೀಕ್ಷಾ ಕೇಂದ್ರಗಳಲ್ಲಿ ಏ.16 ಮತ್ತು 17 ರವರೆಗೆ ಸಾಮಾನ್ಯ ಪ್ರವೇಶ (ಸಿಇಟಿ–2025) ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023 ರ ಕಲಂ 163 ರಡಿ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣದಲ್ಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಿ ಆದೇಶಿಸಿದ್ದಾರೆ.ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ.ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಗರ್ಭಕೋಶ ಕ್ಯಾನ್ಸರ್ ಚಿಕಿತ್ಸೆಗಿಂತ ಮುನ್ನೆಚ್ಚರಿಕೆ ಉತ್ತಮ" ಡಾ. ಸುಮಂಗಲಾ



ಮಲ್ಲಮ್ಮ ನುಡಿ ವಾರ್ತೆ
ಹೊಸಪೇಟೆ(ವಿಜಯನಗರ) ಏ11:ಲೆಕ್ಕಕ್ಕೆ ಸಿಗದಂತೆ ಕ್ಯಾನ್ಸರ್ ಪ್ರಕರಣಗಳು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿವೆ ಇತ್ತೀಚಿಗೆ ಗರ್ಭಕೋಶ ಕ್ಯಾನ್ಸರ್ ಹೆಚ್ಚಿನ ಪಾಲು, ಗರ್ಭಕೋಶ ಕ್ಯಾನ್ಸಗೆ ಚಿಕಿತ್ಸೆಗಿಂತ ಮುನ್ನೆಚ್ಚರಿಕೆ ಉತ್ತಮ ಮಾರ್ಗ ಎಂದು ಖ್ಯಾತ ಸ್ತ್ರೀರೋಗ ತಜ್ಞ ಡಾ.ಸುಮಂಗಲಾದೇವಿ ಹೇಳಿದರು.

ಸ್ಥಳೀಯ ಶ್ರೀಮತಿ ಉಗಮದೇವಿ ಭವಲಾಲ್ ನಾಹರ್ ಥಿಯೋಸಾಫಿಕಲ್ ಮಹಿಳಾ ಕಾಲೇಜುನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ "ಗರ್ಭಕೋಶ ಕ್ಯಾನ್ಸರ್ ಹೆಪಿವಿ ವ್ಯಾಕ್ಸಿನೇಷನ್" ವಿಶೇಷ ಉಪನ್ಯಾಸದಲ್ಲಿ ವಿದ್ಯಾರ್ಥಿನಿಯರಿಗೆ ಜಾಗೃತಿ ಮೂಡಿಸಿದರು. ಹ್ಯೂಮನ್ ಪ್ಯಾಪಿಲೋ ವೈರಸ್(ಹೆ ಚ್ ಪಿವಿ) ಅಂಡ್ ರಿಲೇಟೆಡ್ ಡಿಸೀಸಸ್ 2015 ರ ಮಾಹಿತಿ ಪ್ರಕಾರ ಭಾರತದಲ್ಲಿ ಪ್ರತಿವರ್ಷ ಸುಮಾರು 12 ಲಕ್ಷ ಮಹಿಳೆಯರು ಗರ್ಭಕೋಶದ ಕ್ಯಾನ್ಸರ್ ಗೆ ತುತ್ತಾಗುತ್ತಿದ್ದಾರೆ. ಇದರಲ್ಲಿ ಸುಮಾರು 67,000 ಮಹಿಳೆಯರು ಸಾವನ್ನಪ್ಪುತ್ತಿದ್ದಾರೆ. ಮಹಿಳೆಯರನ್ನು ಅತಿಯಾಗಿ ಕಾಡುತ್ತಿರುವ ಎರಡನೇ ವಿಧದ ಕ್ಯಾನ್ಸರ್ ಎಂದೂ ಗುರುತಿಸಲಾಗಿದೆ.

ಕ್ಯಾನ್ಸರನ್ನು ತಡೆಗಟ್ಟಲು ಆಗಾಗಿ ತಪಾಸಣೆ ಅತ್ಯಗತ್ಯ. ಪ್ರತಿ ಮಹಿಳೆಯರು ಮೂರು ವರ್ಷಕ್ಕೊಮ್ಮೆ ಪ್ಯಾಪ್ ಪರೀ–ಕ್ಷೆ ನಡೆಸಬೇಕು' ಎಂದು ವಿದ್ಯಾರ್ಥಿನಿಯರ ಆರೋಗ್ಯ ಮತ್ತು ವೈಯಕ್ತಿಕ ಕಾಳಜಿ ಕುರಿತು ಉಪನ್ಯಾಸ ನೀಡಿದರು. ರಿಯಾಯಿತಿ ದರದಲ್ಲಿ ಲಭ್ಯವಿರುವ ಲಸಿಕೆಯನ್ನು 9 ರಿಂದ 30 ವರ್ಷದೊಳಗಿನ ಮಹಿಳೆಯರು ಅತ್ಯವಶ್ಯವಾಗಿ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಅನಸುಯಾ ಅಂಗಡಿ ಮಾತನಾಡಿದ ಅವರು ಸದುಪಯೋಗವನ್ನು ಪಡೆದು ವಿದ್ಯಾರ್ಥಿನಿಯರಿಗೆ ಚಿಕಿತ್ಸೆ–ಗಿಂತ ಮುನ್ನೆಚ್ಚರಿಕೆ ಉತ್ತಮ ಎಂದು ಮನದಟ್ಟು ಪಡಿಸಿದರು. ಆರೋಗ್ಯವೇ ಮಹಾಭಾಗ್ಯ ಎನ್ನುವುದರ ಕುರಿತು ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಯಾವ ರೀತಿಯ ಆಹಾರವನ್ನು ಸೇವಿಸಬೇಕು ಮತ್ತು ಆರೋಗ್ಯ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವನ್ನು ವಹಿಸಬೇಕು ಎಂದು ವಿದ್ಯಾರ್ಥಿನಿಯರಿಗೆ ತಿಳಿಸಿದರು.

ಪ್ರಾಸ್ತವಿಕ ಮತ್ತು ಸ್ವಾಗತ ನುಡಿಯನ್ನು ಡಿ.ಎನ್ ಸುಜಾತ, ಐಕ್ಯೂಎಸಿ ಸಂಯೋಜಕರು ನಡೆಸಿಕೊಟ್ಟರು. ಡಾ. ಕಿಚಡಿ ಚನ್ನಪ್ಪ ಸಹಪ್ರಾಧ್ಯಾಪಕರು ಉಪಸ್ಥಿತರಿದ್ದರು. ಸಂಚಾಲಕಿ ಅಮೃತ್ ಕುಮಾರ್, ಉಪನ್ಯಾಸಕ ವಂದಿಸಿದರು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿ ಕಾರ್ಯಕ್ರಮದಲ್ಲಿ ಭಾಗವಹಿದ್ದರು.

# ಯುವಕರು ಸಮಾಜ ಸೇವೆಗೈಯಲು ಆಸಕ್ತಿ ವಹಿಸಬೇಕು-ಮಾಗನೂರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.12-ಯುವ ಸಮೂಹ ಸಮಾಜ ಸೇವೆಯಲ್ಲಿ ಆಸಕ್ತಿ ವಹಿಸಿದರೆ ಮಹಾತ್ಮ ಗಾಂಧೀಜಿಯವರ ಗ್ರಾಮರಾಜ್ಯದ ಕನಸು ನನಸಾಗುತ್ತದೆ ಎಂದು ವಕೀಲ ಜಿ.ಜಿ.ಮಾಗನೂರ ಹೇಳಿದರು.

ತಾಲೂಕಿನ ಚಿಟಗಿನಕೊಪ್ಪ ಗ್ರಾಮದಲ್ಲಿ ಶುಕ್ರವಾರ ಆರಂಭವಾದ ಬೇವೂರಿನ ಪಿ.ಎಸ್.ಸಜ್ಜನ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಗ್ರಾಮಗಳ ಉದ್ಧಾರವೇ ದೇಶದ ಉದ್ಧಾರ ಎನ್ನುವ ಗಾಂಧೀಜಿಯವರ ಮಾತು ಅಕ್ಷರಶ: ಸತ್ಯವಾಗಿದ್ದು, ಗ್ರಾಮೀಣ ಯುವಕರು ಶಿಕ್ಷಣದ ಜೊತೆ ಗ್ರಾಮಗಳ ಪ್ರಗತಿಗೆ ಮುಂದಾಗಬೇಕು ಎಂದರು.

ಎನ್.ಎಸ್.ಎಸ್.ಶಿಬಿರಾರ್ಥಿಗಳು ಸಮಾಜ ಸೇವೆಯ ಮಹತ್ವ ತಿಳಿದು ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಆಸಕ್ತಿ ವಹಿಸಬೇಕು. ತಮ್ಮ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಹೇಳಿದ ಮಾಗನೂರ, ಇಂತಹ ಶಿಬಿರಗಳಲ್ಲಿ ಪಾಲ್ಗೊಳ್ಳುವುದರಿಂದ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಅತಿಥಿಯಾಗಿದ್ದ ಪುಂಡಪ್ಪ ಕಡೂರ ಮಾತನಾಡಿ, ಯುವ ಶಕ್ತಿಯ ಇಚ್ಛಾಸಕ್ತಿ ಗ್ರಾಮೀಣ ಪ್ರದೇಶಗಳ ಪ್ರಗತಿಗೆ ಸ್ಫೂರ್ತಿ9ಯಾಗಲಿದ್ದು, ಪ್ರತಿಯೊಬ್ಬ ವಿದ್ಯಾರ್ಥಿ ಕಲಿಕೆಯ ಜೊತೆ ಸಮಾಜ ಸೇವಾ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದರು. ಇನ್ನೋರ್ವ ಅತಿಥಿ ಎನ್.ಬಿ.ಪಾಟೀಲ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಚಾರ್ಯ ಜಗದೀಶ ಭೈರಮಟ್ಟಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು. ಎನ್.ಎಸ್.ಎಸ್ ಶಿಬಿರಾರ್ಥಿಗಳಿಗೆ ಜೀವನಾನುಭವ ಕಲಿಸುತ್ತದೆ ಎಂದು ಹೇಳಿದರು.

ರಾಂಪುರ ರೇವಣಸಿದ್ದೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಉಮೇಶ ಮೇಟಿ ಶಿಬಿರ ಉದ್ಘಾಟಿಸಿದರು. ವಾಯ್.ಎಚ್.ಬೆನಕನವಾರಿ, ಶ್ರೀಕರದೇಸಾಯಿ, ಯೋಜನಾಧಿಕಾರಿ ಜಿ.ಎಸ್.ಗೌಡರ, ಪ್ರಭಾರಿ ಮುಖ್ಯಗುರು ಸುನೀಲ ಪಾಟೀಲ, ಡಿ.ವಾಯ್.ಬುಡ್ಡಿಯವರ, ಎನ್.ಬಿ.ಬೆಣ್ಣೂರ ಸೇರಿದಂತೆ ಗ್ರಾಪಂ ಅಧ್ಯಕ್ಷರು, ಸದಸ್ಯರು, ಎಸ್.ಡಿ.ಎಂಸಿ ಅಧ್ಯಕ್ಷರು, ಸದಸ್ಯರು, ಗಣ್ಯರು ವೇದಿಕೆಯಲ್ಲಿದ್ದರು.

ಪ್ರೊ.ಬಿ.ಬಿ.ಬೇವೂರ ಪ್ರಾರ್ಥಿಸಿದರು. ಪ್ರೊ.ಎಸ್.ಎಸ್.ಆದಾಪೂರ ಎನ್.ಎಸ್.ಎಸ್.ಗೀತೆ ಹಾಡಿದರು. ಪ್ರೊ.ಸಂಗಮೇಶ ಹಂಚಿನಾಳ ನಿರೂಪಿಸಿದರು. ಪ್ರೊ. ಅಮರೇಶ ಗೊರಚಿಕ್ಕನವರ ವಂದಿಸಿದರು.

# ಅಕ್ಕಮಹಾದೇವಿ ಭಕ್ತಿ, ಶಕ್ತಿಯ ಸಂಕೇತ : ಡಾ.ವೀಣಾ ಕಲ್ಮಠ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.12-ಭಕ್ತಿ ಮತ್ತು ಶಕ್ತಿಯ ಸಂಕೇತವಾಗಿರುವ ಅಕ್ಕಮಹಾದೇವಿ ಮಹಿಳೆಯರ ಅಂತ:ಕರಣದ ಅಸ್ಮಿತೆಯಾಗಿದ್ದಾಳೆ ಎಂದು ಬಸವೇಶ್ವರ ಕಲಾ ಮಹಾವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದ ಸಂಯೋಜಕಿ ಡಾ.ವೀಣಾ ಕಲ್ಮಠ ಹೇಳಿದರು.

ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಶನಿವಾರ ಜರುಗಿದ ಶಿವಶರಣೆ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

12ನೇ ಶತಮಾನದ ಅವಧಿಯಲ್ಲಿ ಯಾವುದೇ ಸೌಲಭ್ಯಗಳಿಲ್ಲದ ಕಾಲಘಟ್ಟದಲ್ಲಿ ಅಕ್ಕಮಹಾದೇವಿ ಕನ್ನಡದ ಪ್ರಥಮ ಮಹಿಳಾ ಕವಯಿತ್ರಿ ಹಾಗೂ ಭಕ್ತಿ ಮತ್ತು ಶಕ್ತಿಯ ಸಂಕೇತವಾಗಿದ್ದರು. ಅವರ ವಚನಗಳು ಆಳವಾದ ಆಧ್ಯಾತ್ಮಿಕ ಒಳನೋಟವನ್ನು ಪ್ರತಿಬಿಂಬಿಸುತ್ತವೆ. ಲಿಂಗಸಮಾನತೆಗಾಗಿ ಅವರ ನಿಲುವು ಇಂದಿಗೂ ಸ್ಫೂರ್ತಿದಾಯಕವಾಗಿದೆ. ಸತ್ಯ, ಧೈರ್ಯ ಮತ್ತು ಭಕ್ತಿಗೆ ಮಾರ್ಗದರ್ಶಕರಾಗಿ ಬೆಳಕಾದ ಅವರ ಜೀವನ ಇಂದಿಗೂ ಆದರಣೀಯವಾಗಿದೆ ಎಂದು ಡಾ.ವೀಣಾ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯೆ ಎಸ್.ಜೆ.ಒಡೆಯರ ಮಾತನಾಡಿ, ಅಕ್ಕಮಹಾದೇವಿಯವರ ನಡೆ, ನುಡಿ ಸದ್ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಧೈರ್ಯ, ಸಮಗ್ರತೆ ಮತ್ತು ಸಹಾನುಭೂತಿಯಿಂದ ಬದುಕಲು ಶ್ರಮಿಸೋಣ ಎಂದರು.

ಮೇಘನಾ ಮಲಘಾಣ ಪ್ರಾರ್ಥಿಸಿದರು. ಐಕ್ಯೂಎಸಿ ಸಂಯೋಜಕರಾದ ಪಿ.ಕೆ.ಚೌಗಲಾ ಸ್ವಾಗತಿಸಿದರು. ಎಸ್.ಕೆ.ಹಿರೇಮಠ ಪರಿಚಯಿಸಿದರು. ಸೀಮಾ ಚೌಪೂಸ ವಂದಿಸಿದರು. ಎ.ವ್ಹಿ.ಪುರಾಣಿಕ ನಿರೂಪಿಸಿದರು.

# ಸಾಮೂಹಿಕ ವಿವಾಹ ಕಾರ್ಯಕ್ರಮಗಳಿಂದ ದುಂದುವೆಚ್ಚಕ್ಕೆ ಕಡಿವಾಣ : ಬಿ.ವಿ. ನಾಯಕ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಪ್ರಸಕ್ತ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿ ಇರುವ ರೈತಾಪಿ ವರ್ಗ ಹಲವಾರು ಸಂಕಷ್ಟಗಳ ಮಧ್ಯೆ ಕೃಷಿ ಕ್ಷೇತ್ರವನ್ನೇ ಅವಲಂಬಿಸಿ, ಜೀವನ ಸಾಗಿಸುತ್ತಿದ್ದಾರೆ. ಅವರ ಮಕ್ಕಳ ಮದುವೆಗೆ ಮಾಡಲು ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಳ್ಳುತ್ತಾರೆ. ಇಂತಹ ಸಾಮೂಹಿಕ ವಿವಾಹ ಕಾರ್ಯಕ್ರಮ ಎಲ್ಲಾ ಕಡೆ ಏರ್ಪಡಿಸುವದರಿಂದ ಸಮಾಜದಲ್ಲಿ ದುಂದುವೆಚ್ಚಕ್ಕೆ ಕಡಿವಾಣ ಹಾಕಬಹುದು ಎಂದು ರಾಯಚೂರು ಮಾಜಿ ಸಂಸದ ಬಿ.ವಿ.ನಾಯಕ ಹೇಳಿದರು.

ಇಲ್ಲಿಗೆ ಸಮೀಪದ ಹೇಮನಾಳ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಶ್ರೀದೇವರ ಗುಂಡುಗುರ್ತಿ ಮೈಲಾರಲಿಂಗೇಶ್ವರ ಶರಣ ಸಂಸ್ಥಾನ ಮಠದ ಪರಮಪೂಜ್ಯ ಮಹಾತ್ಮ ಹೊನ್ನಯ್ಯ ತಾತನವರ ನೂತನ ದೇವಸ್ಥಾನ ಲೋಕಾರ್ಪಣೆ ಹಾಗೂ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ದೇಶದಲ್ಲಿ ಪ್ರಾಚೀನ ಕಾಲದಿಂದ ಮಠಮಾನ್ಯಗಳು ತ್ರಿವಿಧ ದಾಸೋಹಗಳ ಮೂಲಕ ಸಮಾಜದಲ್ಲಿ ಐಕ್ಯತೆ ಮೂಡಿಸಿ ನಾಡಿನ ಪ್ರಗತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿಕೊಂಡು ಬಂದಿವೆ. ದೇವರ ಗುಂಡಗುರ್ತಿ ಶ್ರೀಗಳು ಈ ಭಾಗದಲ್ಲೇ ಅಲ್ಲದೇ ಹೊರ ರಾಜ್ಯಗಳಲ್ಲಿ ಮಠ ಮಾನ್ಯಗಳನ್ನು ಸ್ಥಾಪಿಸಿ, ಧಾರ್ಮಿಕ ಚಿಂತನೆಗಳನ್ನು ಜನರಿಗೆ ತಲುಪಿಸುವ ಜೊತೆಗೆ ಜಾಗೃತಿ ಮೂಡಿಸಿ ನಿರಂತರ ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿರುವ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ನಾಡಿನಲ್ಲಿ ಧಾರ್ಮಿಕ ವಿಚಾರಗಳಿಗೆ ನಾವೆಲ್ಲರೂ ಹೆಚ್ಚು ಒತ್ತು ನೀಡುತ್ತಿರುವ ಪರಿಣಾಮ ಸಮಾಜದಲ್ಲಿ ಸಮಾನತೆ, ಶಾಂತಿ-ನೆಮ್ಮದಿ ವಾತಾವರಣವನ್ನು ಕಾಣುತ್ತಿದ್ದೇವೆ. ಇತ್ತೀಚೆಗೆ ಉತ್ತರ ಪ್ರದೇಶದ ಪ್ರಯಾಗರಾಜ್ ನಲ್ಲಿ ನಡೆದ ಮಹಾಕುಂಭಮೇಳ 2025 ಜಗತ್ತಿನ ಧಾರ್ಮಿಕ ಉತ್ಸವ ಕಾರ್ಯಕ್ರಮ ಇಡೀ ವಿಶ್ವದ ಗಮನ ಸೆಳೆಯಿತು ಅಲ್ಲದೇ ನಾಸ್ತಿಕನನ್ನು ಕೂಡ ಆಸ್ತಿಕನನ್ನಾಗಿ ಮಾಡುವಲ್ಲಿ ಯಶಸ್ವಿಯಾಯಿತು ಎಂದರು.

ಹೊಸ ಜೀವನಕ್ಕೆ ಕಾಲಿಟ್ಟ ವಧು-ವರರು ಶ್ರೀಗಳ ಮಾರ್ಗದರ್ಶನದಲ್ಲಿ ಬದುಕಿನಲ್ಲಿ ಎದುರಾಗುವ ಎಲ್ಲಾ ಸಂಕಷ್ಟಗಳನ್ನು ದೂರ ಮಾಡಿ ಸಮನ್ವತೆ ಹಾಗೂ ಪರೋಪಕಾರಿ ಬದುಕು ಸಾಗಿಸಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದ ಸಾನಿಧ್ಯ ವಹಿಸಿದ ಗೊಬ್ಬೂರಿನ ಬೂದಿ ಬಸವೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಬೂದಿಬಸವ ಶಿವಾಚಾರ್ಯ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ಪ್ರಸಕ್ತ ದಿನಗಳಲ್ಲಿ ನಾವೆಲ್ಲರೂ ಧಾರ್ಮಿಕ ಸಂಸ್ಕೃತಿ, ಆಚರಣೆಗಳನ್ನು ಹಾಗೂ ಮೂಲ ಉದ್ದೇಶಗಳನ್ನು ಉಳಿಸಿಕೊಂಡು ಬೆಳೆಸಿದಾಗ ಮಾತ್ರ ಯುವ ಜನಾಂಗ ಉನ್ನತ ಗುರಿಯೊಂದಿಗೆ ಗುರು ಹಿರಿಯರ ಮಾರ್ಗದರ್ಶನದಲ್ಲಿ ಪರಿಶ್ರಮದಿಂದ ಔತನ್ಯ ಬದುಕು ಸಾಗಿಸಲು ಸಾಧ್ಯ ಎಂದು ನುಡಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ ದೇವರ ಗುಂಡಗುರ್ತಿಯ ಶ್ರೀಮೈಲಾರಲಿಂಗೇಶ್ವರ ಶರಣ ಸಂಸ್ಥಾನ ಸುಕ್ಷೇತ್ರದ ಪೀಠಾಧಿಪತಿ ಶಾಂತ ನಿಜಲಿಂಗ ತಾತನವರು ಮಾತನಾಡಿ, ಶ್ರೀಮಠಕ್ಕೆ ಭಕ್ತ-ರೇ ನಿಜವಾದ ಆಸ್ತಿಯಾಗಿದ್ದಾರೆ. ಹಿಂದಿನ ಗುರುಗಳು ನಡೆದು ಬಂದ ದಾರಿಯಲ್ಲಿಯೇ ನಾವು ಎಲ್ಲಾ ಕ್ಷೇತ್ರಗಳಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ಈ ಗ್ರಾಮದ ಸಜ್ಜನ ವ್ಯಕ್ತಿಯಾಗಿರುವ ಶಿವಶಂಕ್ರಪ್ಪ ಸಾಹುಕಾರ್ ಹಾಗೂ ಗ್ರಾಮಸ್ಥರು ಸಾಮಾಜಿಕ ಕಾಳಜಿ ಹೊಂದಿದ್ದಾರೆ. ಅವರು ಮಾಡಿರುವ ಸಾಮಾಜಿಕ ಕಾರ್ಯಗಳು ಇತರರ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆ. ಆ ಭಗವಂತನ ದಯೆದಿಂದ ರೈತಾಪಿ ವರ್ಗದ ಕಷ್ಟಗಳು ದೂರವಾಗಲಿ ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಮಾತನಾಡಿ ಗ್ರಾಮಸ್ಥರ ಸಹಕಾರದಿಂದ ಹಾಗೂ ಗುರು ಹಿರಿಯರ ಸಲಹೆಯಂತೆ ನಮ್ಮ ಗ್ರಾಮದಲ್ಲಿ ಭವ್ಯ ದೇವಸ್ಥಾನ ನಿರ್ಮಾಣವಾಗಿ ಇಂದು ಲೋಕಾರ್ಪಣೆಗೊಂಡು, ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿದ್ದು ನನಗೆ ಆತ್ಮ ತೃಪ್ತಿ ತಂದಿದೆ, ಗ್ರಾಮದ ಅಭಿವೃದ್ಧಿ ಬಗ್ಗೆ ನಾನು ಹತ್ತಾರು ಕನಸುಗಳನ್ನು ಕಟ್ಟಿಕೊಂಡಿದ್ದೇನೆ. ಅವುಗಳಲ್ಲಿ ಕೆಲವು ಸಹಕಾರಗೊಂಡಿವೆ ಇನ್ನೂ ಮಾಡಬೇಕಾಗಿರುವ ಕೆಲಸ ಬಹಳಷ್ಟಿದೆ ಎಲ್ಲರೂ ಬದಲಾವಣೆಗಾಗಿ ಸಹಕರಿಸಬೇಕೆಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ 9 ನವ ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ವೇದಿಕೆ ಮೇಲೆ ನೀಲಗಲ್‌ನ ಡಾ. ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮೀಜಿ, ಸುಲ್ತಾನಪುರದ ಶಂಭು ಸೋಮನಾಥ ಸ್ವಾಮೀಜಿ, ಶ್ರೀನಿವಾಸ ಸರಡಿಗಿಯ ಡಾ. ಅಪ್ಪಾರಾವ್ ದೇವಿಮುತ್ಯ, ಗೊಲ್ಲಪಲ್ಲಿ ವಾಲ್ಮೀಕಿ ಆಶ್ರಮದ ವರದಾನಂದೇಶ್ವರ ಸ್ವಾಮೀಜಿ, ದೇವದುರ್ಗದ ಹಜರತ್ ಜಹೀರುದ್ದೀನ್ ಪಾಷ ಖಾದ್ರಿ, ಮಾತ್ಪಳ್ಳಿಯ ಶ್ರೀಗಳಾದ ಕಾಡಪ್ಪ ಪೂಜಾರಿ, ಮುಂಡರಗಿಯ ಶಿವಣ್ಣ ತಾತನವರು, ದೇವರ ಗುಂಡುಗುರ್ತಿಯ ಹೊನ್ನಲಿಂಗ ತಾತನವರು, ಹೇಮನಾಳದ ವೇ. ಮೂರ್ತಿ ದಾನಯ್ಯಸ್ವಾಮಿ, ಗುರುಲಿಂಗ ಸ್ವಾಮೀಜಿ ದೇವರಗುಂಡಗುರ್ತಿ, ಮೈಲಾಪುರದ ಶರಣಪ್ಪ ಪೂಜಾರಿ, ಖಂಡಪ್ಪ ಪೂಜಾರಿ, ಮಹಾದೇವಮ್ಮ ಅರಕೇರಾ, ಗೌರಿ ಕರೆಮ್ಮ ನಾಯಕ್, ಶ್ರೀನಿವಾಸರೆಡ್ಡಿ ಪಾಟೀಲ್ ಚನ್ನೂರ, ಶರಣಗೌಡ ಮದರಕಲ್, ಶರ-ಣಗೌಡ ಗೊಬ್ಬೂರ, ನಿಂಗಪ್ಪ ಗುಡಗುಡಿ ಹೊನಗೇರಾ, ಸಿದ್ದು ಸಾವುಕಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಹಾಪುರುಷ ಶ್ರೀಗಳು ಹಿಂದೂಸ್ತಾನಿ ಸಂಗೀತ ಪರಂಪರೆ ಉಳಿಸಿ ಬೆಳೆಸಿದರು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.12-ಹಿಂದೂಸ್ತಾನಿ ಸಂಗೀತ ಪರಂಪರೆಯನ್ನು ಉಳಿಸಿ ಬೆಳೆಸಿದ ಕೀರ್ತಿ ಮುರನಾಳ ಮಳಿಯಪ್ಪಯ್ಯನ ಮಠದ ಮಹಾಪುರುಷ ಶ್ರೀಗಳಿಗೆ ಸಲ್ಲುತ್ತದೆ ಎಂದು ಬಸವೇಶ್ವ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಸ್.ಆರ್.ಮೂಗನೂರಮಠ ಹೇಳಿದರು.

ಶುಕ್ರವಾರ ವಿದ್ಯಾಗಿರಿಯಲ್ಲಿ ನಡೆದ ಖ್ಯಾತ ಸಿತಾರವಾದಕರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಪ್ರೊ.ವ್ಹಿ.ಜಿ.ಮಹಾಪುರಷ ಅವರ 80 ನೆಯ ಹುಟ್ಟು ಹಬ್ಬ ಹಾಗೂ ಅವರ 50 ನೆಯ ವರ್ಷದ ಮದುವೆ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉತ್ತರ ಕರ್ನಾಟಕದ ಭಾಗಕ್ಕೆ ಸಂಗೀತ ದಾಸೋಹದ ಮೂಲಕ ತನ್ನದೇ ಆದ ಕೊಡುಗೆಯನ್ನು ಮುರನಾಳ ಮಳೆರಾಜೇಂದ್ರಸ್ವಾಮಿ ಮಠ ನೀಡಿದೆ. ಹಿಂದೂಸ್ತಾನಿ ಸಂಗೀತ ಪರಂರೆಯನ್ನು ಉಳಿಸಿ ಬೆಳಿಸಿದ ಕೀರ್ತಿ ಶ್ರೀ ಮಠಕ್ಕೆ ಹಾಗೂ ಪೂಜ್ಯರಾದ ಮಹಾಪುರುಷರಿಗೆ ಸಲ್ಲುತ್ತದೆ. ಇಲ್ಲಿ ಕಲಿತ ಅನೇಕ ಸಂಗೀತ ಕಲಾವಿದರು ನಾಡಿನ್ಯಾದ್ಯಂತ ಕೀರ್ತಿ ಪಡೆದು ಹೆಸರುವಾಸಿಯಾಗಿದ್ದಾರೆ, ಇಂಥಹ ಮಠದ ಪರಮಪೂಜ್ಯರು ಹಾಗೂ ಸಂಗೀತ ವಿಭಾಗದ ಸೀತಾರ ವಾದನದ ಪ್ರಾಧ್ಯಾಪಕರು ಆಗಿದ್ದ ವಿಶ್ವನಾಥ ಮಹಾಪುರುಷರು ಸೀತಾರ ವಾದನದಲ್ಲಿ ಅಂತರಾಷ್ಟ್ರೀಯ ಮಟ್ಟಕ್ಕೆ ಹೆಸರು ಮಾಡುವುದರ ಜೊತೆಗೆ ಜಿಲ್ಲೆಯಲ್ಲಿ ಪ್ರಥಮವಾಗಿ ಸಂಗೀತ ವಾದ್ಯಗಳ ಮ್ಯೂಸಿಯಮ್ ಮಾಡಿದ ಮೊದಲಿಗರಾಗಿದ್ದಾರೆ ಎಂದರು. ಜಿಲ್ಲೆಯ ಸಂಗೀತ ಪ್ರಾಧ್ಯಪಕರಲ್ಲಿ ಮೊದಲಿಗರಾಗಿದ್ದಾರೆ.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಹಿಂದೂಸ್ತಾನಿ ಗಾಯಕ ಪ್ರೊ.ಸಿದ್ದರಾಮಯ್ಯ ಮಠಪತಿ ಮಾತನಾಡಿ, ಸಂಗೀತ ವಾದ್ಯಗಳನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡಿ ರಾಜ್ಯದಲ್ಲಿ ಪ್ರಥಮ ವಿಶ್ವ ಸಂಗೀತ ದಿನಾಚರಣೆಯನ್ನು ಆಚರಿಸಿದ ಹೆಗ್ಗಳಿಕೆ ಮಹಾಪುರುಷ ಅವರದ್ದಾಗಿದೆ. ಲಂಡನ್ನಿನಲ್ಲಿ ಸೀತಾರವಾದನ ಕಾರ್ಯಕ್ರಮ ಕೊಟ್ಟ ಮೊದಲಿಗರು. ಅವರ ಮಠವೇ ಸಂಗೀತಾಲಯವಾಗಿತ್ತು. ಮಹಾಪುರುಷರು ಹಲವು ಮೊದಲುಗಳ ಸಾಧಕರು, ಸಂಗೀತ ಪರಂಪರೆಗೆ ಮುರನಾಳ ಮಠ ತನ್ನದೆಯಾದ ಕೊಡುಗೆ ನೀಡಿದೆ ಎಂದು ಹೇಳಿದರು.

ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಪ್ರೊ.ವ್ಹಿ.ಜಿ.ಮಹಾಪುರಷ ಅವರ ಬದುಕು ಮತ್ತು ಸಾಧನೆ ಕುರಿತು ಮಾತನಾಡಿ, ವಿ.ಜಿ.ಮಹಾಪುರುಷರು ತಮ್ಮ ತಂದೆ ಗಂಗಾಧರಸ್ವಾಮಿ ಮಹಾಪುರಷರ ಹೆಸರು ಶಾಶ್ವತವಾಗಿ ಉಳಿಸುವ ನಿಟ್ಟಿನಲ್ಲಿ 2001 ರಲ್ಲಿ ಪ್ರತಿಷ್ಠಾನ ಸ್ಥಾಪಿಸಿ, ಅದರಡಿಯಲ್ಲಿ ನಿರಂತರವಾಗಿ ವಿಶೇಷ ಸಂಗೀತ ಕಾರ್ಯಕ್ರಮ ಮಾಡುತ್ತಾ ಬಂದಿದ್ದಾರೆ. 2002 ರಲ್ಲಿ ಸಂಗೀತ ವಿದ್ಯಾಲಯವನ್ನು ಸ್ಥಾಪಿಸಿ, ನೂರಾರು ಸಂಗೀತ ಆಸಕ್ತ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಗೀತಜ್ಞಾನವನ್ನು ನೀಡಿದ್ದಾರೆ. 2016 ರಲ್ಲಿ ಮಳೆರಾಜೇಂದ್ರಸ್ವಾಮಿ ಮಠದ ಪೂಜ್ಯಶ್ರೀ ಅಂಖಡೇಶ್ವರಸ್ವಾಮಿಜೀ ಅವರ ಹೆಸರಿನಲ್ಲಿ ಸಂಗೀತ ವಸ್ತು ಸಂಗ್ರಹಾಲಯ ಸ್ಥಾಪಿಸಿದ್ದಾರೆ. ಇವರ ಸಿತಾರ ಸಂಗೀತ ಸೇವೆಯ ಸಾಧನೆಯನ್ನು ಪರಿಗಣಿಸಿದ ಕರ್ನಾಟಕ ಸರ್ಕಾರವು 2016 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ ಎಂದರು.

ಪ್ರೊ.ವ್ಹಿ.ಜಿ.ಮಹಾಪುರಷ ಹಾಗೂ ಶ್ರೀಮತಿ ಮೋನಬಾಯಿ ಮಹಾಪುರಷ ದಿವ್ಯ ಸಾನಿಧ್ಯ ವಹಿಸಿದ್ದರು. ಗದ್ದನಕೇರಿ ಮಠದ ಪೂಜ್ಯ ಭಾಸ್ಕರ ಮಹಾಸ್ವಾಮಿಗಳು, ಮುರನಾಳ ಮಠದ ಪೂಜ್ಯ ಜಗನ್ನಾಥ ಮಹಾಸ್ವಾಮಿಗಳು, ಪೂಜ್ಯ ಮೋನಪ್ಪಯ್ಯ ಮತ್ತು ಮೇಘರಾಜ ಸ್ವಾಮಿಗಳು, ಮೇಘರಾಜ, ವಿಶ್ರಾಂತ ತಬಲಾ ವಾದಕ ಪ್ರೊ.ಬಳ್ಳೂರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಆಕಾಶವಾಣಿ ಕಲಾವಿದ ಅಶೋಕ ಬಡಿಗೇರ ತಂಡದವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಜರುಗಿತು. ರೇವಣಸಿದ್ದಪ್ಪ ಬೆಣ್ಣೂರ ಪ್ರಾರ್ಥಿಸಿದರು, ಬಸವರಾಜ ದಾಸರ ನಿರೂಪಿಸಿದರು. ಸಂಗಮೇಶ ಬಡಿಗೇರ ವಂದಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾಗಿರಿ, ಬಾಗಲಕೋಟೆ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು, ಭಕ್ತಾಧಿಗಳು, ಕುಟುಂಬ ವರ್ಗದವರು ಭಾಗವಹಿಸಿದ್ದರು.

# ಹನುಮನಾಮ ಸ್ಮರಣೆಯಿಂದ ಎಲ್ಲರ ಸಂಕಷ್ಟಗಳು ದೂರ : ಹಿರೇಮಠ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಭಗವಂತ ರೂಪಿಸಿರುವ ಸೃಷ್ಠಿಯ ಮೇಲೆ ಇರುವ ಎಲ್ಲಾ ದೇವಾನುದೇವತೆಗಳಲ್ಲಿ ಹನುಮಾನನಿಗೆ ವಿಶೇಷ ಸ್ಥಾನಮಾನವಿದೆ, ಆತನನ್ನು ಇಡೀ ವಿಶ್ವದ ಜನರೇ ಪೂಜಿಸುತ್ತಾರೆ. ಶ್ರದ್ಧೆ, ಭಕ್ತಿಯಿಂದ ಹನುಮನಾಮ ಸ್ಮರಿಸುವ ಭಕ್ತರ ಸಂಕಷ್ಟಗಳು ದೂರವಾಗುತ್ತವೆ ಎಂದು ಶ್ರೀಗಳಾದ ಕುಮಾರಸ್ವಾಮಿ ಹಿರೇಮಠ ನುಡಿದರು.

ತಾಲೂಕಿನ ಹತ್ತಿಕುಣಿ ಗ್ರಾಮದಲ್ಲಿರುವ ಐತಿಹಾಸಿಕ ಹಿನ್ನೆಲೆಹೊಂದಿದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ನಿಮಿತ್ಯ ಭಕ್ತನಾದ ಮಲ್ಲಿಕಾರ್ಜುನ ತಮ್ಮಣ್ಣೋರ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಹನುಮ ಜಯಂತಿ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು ಈ ಭೂಮಂಡಲದ ದಶದಿಕ್ಕುಗಳಲ್ಲಿ ಹನುಮಾನ ಮಂದಿರವಿರುವುದನ್ನು ಎಲ್ಲಾ ಕಡೆ ಗಮನಿಸುತ್ತೇವೆ. ಆತನನ್ನು ಎಲ್ಲಾ ವರ್ಗದ ಜನರು ಪೂಜಿಸಿ, ಆರಾಧಿಸುತ್ತಿರುವ ಪರಿಣಾಮ ಸಮಾಜದಲ್ಲಿ ಸಾಮರಸ್ಯ ವಾತಾವರಣ ಸೃಷ್ಠಿಯಾಗಿದೆ ಎಂದು ಹೇಳಿದರು.

ಶಕ್ತಿಶಾಲಿ ಹನುಮ ಜನಿಸಿದ್ದು, ಕಲ್ಯಾಣ ಕರ್ನಾಟಕದ ಕಿಷ್ಕಿಂದೆಯಲ್ಲಿ ಎಂಬುದೇ ನಮ್ಮೆಲ್ಲರಿಗೆ ಹೆಮ್ಮೆಯಾಗಿದೆ. ಎಲ್ಲರೂ ತಮ್ಮ ದೈನಂದಿನ ಕಾರ್ಯಗಳ ಜೊತೆಗೆ ಸ್ವಲ್ಪ ಸಮಯ ಧಾರ್ಮಿಕ ಚಟುವಟಿಕೆಗಳೊಂದಿಗೆ ಮೀಸಲಿಟ್ಟು ಭಾಗವಹಿಸಬೇಕು ಅದರಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ಸಿಗುವ ಜೊತೆಗೆ ಬದಲಾವಣೆಗೆ ಪ್ರೇರಣೆ ಸಿಗುತ್ತದೆ ಎಂದು ತಿಳಿಸಿದರು.

ಗ್ರಾಮದಲ್ಲಿ ವಿಶೇಷವಾಗಿ ಯುವಕರ ತಂಡ ಹಲವಾರು ವರ್ಷಗಳಿಂದ ಪ್ರತಿವರ್ಷ ಹನುಮ ಜಯಂತಿಯನ್ನು ಆಚರಿಸಿಕೊಂಡು ಬರುವ ಜೊತೆಗೆ ಸದಾ ದೇವಸ್ಥಾನವನ್ನು ಸ್ವಚ್ಛಗೊಳಿಸಿ ಉತ್ತಮ ವಾತಾವರಣ ನಿರ್ಮಾಣ ಮಾಡಿದ್ದಾರೆ. ಪರಿಣಾಮ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದರ್ಶನ ಪಡೆದು ಪುನೀತರಾಗುತ್ತಿದ್ದಾರೆ ಎಂದರು.

ಶ್ರೀಗಳು ಹನುಮನಿಗೆ ಪಂಚಾಮೃತ ಅಭಿಷೇಕ, ಹನುಮಾನ ಚಾಲೀಸ ಪಠಣ ಮಾಡಿ ಮೂರ್ತಿಗೆ 108 ಬಿಲ್ವ ಪತ್ರಿಗಳನ್ನು ಅರ್ಪಿಸಿ ಪೂಜಿಸಿದರು. ನಂತರ ಸಹಸ್ರಾರು ಜನರಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಚಂದ್ರಕಾಂತ ಸಿಂಪಿಗೇರ್, ಬಸ್ಸಣ್ಣ ಬಾವನೋರ, ಈರಪ್ಪ ಬಸವಂತಪೂರ, ಮಲ್ಲಿಕಾರ್ಜುನ ತಮ್ಮಣ್ಣೋರ್, ಶರಣು ಭೀಮಶಪ್ಪನೋರ್, ದೇವಪ್ಪ ಬೂದುರ, ರೆಡ್ಡಿ ತಮ್ಮಣ್ಣೋರ್, ಹಣಮಂತ ಮಡಿವಾಳ, ಶಿಕ್ಷಕ ಸುನೀಲ ಕುಮಾರ, ಶರಣು ಗಡೇದ್, ಸುಬ್ಬಣ್ಣಗೌಡ, ಮಲ್ಲಯ್ಯ ಗೌಡಿಗೇರ್, ಶರಣಪ್ಪ ತಮ್ಮಣ್ಣೋರ್, ದೀಪಕ್, ಸುಲೋಚಮ್ಮ ಗಡೇದ್, ದೇವಿಂದ್ರಮ್ಮ ಗುರೇರ್, ಮಾಳಪ್ಪ ಪೂಜಾರಿ, ಮನೋಜ ಮಾಲಿಪಾಟೀಲ, ಸೇರಿದಂತೆ ಸಹಸ್ರಾರು ಭಕ್ತರು ಉಪಸ್ಥಿತರಿದ್ದರು.

# ಉದ್ಯೋಗ ಖಾತ್ರಿ ಯೋಜನೆ ಶೀಘ್ರವೇ ನೀಡಲು ಒತ್ತಾಯ

ಮಲ್ಲಮ್ಮ ನುಡಿ ವಾರ್ತೆ

ಚಿತ್ತಾಪುರ:ಏ.12: ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ ಶೀಘ್ರವೇ ವೇತನ ಪಾವತಿ ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆಯ ತಾಲೂಕ ಅಧ್ಯಕ್ಷ ರಾಜಕುಮಾರ ಯರಗೋಳ ಅವರು ಆಗ್ರಹಿಸಿದ್ದಾರೆ.

ಪಟ್ಟಣದ ಬಜಾಜ ಕಾಂಪ್ಲೆಕ್ಸ್ ಮೀಟಿಂಗ್ ಹಾಲ್ ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ತಾಲೂಕಿನಾದ್ಯಂತ ಸಾವಿರಾರು ಜನ ಕೂಲಿ ಕಾರ್ಮಿಕರು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಿದ್ದು ಪ್ರತಿ ದಿನಕ್ಕೆ 349 ರೂಪಾಯಿಯಂತೆ ಒಟ್ಟು ಎರಡು ತಿಂಗಳ ವೇತನ ನೀಡದೆ ಇರುವುದರಿಂದ ಕೂಲಿ ಕಾರ್ಮಿಕರು ಕಂಗಾಲಾಗಿದ್ದು ಬಡವರು ತಮ್ಮ ಸಂಸಾರ ನಡೆಸಲು ದುಸ್ತರವಾಗಿದೆ.

ಅಧಿಕಾರಿಗಳು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಿದ ಬಡ ಕೂಲಿ ಕಾರ್ಮಿಕರ ವೇತನ ಅತಿ ಬೇಗನೆ ಪಾವತಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.


# ಚರ್ಮರೋಗ ತಜ್ಞ ಅರುಣಗೆ ಅಂತರಾಷ್ಟ್ರೀಯ ಪ್ರಶಸ್ತಿ

ಮಲ್ಲಮ್ಮ ನುಡಿ ವಾರ್ತೆ

ವಿಜಯಪುರ,ಏ. 12: ನಗರದ ಬಿ.ಎಲ್.ಡಿ.ಇಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಪತಿ ಮತ್ತು ಚರ್ಮರೋಗ ಖ್ಯಾತ ತಜ್ಞ ಡಾ. ಅರುಣ ಚಂ. ಇನಾಮದಾರ ಅವರಿಗೆ ಪ್ರತಿಷ್ಠಿತ ಫ್ರೋ. ಸುರೀಂದರ ಕೌರ ಭಾರತದ ಅತ್ಯುತ್ತಮ ಚಿಕ್ಕ ಮಕ್ಕಳ ಚರ್ಮ ರೋಗತಜ್ಞ-2025 ಅಂತಾರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ದಕ್ಷಿಣ ಅಮೇರಿಕದ ಅರ್ಜೆಂಟಿನಾದ ರಾಜಧಾನಿ ಬ್ಯೂನಸ್ ಐರಿಸ್ ನಲ್ಲಿ ಏ. 7 ರಿಂದ 11ರ ವರೆಗೆ ನಡೆದ 15ನೇ ಅಂತಾಷ್ಟ್ರೀಯ ಮಕ್ಕಳ- ಚರ್ಮ ರೋಗ ತಜ್ಞ ವೈದ್ಯರ ಸಮ್ಮೇಳನದ ಸಮಾರೋಪ ಸಮಾರಂಭ ಶುಕ್ರವಾರ ನಡೆಯಿತು. ಈ ಕಾರ್ಯಕ್ರಮದಲ್ಲಿ ಡಾ. ಅರುಣ ಚಂ. ಇನಾಮದಾರ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಂತಾರಾಷ್ಟ್ರೀಯ ಚಿಕ್ಕ ಮಕ್ಕಳ ಚರ್ಮ ರೋಗ ತಜ್ಞ ವೈದ್ಯರ ಸಂಘದ ಅಧ್ಯಕ್ಷೆ ಮತ್ತು ವಿಶ್ವದ ಅತ್ಯಂತ ಪ್ರಭಾವಿ ಚರ್ಮರೋಗ



ವೈದ್ಯೆ ಅಮೇರಿಕದ ಫ್ರೋ. ಏಮಿ ಪ್ಯಾಲರ ಮಾತನಾಡಿ ಡಾ. ಅರುಣ ಚಂ. ಇನಾಮದಾರ ಅವರ ಸೇವೆ ಭಾರತಕ್ಕಲ್ಲದೆ ವಿಶ್ವಕ್ಕೆಲ್ಲ ಹರಡಲಿ ಎಂದು ಶುಭ ಹಾರೈಸಿದರು. ಹಾರೈಸಿದರು. ಸಂಘಟನೆಯ ಸೆಕ್ರೆಟರಿ ಜನರಲ್ ಕುವೈತ್ ನ ಡಾ. ಆರತಿ ನಂದಾ ಮತ್ತು ಅರ್ಜೆಂಟೀನಾದ ಡಾ. ಪೌಲಾ ಲೂನಾ ಮಾತನಾಡಿ ಡಾ. ಅರುಣ ಚಂ. ಇನಾಮದಾರ ಅವರು ಚರ್ಮರೋಗ ವಿಭಾಗಕ್ಕೆ ನೀಡಿದ ಕೊಡುಗೆಯನ್ನು ಶ್ಲಾಘಿಸಿ ಶುಭ

# ಸಾಕಪ್ಪ ಸಾಕು ಕಾಂಗ್ರೆಸ್ ಸರ್ಕಾರ ಅಭಿಯಾನಕ್ಕೆ ಎಚ್‌ಡಿಕೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ.ಏ.12:-ಬಾಲ್ಯದಲ್ಲಿಯೆ ಬಾಬಾ ಅವರ ಮನೆಯ ಸೇವಕನಾಗಿ ನಿಂತ ಬಿ.ಕೆ ಪ್ರಭಾಕರ್ ಅವರು ತಮ್ಮ ಲೌಕಿಕ ಬದುಕಿನಲ್ಲಿ ವಕೀಲರಾಗಿ ಸೇವೆ ಸಲ್ಲಿಸುವಾಗ ಯಾರ ಬಳಿ ಒಂದು ನಯಾ ಪೈಸೆ ಶುಲ್ಕವಿಲ್ಲದೆ ಮಾಡಿದ ಕಾರ್ಯ ಸ್ಮರಣಿಯವಾಗಿದೆ ಎಂದು ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಹೇಳಿದರು. ನಗರದ ಜನವಾಡ ರಸ್ತೆಯಲ್ಲಿರುವ ಬ್ರಹ್ಮಾಕುಮಾರಿ ಕೇಂದ್ರಪಾವನಧಾಮ ಅವರಣದಲ್ಲಿ ಶನಿವಾರ ಶುಕ್ರವಾರ ಮೌಂಟ್ ಅಬುದಲ್ಲಿ ದೇಹ ತ್ಯಾಗ ಮಾಡಿದ್ದ ಬಿ.ಕೆ ಪ್ರಭಾಕರ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಅವರ ನೇರ ನುಡಿ, ನಿಷ್ಠುರತೆ, ಮಾತೃಹೃದಯತೆ, ಮಧುರತೆ ನಮ್ಮೆಲ್ಲರಿಗೆ ಮಾದರಿ. ಅವರ ಪರಮಧಾಮ ಯಾತ್ರೆ ಸುಖಮಯವಾಗಿರಲಿ ಎಂದು ಹರಿಸಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ಈ ಸಂದರ್ಭದಲ್ಲಿ ಮಾತನಾಡಿ, ಮೌಂಟ್ ಅಬು ನಮ್ಮೆಲ್ಲರಿಗೆ ತಪಸ್ಸು ಧಾಮ. ಆ ತಪಸ್ಸು ನೆಲೆಯಲ್ಲಿ ಮುರ್ಲಿ ಓದುವ ಅಮೃತ ಘಳಿಗೆಯಲ್ಲಿ ಶರೀರ ತ್ಯಾಗ ಮಾಡಿರುವ ಪ್ರಭಾಕರ್ ಅಣ್ಣನವರಂಥ ಸಾವು ಕೋಟಿಯಲ್ಲಿ ಒಬ್ಬರಿಗೆ ಸಿಗುತ್ತದೆ. 2013ರಲ್ಲಿ ತಾನು ಈ ಪರಮಾತ್ಮನ ಮನೆಗೆ ಪರಿಚಯವಾಗುವುದಕ್ಕಿಂತ ಮುಂಚೆ ಮಾಧ್ಯಮಗಳಿಗೆ ಬಾಬಾ



ಅವರ ಮನೆಯ ಕಾರ್ಯಕ್ರಮದ ಸುದ್ದಿಗಳು ಕೈಯಿಂದ ಬರೆದು ಕೊಡುತ್ತಿದ್ದರು.ನಾನು ಪರಿಚಯವಾದ ಬಳಿಕ ಅವರ ಬರವಣಿಗೆ ನಿಂತು ಹೊಯಿತು. ನನ್ನ ಜವಾಬ್ದಾರಿ ತಾವು ನಿಭಾಯಿಸುತ್ತಿದ್ದಿರಿ ಎಂದು ಹೇಳುತ್ತಿದ್ದರು ಎಂದರು.

ಕೇಂದ್ರದ ಸಂಚಾಲಕರಾದ ಬಿ.ಕೆ ಪ್ರತಿಮಾ ಬಹೆನ್ ಜಿ ಮಾತನಾಡಿ, ಪ್ರಭಾಕರ ಭಾಯಿ ಅವರು ನಮ್ಮನ್ನು ಬಿಟ್ಟು ಎಲ್ಲಿ ಹೋಗಿಲ್ಲ. ಸದಾ ಅವರ ಚೈತನ್ಯ ಆತ್ಮಶಕ್ತಿ ನಮ್ಮೊಂದಿಗಿದೆ. ಅವರ ಪರಮಾತ್ಮನ ಸೇವೆ ತಾನು ಬೀದರ್ ಗೆ ಬಂದಾಗಿನಿಂದ ಪರಮಾತ್ಮನಿಗೆ ಸಮರ್ಪಿತನಾಗಿ ಹಿರಿಯ ಸಹೋದರನ ಸ್ಥಾನ ತುಂಬಿದ ಮಹಾನುಭಾವರು. ಅವರ ಅಧ್ಯಾತ್ಮಿಕ ಬದುಕು ಲೌಕಿಕ ಹಾಗೂ ಅಲೌಕಿಕದಲ್ಲಿರುವ ಎಲ್ಲರಿಗೂ ಪ್ರೇರಣಾದಾಯಕವಾಗಿದೆ ಎಂದರು. ನಂತರ ನೆರೆದ ಸಹೋದರ, ಸಹೋದರಿಯರು ಒಬ್ಬೊಬ್ಬರಾಗಿ ಬಂದು ಪ್ರಬವಾಕರ ಅವರ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು. ಕೇಂದ್ರದ ಸಮರ್ಪಿತ ಸಹೋದರಿಯರು ಸರದಿಯಂತೆ ಯೋಗದಲ್ಲಿ ತಲ್ಲಿನರಾದರು. ಸರಿಯಾಗಿ 3 ಗಂಟೆಗೆ ನಗರದ ಸರಸಿಂಹ ಝರಣಿ ಬಳಿಇರುವ ರುದ್ರಭೂಮಿಯಲ್ಲಿ ಅವರ ಅಂತ್ಯಸಂಸ್ಕಾರ ನೆರವೇರಿತು.


# ರಾಜ್ಯಪಾಲರು-ರಾಷ್ಟ್ರಪತಿಗಳ ಸಮ್ಮತಿಯಿಲ್ಲದೆ 10 ಕಾಯ್ದೆ ಜಾರಿಗೊಳಿಸಿದ ತ.ನಾಡು

ಮಲ್ಲಮ್ಮ ನುಡಿ ವಾರ್ತೆ

ಚೆನ್ನೈ:ಏ.12: ತಮಿಳುನಾಡು ಸರ್ಕಾರವು ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳ ಸಮ್ಮತಿಯಿಲ್ಲದೆ 10 ಕಾಯ್ದೆಗಳನ್ನು ಅಧಿಕೃತವಾಗಿ ಜಾರಿಗೊಳಿಸಿದೆ. ಸುಪ್ರೀಂ ಕೋರ್ಟ್‌ನ ಐತಿಹಾಸಿಕ ತೀರ್ಪಿನ ಆಧಾರದಲ್ಲಿ ಸರ್ಕಾರ ಈ ನಿರ್ಧಾರ ತೆಗೆದು-ಕೊಂಡಿದೆ.

ತಮಿಳುನಾಡು ರಾಜ್ಯ ವಿಧಾನಸಭೆಯು 2020ರ ಜನವರಿಯಿಂದ 2023ರ ಏಪ್ರಿಲ್‌ವರೆಗೆ 12 ಮಸೂದೆಗಳನ್ನು ಅಂಗೀಕರಿಸಿತ್ತು. ಈ ಮಸೂದೆಗಳು ರಾಜ್ಯದ ವಿಶ್ವವಿದ್ಯಾಲಯಗಳ ಆಡಳಿತವನ್ನು ಗವರ್ನರ್‌ರಿಂದ ರಾಜ್ಯ ಸರ್ಕಾರಕ್ಕೆ ವರ್ಗಾಯಿಸುವ ಗುರಿಯನ್ನು ಹೊಂದಿದ್ದವು. ಆದರೆ, ಗವರ್ನರ್ ಆರ್.ಎನ್.ರವಿ ಈ ಮಸೂದೆಗಳಿಗೆ ಸಮ್ಮತಿ ನೀಡದೆ ಮೂರು ವರ್ಷಗಳಿಗೂ ಹೆಚ್ಚು ಕಾಲ ವಿಳಂಬ ಮಾಡಿದರು.

2023ರ ನವೆಂಬರ್‌ನಲ್ಲಿ ಗವರ್ನರ್ 10 ಮಸೂದೆಗಳಿಗೆ ಸಮ್ಮತಿಯನ್ನು ನಿರಾಕರಿಸಿದರು. ಎರಡನ್ನು ರಾಷ್ಟ್ರಪತಿಗಳ ಪರಿಗಣನೆಗೆ ಕಳುಹಿಸಿದರು. ರಾಜ್ಯ ವಿಧಾನಸಭೆಯು ಈ 10 ಮಸೂದೆಗಳನ್ನು ವಿಶೇಷ ಅಧಿವೇಶನದಲ್ಲಿ ಮತ್ತೆ ಅಂಗೀಕರಿಸಿ ಗವರ್ನರ್‌ಗೆ ಕಳುಹಿಸಿತಾದರೂ, ಅವರು ಇವುಗಳನ್ನು ರಾಷ್ಟ್ರಪತಿಗಳಿಗೆ ರವಾನಿಸಿದರು. ರಾಷ್ಟ್ರಪತಿಗಳು



ಒಂದು ಮಸೂದೆಗೆ ಸಮ್ಮತಿ ನೀಡಿದರು, ಏಳನ್ನು ತಿರಸ್ಕರಿಸಿದರು ಮತ್ತು ಎರಡನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ.

ಈ ವಿಳಂಬ ಮತ್ತು ಕ್ರಮಗಳನ್ನು ಪ್ರಶ್ನಿಸಿ, ತಮಿಳುನಾಡು ಸರ್ಕಾರವು 2023ರ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತು. ಗವರ್ನರ್‌ರ ಕ್ರಮಗಳು ಸಂವಿಧಾನದ 200ನೇ ವಿಧಿಯನ್ನು ಉಲ್ಲಂಘಿಸುತ್ತವೆ ಎಂದು ಸರ್ಕಾರ ವಾದಿಸಿತು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾ. ಜೆ.ಬಿ. ಪಾರ್ಡಿವಾಲಾ ಮತ್ತು ಆರ್. ಮಹದೇವನ್ ಅವರ ದ್ವಿಸದಸ್ಯ ಪೀಠವು, ಗವರ್ನರ್ ಆರ್.ಎನ್.ರವಿ ಅವರ ಕ್ರಮವನ್ನು ಕಾನೂನುಬಾಹಿರ ಮತ್ತು ತಪ್ಪು ಎಂದು ಘೋಷಿಸಿತು. ರಾಜ್ಯಪಾಲರಿಗೆ ಮಸೂದೆಗಳನ್ನು ಅನಿರ್ದಿಷ್ಟವಾಗಿ ತಡೆಹಿಡಿಯುವ 'ಪಾಕೆಟ್ ವೀಟೋ' ಅಧಿಕಾರವಿಲ್ಲ. ಸಂವಿಧಾನದಲ್ಲಿ ಇಂತಹ ಆಯ್ಕೆಯನ್ನು ಒದಗಿಸಲಾಗಿಲ್ಲ ಎನ್ನುವ ಮೂಲಕ ರಾಜ್ಯಪಾಲರ ಕಾರ್ಯವಿಧಾನಕ್ಕೆ ಸ್ಪಷ್ಟ ಸಮಯ ಮಿತಿಗಳನ್ನು ವಿಧಿಸಿತು. ಸಮ್ಮತಿಯನ್ನು ನಿರಾಕರಿಸಲು ಅಥವಾ ರಾಷ್ಟ್ರಪತಿಗಳಿಗೆ ಕಳುಹಿಸಲು ಒಂದು ತಿಂಗಳು, ಸಮ್ಮತಿಯನ್ನು ನಿರಾಕರಿಸಲು ಮತ್ತು ವಿಧಾನಸಭೆಗೆ ಮರಳಿಸಲು ಮೂರು ತಿಂಗಳು ಹಾಗೂ ಮರು-ಅಂಗೀಕೃತ ಮಸೂದೆಗೆ ಸಮ್ಮತಿ ನೀಡಲು ಒಂದು ತಿಂಗಳು ಸಮಯ ನಿಗದಿ ಮಾಡಿತು.

ಸುಪ್ರೀಂ ಕೋರ್ಟ್ ತನ್ನ ವಿಶೇಷ ಅಧಿಕಾರವಾದ ಆರ್ಟಿಕಲ್ 142ನ್ನು ಬಳಸಿಕೊಂಡು, ಈ 10 ಮಸೂದೆಗಳು ರಾಜ್ಯ ವಿಧಾನಸಭೆಯಿಂದ ಮರು-ಅಂಗೀಕರಿಸಿದ ದಿನಾಂಕದಿಂದಲೇ ಗವರ್ನರ್‌ರ ಸಮ್ಮತಿಯನ್ನು ಪಡೆದಿರುವಂತೆ ಘೋಷಿಸಿತು. ರಾಷ್ಟ್ರಪತಿಗಳಿಂದ ತೆಗೆದುಕೊಂಡ ಯಾವುದೇ ಕ್ರಮಗಳನ್ನು ಅಸಿಂಧು ಎಂದು ಘೋಷಿಸಲಾಯಿತು.

ಸುಪ್ರೀಂ ಕೋರ್ಟ್ ಆದೇಶದ ಅನ್ವಯ ತಮಿಳುನಾಡು ಸರ್ಕಾರವು ಈ 10 ಕಾಯ್ದೆಗಳನ್ನು ಸರ್ಕಾರಿ ಗೆಜೆಟ್‌ನಲ್ಲಿ ಅಧಿಸೂಚಿಸಿತು. ಇದರಿಂದಾಗಿ ಅವು ಕಾನೂನು ರೂಪವನ್ನು ಪಡೆದವು. ತಮಿಳುನಾಡು ವೆಟರಿನರಿ ಮತ್ತು ಪಶು ವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಕಾಯ್ದೆ, ತಮಿಳುನಾಡು ಮೀನುಗಾರಿಕೆ ವಿಶ್ವವಿದ್ಯಾಲಯ (ತಿದ್ದುಪಡಿ) ಕಾಯ್ದೆ, ಅಣ್ಣಾ ವಿಶ್ವವಿದ್ಯಾಲಯ (ತಿದ್ದುಪಡಿ) ಕಾಯ್ದೆ ಸೇರಿ ಹತ್ತು ಕಾಯ್ದೆಗಳು ಕಾನೂನಾಗಿ ಜಾರಿಯಾದವು. ಇದು ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ನಡೆದ ಬೆಳವಣಿಗೆಯಾಗಿದೆ.

# ಅಂದಿಗಾಲೀಶ ಗುಡ್ಡದಲ್ಲಿ ಹನುಮ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯ ಅಗಳಕೇರಿ ವ್ಯಾಪ್ತಿಯಲ್ಲಿರುವ ಶ್ರೀ ಅಂದಿಗಾಲೀಶ ಗುಡ್ಡದಲ್ಲಿ ಅಷ್ಟಸಿದ್ಧಿ ಪ್ರದಾತನಾದ ಶ್ರೀ ಅಂದಿಗಾಲೀಶನ ಗುಡ್ಡದಲ್ಲಿ ಹನುಮ ಜಯಂತಿಯನ್ನು ವಿಶಿಷ್ಟವಾಗಿ ಆಚರಿಸಲಾಯಿತು.

ವಿಶ್ವಾವಸು ನಾಮ ಸಂವತ್ಸರದ ಚೈತ್ರ ಮಾಸದ, ಶುಕ್ಲ ಪಕ್ಷ ಹುಣ್ಣಿಮೆಯ ಈ ದಿನ ಶನಿವಾರ ಬಂದಿದ್ದರಿಂದ ಹನುಮ ಜಯಂತಿಗೆ ವಿಶೇಷತೆ ಬಂದಿದೆ. ಹನುಮಾನ ಜಯಂತಿ, ಹನುಮಾನ ಜನ್ಮೋತ್ಸವ, ಚೈತ್ರ ಪೂರ್ಣಿಮಾ ಎಂದು ಕರೆಯುವ ಈ ದಿನ ಹನುಮಂತ ದೇವರಿಗೆ ವಿಶಿಷ್ಟ ಕಳೆ ಮೂಡಿದೆ. ಚೈತ್ರ ನವಪದ ಒಲಿ ಮುಕ್ತಾಯದ ಈ ದಿನ ಪೂರ್ಣಿಮ ವ್ರತ ಆಚರಿಸುವುದರಿಂದ ಸದ್ಭಕ್ತರಿಗೆ ಇಷ್ಟಾರ್ಥ ಸಿದ್ಧಿ ಆಗುತ್ತದೆ ಎನ್ನುವ ನಂಬಿಕೆ ಇದೆ. ಹೀಗಾಗಿ ಇಂದು ಹನುಮ ಜಯಂತಿಗೆ ವಿಶೇಷತೆ ಇದೆ.

ಆನೆಗೊಂದಿ, ಅಂಜನಾದ್ರಿ, ಪಂಪಾ ಸರೋವರದ ಪಶ್ಚಿಮ ಭಾಗದಲ್ಲಿರುವ ಶಿವಪುರ ಗ್ರಾಮದ ಬಳಿಯ ಗುಡ್ಡದಲ್ಲಿ ಶ್ರೀ ಅಂದಿಗಾಲೀಶ ಸ್ವಾಮಿ ನೆಲೆ ನಿಂತಿದ್ದಾನೆ. ಸುಂದರಕಾಂಡದಲ್ಲಿ ಮಹೇಂದ್ರ ಪರ್ವತ ಸಮುಚ್ಚಯದ ಒಂದು ಭಾಗ ಎಂದು ಕರೆಯುವ ಈ ಗುಡ್ಡದಲ್ಲಿ ಭಜರಂಗಿಯ ಭಕ್ತರು ಇಂದು ಗುಡ್ಡ ಹತ್ತಿ ಅಂದಿಗಾಲೀಶನ ದರ್ಶನ ಪಡೆದರು. ಬೆಳಿಗ್ಗೆಯಿಂದಲೇ ಗೋವಿಂದ ನಾಮ ಉದ್ಘೋಷಿಸುತ್ತ, ಹನುಮಂತನ ನಾಮಗಾನ ಪಾಡುತ್ತ, ವಿಶೇಷ ಪೂಜೆ ಸಲ್ಲಿಸಿದರು.

ನಿರ್ಮಾಲ್ಯ ವಿಸರ್ಜನೆ, ಅಭಿಷೇಕ, ಕುಂಕುಮಾರ್ಚನೆ, ಎಲೆ ಚಿಟ್ಟಿ ಸೇವೆ, ಹೂವಿನ ಅಲಂಕಾರ ಸೇವೆ, ಹಣ್ಣುಕಾಯಿ ಸಲ್ಲಿಸಿ ಬಳಿಕ ಮಹಾ



ಮಂಗಳಾರತಿ ಬೆಳಗಿದರು. ಶ್ರೀ ಅಂದಿಗಾಲೀಶ ದೇವರು ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ ಮತ್ತು ವಶಿತ್ವ ಎನ್ನುವ ಎಂಟು ಸಿದ್ಧಿಗಳನ್ನು ಹೊಂದಿದ್ದಾನೆ. ಅಸಾಧಾರಣ ಶಕ್ತಿಗಳನ್ನು ಪ್ರತಿನಿಧಿಸುತ್ತಿರುವ ಶ್ರೀ ಅಂದಿಗಾಲೀಶನ ಗುಡ್ಡಕ್ಕೆ ವರ್ಷದಿಂದ ವರ್ಷಕ್ಕೆ ಆಗಮಿಸುವ ಭಕ್ತರ ಸಂಖ್ಯೆ ಹೆಚ್ಚುತ್ತಿದೆ ಎಂದು ಭಕ್ತರು ಹೇಳುತ್ತಿದ್ದಾರೆ.

ಇಂದು ನಡೆದ ಹನುಮ ಜಯಂತಿ ಆಚರಣೆಯ ಸೇವೆಯನ್ನು ಶ್ರೀ ಅಂದಿಗಾಲೀಶ ಸ್ವಾಮಿಯ ಭಕ್ತರಾದ ಕೃಷ್ಣ ಗಡಾದ, ಮಂಜುನಾಥ ಶೆಟ್ಟರ್, ವೆಂಕಟೇಶ ಪಟವಾರಿ, ಪರಶುರಾಮ ವಡ್ಡರ, ಪರಶುರಾಮ ಗಮಣಿ, ಬಸವರಾಜ ಕರ್ಕಿಹಳ್ಳಿ, ವೀರಣ್ಣ ಕೋಮಲಾಪುರ, ಕೆಂಚಪ್ಪ ಹಿಟ್ನಾಳ್, ಹನುಮಂತ ಬಿ., ಸೇರಿದಂತೆ ಅಗಳಕೇರಿ, ಶಹಪುರ, ಶಿವಪುರ ಮತ್ತು ಸುತ್ತಮುತ್ತಲ ಗ್ರಾಮದ ಭಕ್ತರು ಸಲ್ಲಿಸಿದರು.

ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ವಿದ್ಯಾರ್ಥಿಗಳು ಭಗತ್ ಸಿಂಗ್, ನೇತಾಜಿ

# ಕನಸಿನ ಭಾರತ ನಿರ್ಮಿಸಲು ಸಜ್ಜಾಗಿ : ಕಲ್ಯಾಣ.ವಿ ಕರೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಭಗತ್ ಸಿಂಗ್ ಮತ್ತು ನೇತಾಜಿ ಅವರ ಕನಸಿನ ಸಮಾಜವಾದಿ ಭಾರತ ನಿರ್ಮಿಸಲು ಸಜ್ಜಾಗಿ ಎಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಲ್ಯಾಣ.ವಿ ಅವರು ಕರೆ ನೀಡಿದರು.

ಕೊಪ್ಪಳ ನಗರದಲ್ಲಿ ಎರಡು ದಿನದ ಜಿಲ್ಲಾ ಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಶನಿವಾರ ಮಾತನಾಡಿದ ಅವರು, ಇತಿಹಾಸದಲ್ಲಿ ವಿವಿಧ ದೇಶಗಳಲ್ಲಿ ಆಯಾ ಕಾಲ ಘಟ್ಟಕ್ಕೆ ಹಲವಾರು ಮಹಾನ್ ವ್ಯಕ್ತಿಗಳು ಉದಯ. ಅದೇ ರೀತಿ ಭಾರತದ ನವೋದಯ ಕಾಲದಲ್ಲಿ ವಿದ್ಯಾ ಸಾಗರ್, ರಾಜಾರಾಮ್ ಮೋಹನ್ ರಾಯ್, ಸಾವಿತ್ರಿಬಾಯಿ ಫುಲೆ, ಜ್ಯೋತಿ ರಾವ್ ಫುಲೆ ಮುಂತಾದವರು ಇದ್ದರು ಎಂದರು.

ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಉದಯಿಸಿದ ಮಹಾನ್ ವ್ಯಕ್ತಿತ್ವಗಳಲ್ಲಿ ನೇತಾಜಿ ಮತ್ತು ಭಗತ್ ಸಿಂಗ್ ಮುಂಚೂಣಿಯಲ್ಲಿದ್ದವರು. ಸ್ವಾತಂತ್ರ್ಯ ಸಂಗ್ರಾಮದ ನೈಜ ಗುರಿಯನ್ನು ಸ್ಪಷ್ಟವಾಗಿ, ನಿಖರವಾಗಿ ಭಗತ್ ಸಿಂಗ್ ಮತ್ತು ನೇತಾಜಿ ಸಾರಿದರು ಎಂದು ಅವರು ಹೇಳಿದರು. ರಷ್ಯಾದಲ್ಲಿ ನಡೆದ ಕ್ರಾಂತಿ ಭಾರತದ ಕ್ರಾಂತಿಕಾರಿಗಳ ಮೇಲೆ ಗಾಢ ಪ್ರಭಾವ ಬೀರಿತ್ತು. ಭಗತ್ ಸಿಂಗ್ ಮತ್ತು ನೇತಾಜಿ ಇಬ್ಬರೂ ರಷ್ಯಾ ಮಾದರಿ ಸಮಾಜವಾದಿ ಭಾರತ ನಿರ್ಮಿಸಬೇಕೆಂಬ ಆಶಯ ಹೊಂದಿದ್ದರು. ಮಾನವನಿಂದ ಮಾನವನ ಶೋಷಣೆ ಯನ್ನು ಸಂಪೂರ್ಣವಾಗಿ ನಿರ್ಮೂ ಲನೆ ಮಾಡಬೇಕೆಂಬುದು ಅವರ ನಿಲುವಾಗಿತ್ತು. ಭಾರತದಲ್ಲಿ ಕ್ರಾಂತಿ ನೆರವೇರಬೇಕು, ಆ ಕ್ರಾಂತಿಯನ್ನು ಈ ದೇಶದ ಸಂಪತ್ತನ್ನು ಸೃಷ್ಟಿ ಮಾಡುವ ಕಾರ್ಮಿಕ ಮತ್ತು ರೈತರ ನೆರವೇರಿಸಬೇಕೆಂಬ ಕನಸನ್ನು ಕಂಡಿದ್ದರು ಎಂದರು. ಆದರೆ, ಅವರ ಕನಸು ಕನಸಾಗಿಯೇ ಉಳಿದಿದೆ. ಯಾವ ಕ್ರಾಂತಿ, ಜನತೆಗೆ ಸ್ವಾತಂತ್ರ್ಯವನ್ನು ತಂದು-ಕೊಟ್ಟು ಮಾನವನಿಂದ ಮಾನವನ ಶೋಷಣೆಯನ್ನು ಅಸಾಧ್ಯಗೊಳಿ ಸುತ್ತದೆಯೋ, ಅಂತಹ ಕ್ರಾಂತಿಯ ಸಂದೇಶವನ್ನು ವಿದ್ಯಾರ್ಥಿಗಳು ಹಾಗೂ ಯುವಜನರು ದೇಶದ ಮೂಲೆಮೂಲೆಗೂ ಒಯ್ಯಬೇಕು. ಕೋಟ್ಯಾಂತರ ಮರ್ದಿತ ಜನರಿಗೆ ತಲುಪಿಸಬೇಕು. ಶೋಷಣೆಗೆ ಮುಕ್ತಾಯ ಹಾಡಲು ಸಮಾಜವಾದಿ ಕ್ರಾಂತಿ ಅನಿವಾರ್ಯ ಎಂದು ಭಗತ್ ಸಿಂಗ್ ನಂಬಿದ್ದರು ಎಂದು ಅವರು ತಿಳಿಸಿದರು.

ಪ್ರಸ್ತುತ ಸಮಾಜದಲ್ಲಿ 20 ಕೋಟಿ ಜನ ಹಸಿವೆಯಿಂದ ನರಳುತ್ತಿದ್ದಾರೆ. ಪ್ರತಿದಿನ 4500 ಮಕ್ಕಳು ಅಪೌಷ್ಟಿಕತೆಗೆ ಬಲಿಯಾಗುತ್ತಿದ್ದಾರೆ. 7000 ಜನರು ಪ್ರತಿದಿನ ಹಸಿವೆಯಿಂದ ಸಾಯುತ್ತಿದ್ದಾರೆ. ಶಿಕ್ಷಣದ ವ್ಯಾಪಾರಿಕರಣ, ಹೆಣ್ಣು ಮಕ್ಕಳ ಮೇಲಿನ ಅಪರಾಧಗಳು ಮತ್ತು ರೈತ ಕಾರ್ಮಿಕರ ಸಾವು ಮಿತಿಮೀರಿದೆ. ಇವೆಲ್ಲ ಸಮಸ್ಯೆಗಳನ್ನು ತೊಡೆದು ಹಾಕಬೇಕೆಂದರೆ ಸಮಾಜವಾದಿ ಭಾರತ ಮಾತ್ರವೇ ಸಾಧ್ಯ ಎಂದು ಭಗತ್ ಸಿಂಗ್ ಮತ್ತು ನೇತಾಜಿ ನಂಬಿದ್ದರು. ಹೀಗಾಗಿ, ಅವರ ಕನಸಿನ ಭಾರತವನ್ನು ನಿರ್ಮಾಣ ಮಾಡಲು ವಿದ್ಯಾರ್ಥಿ ಯುವಜನರು ಸಜ್ಜಾಗಬೇಕು ಎಂದು ಅವರು ಕರೆ ನೀಡಿದರು. ಎಐಡಿಎಸ್‌ಓ ಜಿಲ್ಲಾ ಸಂಚಾಲಕರಾದ ಗಂಗಾರಾಜ ಅಳ್ಳಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಂಘಟನಕಾರರಾದ ಸದಾಶಿವ, ಸವಿತ, ಪಲ್ಲವಿ, ಬಾಬು, ಕವಿತಾ ಕಾರ್ಯಕರ್ತರಾದ ನವೀನ್, ಗಿರೀಶ್, ಶಾರದ, ರಮೇಶ್, ಅಶೋಕ್ ,ಅಂಜುಮ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

# ರಾಂಪುರ ಗ್ರಾಮದಲ್ಲಿ ಹನುಮಾನ ಜಯಂತಿ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ತಾಲೂಕಿನ ರಾಂಪುರ ಗ್ರಾಮದಲ್ಲಿ ಶನಿವಾರ ಹನುಮ ಜಯಂತಿ ಸಂಭ್ರಮ ಸಡಗರ ದಿಂದ ನೆರವೇರತು, ಬೆಳಗ್ಗೆ ಅಭಿಷೇಕ, ಎಲೆ ಪೂಜೆ, ಹೋಮ-ಹವನ ಮಾಡುವ ಮೂಲಕ ಹನುಮಾನ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ಸಿಕ್ಕಿತು. ಬೆಳಗ್ಗೆ 6 ಗಂಟೆಗೆ ಅಭಿಷೇಕ ಪೂಜೆ ಶ್ರೀಮತಿ ಮಂಗಲಾಬಾಯಿ ಗಂಡ ಶಿವಕುಮಾರ ರಾಂಪುರೆ ಇವರಿಂದ ನಡೆಯಿತು, ನಂತರ ಗ್ರಾಮದ ಮಹಿಳೆಯರಿಂದ ತೊಟ್ಟಿಲು ಕಾರ್ಯಕ್ರಮ ಜರುಗಿತು, ಹನುಮ ಭಜನೆ ಹಾಡುಗಳು, ಜಾನಪದ ಹಾಡುಗಳ ಮೂಲಕ ಎಲ್ಲರು ಹನುಮ ಭಕ್ತಿಯಲ್ಲಿ ಮಿಂದ್ದರು.

ಮುಖಂಡ ಶಿವಕುಮಾರ ಎಮ್. ರಾಂಪುರೆ ಮಾತನಾಡಿ, ಹಳೆ ರಾಂಪುರದಲ್ಲಿ ಇವರು ಹನುಮಾನ ಮಂದಿರ ಬಹಳ ಪುರಾತನ ಮತ್ತು ಶಕ್ತಿಶಾಲಿ ದೇವರು ಎಂದು ಸುತ್ತ ಮುತ್ತಲಿನ ಹಳ್ಳಿಯ ಜನರ ನಂಬಿಕೆ ಇದೆ, ಪ್ರತಿ ವರ್ಷ ದಂತೆ ಈ ವರ್ಷವು ರಾಂಪುರ, ಡಿಗ್ಗಿ, ಕೋಟಗ್ಯಾಳ,ಡೋಣಗಾಂವ,ತೋರಣ, ತೋರಣ ವಾಡಿ, ಹೊಳಸಮುದ್ರ, ಸೇರಿದಂತೆ ಸುತ್ತಮುತ್ತಲಿನ ಹಳ್ಳಿಯ ಜನರು ಬಂದು

ಅಭಿಷೇಕ,ಎಲೆಪೂಜೆ,ತೆಂಗಿನಕಾಯಿ ಒಡೆದು ಭಕ್ತಿ ಯಿಂದ ಪೂಜೆ ಸಲ್ಲಿಸಿದರು ಎಂದು ಹೇಳಿದರು.

ತೊಟ್ಟಿಲು ಕಾರ್ಯಕ್ರಮದಲ್ಲಿ ಮಹಿಳೆಯರು ಹನುಮ ದೇವರಿಗೆ ತೊಟ್ಟಿಲು ತೂಗಿ ಹಾಡು ಗಳನ್ನು ಹಾಡಿದರು, ಈ ಸಂದರ್ಭದಲ್ಲಿ ವಂದನಾ ಬದನ್ನಾಳೆ,ವಿಮಲಾಬಾಯಿ ಗೌಳಿ,ಮಯೂರಿ ಬದನ್ನಾಳೆ, ಅನಿತಾ ಡೋಂಗಪುರೆ, ವಿಜಯಲಕ್ಷ್ಮಿ ರಾಂಪುರೆ, ಬಾಲಿಕಬಾಯಿ ಗೌಳಿ, ಪಾರ್ವತಿ ಬದನ್ನಾಳೆ, ಸುರೇಖಾ ರಾಂಪುರೆ,ಪೂಜಾ ಬದನ್ನಾಳೆ, ಸಾಕ್ಷಿ ರಾಂಪುರೆ ಸೇರಿದಂತೆ ಗ್ರಾಮದ ಮಹಿಳೆಯರು ಸೇರಿದರು.

ಬಂದಂತ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು, ಈ ಸಂದರ್ಭದಲ್ಲಿ ಶಿವಕುಮಾರ ಕೆ. ರಾಂಪುರೆ, ಗೋಪಾಳ ಗೌಳಿ, ಧನರಾಜ್ ಡೋಂಗಾಪುರೆ,ಭೀಮ್ ರಾಂಪುರೆ, ಭೀಮರಾವ ರಾಂಪುರೆ,ಸಚಿನ ಹೊಳಸಮುದ್ರೆ,ಲಕ್ಷ್ಮಣ ರಾಠೋಡ, ಬಾಲಾಜಿ ಬದನ್ನಾಳೆ, ಶ್ರೀಧರ ರಾಂಪುರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಂಭ್ರಮದ ಮಲ್ಲಿಕಾರ್ಜುನ ರಥೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.12-ನಗರಕ್ಕೆ ಸಮೀಪದ ಐತಿಹಾಸಿಕ ಗುಡ್ಡದ ಮಲ್ಲಾಪೂರದ ಆರಾಧ್ಯ ದೈವ ಶ್ರೀ ಮಲ್ಲಿಕಾರ್ಜುನ ದೇವರ 27ನೇ ವರ್ಷದ ಜಾತ್ರಾ ಮಹೋತ್ಸವದ ನಿಮಿತ್ತ ಶನಿವಾರ ಮಲ್ಲಿಕಾರ್ಜುನ ದೇವರ ಮಹಾರಥೋತ್ಸವ ಅತ್ಯಂತ ವೈಭವದಿಂದ ನಡೆಯಿತು.

ಸಾಯಂಕಾಲ 5-30 ಗಂ-ಟೆಗೆ ಗುಳೇದಗುಡ್ಡ ಮರಡಿಮಠದ ಕಾಡಸಿದ್ದೇಶ್ವರ ಸ್ವಾಮಿಗಳ ಸಾನಿಧ್ಯದಲ್ಲಿ ಮತ್ತು ಗ್ರಾಮದ ಸಮಸ್ತ ಗುರು-ಹಿರಿಯರ ಹಾಗೂ ಸಾವಿರಾರು ಭಕ್ತ ಸಮೂಹದೊಂದಿಗೆ ಸಂಭ್ರಮ, ಸಡಗರದಿಂದ ಜರುಗಿತು.


ಬೆಳಿಗ್ಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ಮಹಾರುದ್ರಾಭಿಷೇಕ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಿತು. ಮಲ್ಲಾಪೂರ ಗ್ರಾಮದಿಂದ ದೇವಸ್ಥಾನದವರೆಗೆ ಕಳಸ ಹಾಗೂ ರುದ್ರಾಕ್ಷಿ ಮಾಲೆಯ ಮೆರವಣಿಗೆ ಸಾಗಿಬಂದಿತು. ಮಧ್ಯಾಹ್ನ 3 ಗಂ-ಟೆಗೆ ನೀರಲಕೇರಿ ಗ್ರಾಮದಿಂದ ತೇರಿನ ಕಳಸ, ಹೊನ್ನಾಕಟ್ಟಿ ಗ್ರಾಮದಿಂದ ತೇರಿನ ಹಗ್ಗ, ಕಿರಸೂರ ಗ್ರಾಮದಿಂದ ನಂದಿಕೋಲು ಮತ್ತು ಹುಬ್ಬಳ್ಳಿಯಿಂದ ಹೂವಿನ ಮಾಲೆ ಸೇವೆ, ವಿವಿಧ ಗ್ರಾಮಗಳಿಂದ ವಾದ್ಯ ಮೇಳದೊಂದಿಗೆ ದೇವಸ್ಥಾನಕ್ಕೆ ಆಗಮಿಸಿದವು.

ಸಾಯಂಕಾಲ ಜರುಗಿದ ರಥೋತ್ಸವದಲ್ಲಿ ಸಾವಿರಾರು ಜನ ಪಾಲ್ಗೊಂಡು ರಥಕ್ಕೆ ಉತ್ತತ್ತಿ, ಹಣ್ಣು, ಹೂವು ಎಸೆದು ಭಕ್ತಿಯನ್ನು ಸಮರ್ಪಿಸಿದರು.

# ಬೀದರ್ ವಿವಿಗೆ ನೇಮಕ: ಸನ್ಮಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 12 :- ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡ ಅರ್ಜುನ ಕನಕ್ ಅವರನ್ನು ವಿವಿಧ ಸಂಘಸಂಸ್ಥೆಗಳಿಂದ ನಗರದಲ್ಲಿ ಶುಕ್ರವಾರ ಸನ್ಮಾನಿಸಲಾಯಿತು.



ಕನ್ನಡ ಸಾಹಿತ್ಯ ಪರಿಷತ್ ಭಾಲ್ಕಿ ತಾಲ್ಲೂಕು ಘಟಕದ ಗೌರವ ಕಾರ್ಯದರ್ಶಿ ರಮೇಶ ಚಿದ್ರಿ, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಕಿರಣಕುಮಾರ ಕಾಮಶೆಟ್ಟಿ, ಧನ್ನೂರ(ಎಸ್) ಪಿಕೆಪಿಎಸ್ ಅಧ್ಯಕ್ಷ ಗುರುನಾಥ ಹಿಂದೊಡ್ಡಿ, ಗೋರ್ಟಾ ಪಿಕೆಪಿಎಸ್ ಅಧ್ಯಕ್ಷ ಶಾಂತಕುಮಾರ ಮತ್ತಿತರರು ಇದ್ದರು.

# ವಕ್ಫ್ ಕಾಯ್ದೆ ವಿರೋಧಿಸಿ ಮುಸ್ಲಿಮರ ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,12- ಜಿಲ್ಲೆಯ ಇಳಕಲ್ಲ ಪಟ್ಟಣದಲ್ಲಿ ಅಂಜುಮನ್ ಇಸ್ಲಾಂ ಸಂಸ್ಥೆಯ ವತಿಯಿಂದ ಮುಸ್ಲಿಂ ಬಾಂಧವರು ಶುಕ್ರವಾರ ಮಧ್ಯಾಹ್ನ ವಕ್ಫ್ ಕಾಯ್ದೆ ವಿರುದ್ಧ ಪ್ರತಿಭಟನೆ ನಡೆಸಿದರು. ಕೇಂದ್ರ ಸರಕಾರ ತಂದಿರುವ ನೂತನ ಕಾಯ್ದೆಯಿಂದಾಗಿ ಲಕ್ಷಾಂತರ ಮುಸ್ಲಿಂ ಬಾಂಧವರಿಗೆ ಅನ್ಯಾಯವಾಗುತ್ತಿದೆ. ಕೇಂದ್ರ ಸರಕಾರ ಕೂಡಲೇ ಈ ಕಾಯ್ದೆಯನ್ನು ಹಿಂದೆಗೆದುಕೊಳ್ಳಬೇಕು ಎಂದು ಅಂಜುಮನ್ ಇಸ್ಲಾಂ ಸಂಸ್ಥೆಯ ಅಧ್ಯಕ್ಷ ಉಸ್ಮಾನಗಣಿ ಹುಮ್ನಾಬಾದ್ ಹೇಳಿದರು. ಮಹಮ್ಮದ್



ಯುಸುಫ್ ಬಾಗವಾನ ಸೇರಿದಂತೆ ನೂರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು. ನಗರದ ಬೇರೆ ಬೇರೆ ಮಸೀದಿಗಳಿಂದ ಮುಸ್ಲಿಂ ಬಾಂಧವರು ತಮ್ಮ ತಮ್ಮ ಮಸೀದೆಗಳ ಮುಂದೆ ನಿಂತು ಪ್ರತಿಭಟನೆ ಮಾಡಿ ವಕ್ಫ್ ಕಾಯಿದೆ ಹಿಂದೆಗೆದು ಕೊಳ್ಳಲು ಒತ್ತಾಯಿಸಿದರು.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy. Office Ph. No: +91 9449732000.